ಪ್ರಕಾಶಕ: ಶಿವರಾಮ ಕಾರಂತ, ಪುತ್ತೂರು.

138

ಚಿತ್ರಮಯ

ದಕ್ಷಿಣ ಕನ್ನಡ

ಚಿತ್ರಮಯ ದಕ್ಷಿಣ ಕನ್ನಡ

(ಬಾಲಕರ ಭೂಗೋಲ)

ಶಿವರಾಮ ಕಾರಂತ

1934

ವಿಕ್ರಯಾಧಿಕಾರಿಗಳು:

ಬಾಸೆಲ್ ಮಿಶನ್ ಬುಕ್ ಎಂಡ್ ಟ್ರೆಕ್ಟ್ ಡಿಪೊಸಿಟರಿ, ಮಂಗಳೂರು

ಬೆಲೆ: Rs. 1 ಆಣೆ.

PRINTED AT THE DHARMA PRAKASH PRESS, MANGALORE.

ಮುನ್ನುಡಿ

ಚಿಕ್ಕಂದಿನಲ್ಲಿ "ಭೂಗೋಲ"ವೆಂದರೆ ನಮಗೆಲ್ಲ ಕಂಡುಬರುತ್ತಿದ್ದ ಜಿಗುಪ್ಸೆಯೇ ನನ್ನನ್ನು ಈ ನವೀನ ಹಾದಿಗೆ ತಳ್ಳಿದೆ. ಇದು ನವೀನವೆಂದರೆ ನಮಗೆ ಮಾತ್ರ. ಯುರೋಪು ಅಮೇರಿಕ ಮೊದಲಾದ ಮುಂದರಿದ ದೇಶಗಳಲ್ಲಿ ಪಠ್ಯಪುಸ್ತಕಗಳೆಂದರೆ ತುಂಬ ರಸವತ್ತಾಗಿರುವುವು. ಅದರಲ್ಲೂ ಭೂಗೋಲವೆಂದರೆ—ಕಾದಂಬರಿಯನ್ನು ಓದಿದಂತೆ. ಆದರೆ ನಮ್ಮ ದೇಶದಲ್ಲಿ ಭೂಗೋಲವೆಂದರೆ—ಹೆಸರು, ಸಂಖ್ಯೆಗಳಿಂದ ತುಂಬಿದ ಒಂದು ಸಹಸ್ರ ನಾಮಾವಳಿ. ಚಿಕ್ಕ ಮಕ್ಕಳಿಗೆ ಅದರಲ್ಲಿ ಮಮತೆಯುಂಟಾಗುವುದೆಂತು?

ಚಿಕ್ಕಮಕ್ಕಳ ಮನಸ್ಸನ್ನು ಸೆಳೆಯುವಂತೆ ಕಥಾನಕವಾಗಿ ಬರವಣಿಗೆಯಿರಬೇಕೆಂದು ನನ್ನ ಆಸೆ. ಅದನ್ನಿಲ್ಲಿ ಯತ್ನಿಸಿರುತ್ತೇನೆ. ಅದರ ಜತೆಯಲ್ಲಿ ಈಗಿನ ಮುದ್ರಣದಲ್ಲಿನ ನವೀನ ಸಾಹಸವನ್ನು ಬಳಸಿಕೊಳ್ಳಬೇಕು. ಚಿತ್ರಗಳೆಂದರೆ ಮಕ್ಕಳಿಗೆ ತುಂಬಾ ಇಷ್ಟ. ಅಂಥಾ ಚಿತ್ರಗಳನ್ನು ಕೆಡಿಸದೆ ಮುದ್ರಿಸುವುದೂ ಕಷ್ಟದ ಕೆಲಸ. ಸಾವಿರಾರು ರೂಪಾಯಿಗಳ ವಿನಿಯೋಗದಿಂದ ಈ ಗ್ರಂಥದ ಚಿತ್ರಗಳಿಗೆ "ಫೋಟೊಗ್ರೆವ್ಯೂರ್" ಮುದ್ರಣವನ್ನು ಈ ಚಿತ್ರಮಾಲಿಕೆಗೆ ಜರ್ಮನಿಯಲ್ಲಿ ಒದಗಿಸಿಕೊಟ್ಟಿದೆ. ಚಿತ್ರಗಳನ್ನು ಸಂಗ್ರಹಿಸುವಾಗಲೂ—ಅವು ಮಕ್ಕಳಿಗೆ ಭೂಗೋಲದ ಶಿಕ್ಷಣವನ್ನು ತನ್ನಂತೆ ಕೊಡಬೇಕೆಂದು ಯತ್ನಿಸಿದ್ದೇನೆ. ಬೆಟ್ಟಗಳು— ನದಿಗಳು, ಅವುಗಳು ಹರಿಯುವ ಬಗೆ— ನಮ್ಮಲ್ಲಿನ ಪ್ರಾಣಿವರ್ಗ— ಜಾತಿಮತಗಳು – ಕೃಷಿ, ಕೈಗಾರಿಕೆಗಳು— ವ್ಯಾಪಾರಕ್ಕೆ ಅವಶ್ಯವಾದ ಹಾದಿ, ಬಂಡಿಗಳು – ನಮ್ಮ ಸಮಾಜದ ವಿನೋದ, ವಿಶ್ರಾಂತಿಗಳು — ಐತಿಹಾಸಿಕ ಸ್ಥಳಗಳು— ರಾಜಕೀಯ ವಿಭಾಗಗಳು— ಇವೆಲ್ಲ ಕ್ರಮವಾಗಿ ಬರುವಂತೆ ಚಿತ್ರಮಾಲಿಕೆಯಿದೆ. ಉಪಾಧ್ಯಾಯರು ಬರೇ ಅವನ್ನೇ ಬಣ್ಣಿಸಿದರೂ ಭೂಗೋಲ ಕಲಿಸಿದಂತಾಗುವುದು. ಈ ಕೆಲಸವನ್ನು ಸ್ವಲ್ಪಮಟ್ಟಿಗೆ ಗದ್ಯಭಾಗವೂ ಮಾಡುವುದು.

ಇದರಲ್ಲಿ ಸೇರಿಸಿದ ನಕ್ಷೆಗಳು ಹೊಸ ಹಾದಿಯಲ್ಲಿ ಬರೆಯಲ್ಪಟ್ಟವೆ. ಈ ಪುಸ್ತಕದ ಕುಂದುಕೊರತೆಗಳನ್ನು ತೋರಿಸಲು ನೆರವಾದ ಕೆಲವು ಹಳ್ಳಿಯ ಉಪಾಧ್ಯಾಯರಿಗೂ, ಗೆಳೆಯರಿಗೂ, ಕೆಲವು ವನ್ಯಮೃಗಗಳ ಚಿತ್ರಸಂಗ್ರಹಕ್ಕೆ ನೆರವಾದ ಮೈಸೂರು ಮೃಗಾಲಯದ ಅಧಿಕಾರಿಗಳಿಗೂ ನಾನು ಋಣಿಯು.

ಮಂಗಳೂರು,
ತಾ. 21-12-'33.

ಇತಿ,
ಶಿವರಾಮ ಕಾರಂತ

ಅನುಕ್ರಮಣಿಕೆ

ಪಾಠ	ವಿಷಯ	ಪುಟ
೧.	ಸಹ್ಯಾದ್ರಿಯ ಬೆಡಗು	1
೨.	ಬೆಟ್ಟದಿಂದ ಬಯಲಿಗೆ	4
೩.	ನೀರಿನ ಯಾತ್ರೆ	6
೪.	ಕಾಡಿನ ಒಡೆಯರು	9
೫.	ಇನ್ನೊಂದು ದಿನ	11
೬.	ಪ್ರಾಣಿಗಳ ಬಳಗ	12
೭.	ಕಿಟ್ಟುವಿನ ಗೆಳೆಯರು	13
೮.	ಹೊಟ್ಟೆ ತುಂಬಿಸಿಕೊಳ್ಳುವ ಉಪಾಯಗಳು	16
೯.	ಹಳ್ಳಕ್ಕೆ ಅದರ ಹಾದಿ; ಹಳ್ಳಿಗೆ ನಮ್ಮ ಹಾದಿ	21
೧೦.	ನೇಗಿಲೂ ಬೇಕು; ತ್ರಾಸೂ ಬೇಕು	24
೧೧.	ಸಂತೆಯ ಯಾತ್ರೆ	27
೧೨.	ಹಳ್ಳಿಯ ವಿನೋದಗಳು	28
೧೩.	ನಮ್ಮ ಊರಿನ ಕಥೆ	32
೧೪.	ನಮ್ಮ ಜಿಲ್ಲೆ	35



1. ಕೂನಳ್ಳಿ (ಗಂಗಾನಾಡು) ಜಲಪಾತ. 2. ಕುಟಜಾದ್ರಿ ಶಿಖರ. 3. ಹೊಸಂಗಡಿ ಜಲಪಾತ. 4. ಮೂರ ಸ್ವಾಮಿ. 5. ಸೈಂಟ್ ಮೇರಿ ದ್ವೀಪಗಳು. 6. ಬಾದರಗಡ. 7. ಕಾರ್ಕಳ. 8. ಕಾರಿಂಜ. 9. ಜಮಾಲಗಡ. 10. ನೇತ್ರಾವತಿಯ ಧುಮುಕಾಟ (ಧರ್ಮಸ್ಥಳ). 11. ಬಂಡಾಜೆ ಜಲಪಾತ. 12. ಕುದುರೆಮುಖ. 13. ಶಿರಿಮರಿಗುಪ್ಪೆ. 14. ಕುಮಾರಪರ್ವತ. 15. ಬ್ರಹ್ಮಗಿರಿ (ತಲಕಾವೇರಿ).

ನದಿಗಳು. 1. ಬೈಂದೂರು. 2. ಹಳ್ಳಿಗೇರಿ. 3. ಗಂಗೊಳ್ಳಿ. 4. ಸೀತಾನದಿ, ಸುವರ್ಣನದಿ. 5. ಮಂಜೇಶ್ವರ. 6. ಮುಲ್ಕಿ ಹೊಳೆ. 7. ಗುರುಪುರ-ನೇತ್ರಾವತಿ. 8. ಉಪ್ಪಳ. 9. ಸೀರೆ. 10. ಪಯಸ್ವಿನಿ. 11. ಚರ್ನತ್ತೂರು.

ಚಿತ್ರಮಯ ದಕ್ಷಿಣ ಕನ್ನಡ

೧. ಸಹ್ಯಾದ್ರಿಯ ಬೆಡಗು

ಕಿಟ್ಟುವು ನಿತ್ಯ ಮನೆಯ ಹೊರಪಡಸಾಲೆಯಲ್ಲಿ ರಾತ್ರಿ ಮಲಗುತ್ತಾನೆ. ಹಿರಿಯರು ಅವನಿಗೂ ಮೊದಲೇ ಎದ್ದು ಕೆಲಸಕ್ಕೆ ಹೋಗುವರು. ಕಿಟ್ಟುವು ಮನೆಯ ಪ್ರೀತಿಯ ಮಗುವಾದುದರಿಂದ ಯಾರೂ ಅವನನ್ನು ಎಚ್ಚರಮಾಡುವುದಿಲ್ಲ. ಅವನು ಹಾಸುಗೆಯಲ್ಲೇ ನಿದ್ದೆ ಕಳೆದ ಮೇಲೂ ಮಲಗುವನು. ಮನೆಯ ಬೇಲಿಯಿಂದ ಹಕ್ಕಿಗಳ ಹಾಡು ಕೇಳಿಸತೊಡಗುವುದು. ಅವನೂ ಅವುಗಳಂತೆ ಚಿಲಿಪಿಲಿ ಮಾಡುವನು. ಕತ್ತಲು ಸರಿಯುತ್ತ ಬರುವುದು. ಪಡಸಾಲೆ ಮುಖವು ಮೂಡು ದಿಕ್ಕಿಗಿದೆ. ಆದುದರಿಂದ ಅವನಿಗೆ ಪೂರ್ವದಲ್ಲಿ—ಮುಂಜಾನೆಯ ಕೆಂಪು, ಅರಿಸಿನ, ಕಿತ್ತಿಳೆ ಬಣ್ಣಗಳ ಚಿತ್ರಗಳು ಕಾಣಿಸುವುವು. ಅವು ಹೆಚ್ಚಿದಂತೆ ಅದರ ಬೆಳಕಿನಲ್ಲಿ ನೀಲಬೆಟ್ಟದ ಸಾಲುಗಳು ಎದ್ದು, ಮೂಡಿ ಕಾಣಿಸುವುವು. ಸೂರ್ಯನು ಮೂಡಿ ಬಂದನೆಂದರೆ ಆ ಬೆಟ್ಟದ ಸಾಲಿಗೆ ಇನ್ನಷ್ಟು ಚೆಲುವು. ಸಂಜೆಯಾಯಿತೆಂದರೆ ಅವೇ ಬೆಟ್ಟಗಳ ಮೇಲೆ ಬಣ್ಣದ ಮೋಡಗಳು ಓಡಾಡುವುದನ್ನು ಕಾಣಬಹುದು. ಸೆಕೆಗಾಲ ಬರಲು, ಬೆಟ್ಟದ ಸಾಲಿನ ನೀಲವು ತುಸು ಕಡಿಮೆಯಾಗಿ, ಬೂದುಬಣ್ಣವಾಗಿ ಕಾಣಿಸುವುದು. ಕತ್ತಲು ಕವಿಯಲು, ಅವೇ ಬೆಟ್ಟಗಳ ಅಂಚಿನಲ್ಲಿ ದೀಪೋತ್ಸವವನ್ನು ಕಾಣಬಹುದು. ಕಾಡುಗಳು ಹೊತ್ತಿಕೊಂಡು, ಸಾಲು ಸಾಲಾಗಿ ಉರಿಯುತ್ತಿರುವ ಚಿತ್ರವು, ಉದ್ದಕ್ಕೂ ಹಾಸಿ ಹರಿದುಹೋಗುವ ಕಿಚ್ಚಿನ ಹಾವಿನಂತೆ ಕಾಣಿಸುತ್ತದೆ! ಇವನ್ನೆಲ್ಲಾ ಕಂಡಾಗಲೆಲ್ಲ ಕಿಟ್ಟುವಿನ ಮನಸ್ಸು ಉಬ್ಬಿ ಕುಣಿಯುವುದು. ಮೂಡುದಿಕ್ಕಿನ ಬೆಟ್ಟದ ಸಾಲನ್ನು ಬೆಳಗ್ಗೆ ಒಮ್ಮೆ, ಸಂಜೆಯೊಮ್ಮೆ ಅವನು ಕಾಣುತ್ತಾನೆ. ಒಂದು ದಿನ ಅಲ್ಲಿಗೆ ಹೋಗಬೇಕು, ಆ ಮೋಡಗಳಂತೆ ತಾನೂ ಅಲ್ಲಿ ಕುಣಿಯಬೇಕು ಎಂದು ಅವನ ಆಸೆ!

ಒಂದು ದಿನ ಅವನ ಆಸೆಯು ತೀರ ಬಲವತ್ತರವಾಯಿತು. ಹೇಗಾದರೂ ಮಾಡಿ ಆ ಸಹ್ಯಾದ್ರಿಯ ತುದಿಯನ್ನೇರಬೇಕು ಎಂದು ನಿಶ್ಚಯಿಸಿದನು. ತನ್ನ ಮನಸ್ಸಿನ ನಿಶ್ಚಯವನ್ನು ರಾಮುವಿಗೂ, ಪುಟ್ಟುವಿಗೂ ಹೇಳಿದನು. ಅವರಿಬ್ಬರೂ ಇವನಿಗೂ ಹೆಚ್ಚಿನ ಉತ್ಸಾಹವನ್ನು ತೋರಿದರು. ಹೋಗುವುದೆಂದು ನಿಶ್ಚಯವಾಯಿತು. ಎಲ್ಲಿಗೆ ಹೋಗಬೇಕು, ಯಾವ ಹಾದಿಯೆಂದು ವಿಚಾರಿಸಿದರು. ಗೋಡೆಯಂತೆ ಒಮ್ಮೆಗೇ ಎದ್ದುನಿಂತ ಆ ಬೆಟ್ಟದ ಸಾಲು ಸರಾಸರಿ ೩೦೦೦ ಅಡಿಗಳಷ್ಟು ಎತ್ತರವಾಗಿವೆ! ಅಲ್ಲಲ್ಲಿನ ಕೆಲವು ಶಿಖರಗಳು ೪೦೦೦ ಅಡಿಗಳಿಗೂ ಮಿಕ್ಕಿವೆ. ಕುದುರೆಮುಖವು ೬,೨೧೫ ಅಡಿಯಷ್ಟು ಎತ್ತರ (ಚಿ. 1).

ಕುಟಚಾದ್ರಿ (ಚಿ. 3), ಕುಮಾರಪರ್ವತಗಳ (ಚಿ. 2) ಶಿಖರಗಳು ೪೦೦೦ ಅಡಿ ಮೀರಿವೆ. ಅವರು ಹಾದಿಯನ್ನು ತಿಳಿದುಕೊಂಡರು. ಮೂವರೂ ಪಯಣ ಹೊರಟರು. ಯಾರೂ ಬೆಟ್ಟವೇರಿದವರಲ್ಲ. ಆಗ ಸೆಕೆಗಾಲ. ಹೊರಡುವಾಗ, ತಮಗೆ ಹಾದಿ ಸಾಗಲು ಬೇಕಾಗುವ ಬಟ್ಟೆಬರೆಗಳನ್ನೂ, ತಿಂಡಿ ತಿನಿಸುಗಳನ್ನೂ ಸಂಗ್ರಹಿಸಿಕೊಂಡಿದ್ದರು. ಕುದುರೆಮುಖವನ್ನು ಏರುವ ನಿಶ್ಚಯಮಾಡಿ, ಮೋಟಾರನ್ನು ಏರಿ, ಬೆಳ್ತಂಗಡಿಗೆ ಬಂದರು. ಅಲ್ಲಿಂದ ಅದೇ ದಿನ ಕಾಲುನಡೆಯಾಗಿ ಎಂಟು ಮೈಲಿ ದೂರದ ನಾವೂರು ಎಂಬ ಹಳ್ಳಿಯನ್ನು ಸೇರಿದರು. ಮರುದಿನಕ್ಕೆ ಅವರ ಬೆಟ್ಟದ ಪಯಣ.

ಸೂರ್ಯೋದಯವಾಗುವಾಗ ಎಲ್ಲರೂ ಪಯಣಕ್ಕೆ ಅಣಿಯಾದರು. ನಾವೂರಲ್ಲಿ ನಿಂತು ಬಡಗುದಿಕ್ಕನ್ನು ನೋಡಲು, ಉದ್ದಕ್ಕೆ ಚಾಚಿನಿಂತ ಕುದುರೆಮುಖವು ಕಾಣಿಸುವುದು. ಆಗಾಗಲೇ ಬಿಳಿ ಮೋಡಗಳು ಅದನ್ನು ಹಾಸಿ, ಹೊದಿಸಿ ಕುಣಿಯುತ್ತಿದ್ದುವು. ಕಿಟ್ಟುವಿನ ಮನಸ್ಸಿಗೆ ಈ ಬೆಟ್ಟವನ್ನು ಇನ್ನು ಅರೆ ತಾಸು, ಒಂದು ತಾಸಿನೊಳಗೆ ಏರಬಹುದು ಎಂದು ತೋರಿತು.

ಒಂದು ಕಾಲುಹಾದಿಯನ್ನು ಹಿಡಿದು ಬೆಟ್ಟವನ್ನೇರಲು ಮುಂದಾದರು. ದಟ್ಟವಾದ ಕಾಡಿನಲ್ಲಿ ಅಂಕುಡೊಂಕಾಗಿ, ಏರು ಏರಾಗಿ ಸಾಗುವ ಸುರುಳಿ ಹಾದಿ! ಇಕ್ಕಡೆಯಲ್ಲಿ ಎತ್ತರವಾದ ಮರಗಳು! ನಾನಾ ತರದ ಪಶುಪಕ್ಷಿಗಳ ಧ್ವನಿಯು! ಹೊತ್ತು ಮೂಡಿ ಬಲು ಸಮಯವಾದರೂ ಬಿಸಿಲಿನ ಜಳವೇ ಇಲ್ಲ. ಏರುತ್ತ ಹೋಗುವಾಗ ಉಸಿರು ಒತ್ತಿ ಬರುತ್ತದೆ! ಈಗಲೇ ಎದೆಯೊಡೆಯುವುದೆಂಬಷ್ಟು ಆಯಾಸ! ಬಲು ಕಷ್ಟದಿಂದ ಎರಡು ಮೂರು ತಾಸು ಏರಿಹೋಗಲು, ಕಾಡಿನ ತೊಪ್ಪಲು ಕಳೆದು ಒಂದು ಪರ್ವತಶ್ರೇಣಿಯ ಮೇಲೆ ಬಂದರು. ಎಲ್ಲರೂ ಉಸ್ಸೆಂದು ನಿಂತರು. ಸುತ್ತ ನೋಡಿದರೆ— ಏನು ಹೇಳಲಿ! ಒಂದು ಕಡೆ ಇನ್ನೂ ಎತ್ತರವಾಗಿ ನಿಂತಿರುವ ಪಶ್ಚಿಮ ಘಟ್ಟ. ಮತ್ತೊಂದು ಮಗ್ಗುಲಿಗೆ ಆಳವಾದ ಕಣಿವೆ. ಎಷ್ಟೋ ದೂರ ಚಾಚಿರುವ ಗದ್ದೆ, ಬಯಲು, ಬೆಟ್ಟಗಳ ಸಾಲುಗಳು!

ಎಲ್ಲರ ಮನಸ್ಸಿಗೂ ಕುದುರೆಮುಖ ಬಂದಿರಬೇಕೆಂಬ ಹಿಗ್ಗು. ಆದರೆ ಮತ್ತೂ ಮುಂದಕ್ಕೆ ಆ ಹಾದಿಯು ಬೆಟ್ಟದ ಮಗ್ಗುಲಲ್ಲೇ ಸಾಗುತ್ತಿದೆ. ಕೆಳಕ್ಕೆ ನೋಡಿದರೆ ಅಗಾಧ ಕಣಿವೆ! ಹಾದಿಯೆಷ್ಟು ಸಾಗಿತು ಎಂದು ಕೇಳಲು ಜನಸಂಚಾರವಿಲ್ಲ. ಬಾಯಾರಿದರೆ ನೀರೂ ಇಲ್ಲ. ಮೈಯು ಆಯಾಸದಿಂದ ದಣಿದು ಮುದ್ದೆಯಾಯಿತು. ನಿಜ— ಆದರೆ ಮನಸ್ಸು ಇನ್ನಿಲ್ಲದಷ್ಟು ಸಂತೋಷದಲ್ಲಿದೆ! ಅವರು ಮುಂದೆ ಸಾಗಿದರು. ಈಗ ಗಿಡಮರಗಳ ಸಾಂದ್ರತೆಯು ಕಡಿಮೆಯಾಗಿ, ಎಲ್ಲೆಲ್ಲೂ ಎತ್ತರದ ಹುಲ್ಲು ಪೊದೆಗಳು ಕಾಣುವುವು. ಎಲ್ಲವೂ ಒಣಗಿಹೋಗಿವೆ! ಕೆಲವು ಭಾಗಗಳು ಸುಟ್ಟು ಮಸಿಯಾಗಿವೆ! ಅವುಗಳ ಎಡೆಯಲ್ಲಿ ಕೆಲವು ದೂರ ಗೋಡೆಯೇರಿದಂತೆ ನೇರಾಗಿ ಬೆಟ್ಟವನ್ನು ಏರಬೇಕು.

ಆದರೆ ಮತ್ತೂ ಮುಗಿಯದ ಕಾಲುಹಾದಿಯಿದೆ. ಅತಿ ಕಷ್ಟದಿಂದ ಅವರು ೧೦-೧೨ ಮೈಲಿ ಹಾದಿ ಸಾಗಿ, ನಡುಮಧ್ಯಾಹ್ನಕ್ಕೆ ಒಂದು ಮಟ್ಟ ಭೂಮಿಯನ್ನು ಸೇರಿದರು. ಅಲ್ಲಿ ಹರಿಯುತ್ತಿದ್ದ ಹಳ್ಳದ ನೀರನ್ನು ಕುಡಿದು, ನೆರಳಿನಡಿಯಲ್ಲಿ ವಿಶ್ರಮಿಸಿಕೊಂಡರು. ಫಲಾಹಾರವೂ ಆಯಿತು, ಆಯಾಸದಿಂದ ನಿದ್ರೆಯೂ ಬಂದಿತು.

ಆಯಾಸವು ಕಳೆಯಲು, ತಿರುಗಿ ಆ ಒಂದೇ ಒಂದು ಕಿರುದಾರಿಯನ್ನು ಹಿಡಿದು ಪರ್ವತಾವಳಿಗಳ ಅಂಚಿನಲ್ಲಿ ಮುಂಬರಿದು ಹೋದರು. ಮತ್ತೂ ಏರುವ ಹಾದಿಯೇ. ಅಲ್ಲಲ್ಲಿ ನಡುವಿನಲ್ಲಿ ಬೋಳು ಬೆಟ್ಟದ ಚೆಲುವನ್ನು ಹೆಚ್ಚಿಸುವ ಸಸ್ಯಭರಿತ ಇಳಕಲುಗಳು. ಈ ಹಾದಿಯಾಗಿ ೫ ಮೈಲು ಸಾಗಲು, ಅವರ ಆಸೆಯ ಕುಡಿಯು ಕಾಣಿಸಿತು! ಅಲ್ಲೇ ಮೇಲೆ ಕಾಣಿಸಿದ ಶಿಖರವನ್ನು ಕಂಡು, ಇದೇ ಕುದುರೆಮುಖವೆಂದರು! ಓಡಿ ಓಡಿ ಸಾಗಿದರು. ಆದರೂ ತುತ್ತ ತುದಿಯನ್ನು ಸೇರಲು ಇನ್ನೂ ಕಾಲು ತಾಸು ಹಿಡಿಯಿತು. ಶಿಖರವೆಂದರೆ ಬಲು ಅಗಲಕಿರಿದಾದ ಭೂಮಿ. ಮುಂದೆ ನಡೆದರೆ, ಒಮ್ಮೆಗೇ ಸಾವಿರಾರು ಅಡಿ ಇಳಿಯುವ ಪ್ರಪಾತ!

ಪಡುವಣ ದಿಕ್ಕಿನ ಬೆಡಗನ್ನು ಏನೆನ್ನಲಿ? ನೂರಾರು ಮೈಲುಗಳ ದೂರ ಚಾಚಿರುವ ನಮ್ಮ ಜಿಲ್ಲೆಯು ರತ್ನಕಂಬಳಿಯಂತೆ ಕಾಣಿಸುತ್ತಿದ್ದಿತು. ಎಷ್ಟೋ ದೊಡ್ಡ ದೊಡ್ಡ ನದಿಗಳು ಥಳಥಳಿಸುವ ಸರಿಗೆಗಳಂತೆ ಕಾಣಿಸುತ್ತ, ಸಮುದ್ರವನ್ನು ಹುಡುಕಿ ಹೋಗುತ್ತಿದ್ದುವು. ಸಮುದ್ರವು ಹೊಳೆಯುವ ಖಡ್ಗದ ಅಂಚಿನಂತೆ ಥಳಥಳಿಸುತ್ತಿತ್ತು. ಕಿಟ್ಟು, ಪುಟ್ಟು, ಎಲ್ಲರೂ ತಾವೊಂದು ಸ್ವರ್ಗದಲ್ಲಿರುವೆವೆಂದು ತಿಳಿದರು. ಸಂಜೆಯಾಯಿತು. ಪಡು ದಿಗಂತವು ಕೆಂಪಡರಿತು. ಸೂರ್ಯನ ಚೆಂಡು ಮೆಲ್ಲಗೆ ಕಡಲಲ್ಲಿ ಮುಳುಗುತ್ತ ಬಂದಿತು. ಅರ್ಧವಾಗಿ, ಹೋಳಾಗಿ, ಕಿರಿದಾಗಿ, ಕೊನೆಗೊಂದು ಕಿಡಿಯಾಗಿ ಸೂರ್ಯನು ಕಣ್ಮರೆಯಾದನು. ಎಂತಹ ನೋಟ! ಎಂತಹ ಶಾಂತಿ!

ಕತ್ತಲು ಕವಿಯುವ ಮುಂಚೆ ಅವರೆಲ್ಲರು ಸಮೀಪದ ಬಂಗಲೆಯೊಂದನ್ನು ಸೇರಿದರು. ಬಯಲಿನ ಸೆಕೆಯೆಲ್ಲಿ? ಅಲ್ಲಿನ ಥಂಡಿಯೆಲ್ಲಿ? 'ಹಾಯ್!' ಎಂದು ಉಸಿರು ಬಿಡುತ್ತ. ರಾತ್ರಿ ಸುಖನಿದ್ರೆ ಬರುವುದೆಂದು ಎಣಿಸಿದರು. ಆದರೆ ತುಸು ಹೊತ್ತಿನಲ್ಲಿ ಗಾಳಿ ಬೀಸಲು ತೊಡಗಿತು. ಗಾಳಿಯೊಂದಿಗೆ ಮೋಡವೂ ಬೀಸಿ ಬಂದು, ಅವರ ಮುಖದ ಮೇಲೆ ಬಡಿಯಿತು. ತುಂಬಾ ಚಳಿಯಾಗತೊಡಗಿತು. ಅಲ್ಲಲ್ಲಿ ಬಿದ್ದ ಕಟ್ಟಿಗೆ ಚೂರುಗಳಿಂದ ಅಗ್ಗಿಷ್ಟಿಕೆಯೊಂದನ್ನು ಉರಿಸಿ, ಮಲಗಿ ನಿದ್ದೆಹೋದರು. ಬೆಳಗಿನ ಚಳಿಗೆ ಎಚ್ಚರವಾಯಿತು.

ಬೆಟ್ಟದ ತುದಿಯಿಂದ ಮೂಡು ದಿಕ್ಕನ್ನು ನೋಡಿದರು. ಕಣಿವೆಗಳಲ್ಲೆಲ್ಲ ಬಿಳಿ ಮೋಡಗಳು ತುಂಬಿದ್ದುವು. ಅವುಗಳ ಎಡೆಯಲ್ಲಿ ನೀಲ ಶಿಖರಗಳು ತಲೆಯೆತ್ತಿ ನೋಡುತ್ತಿದ್ದುವು. ಎಂದೂ ಮರೆಯದ ಚಿತ್ರ! ಅಲ್ಲಿನ ಸೂರ್ಯೋದಯದ ಸೊಗಸು ಹೇಳಿ

ತೀರದು. ಬಿಸಿಲೇರುತ್ತ ಬಂದಂತೆ, ಮೋಡಗಳು ಅತ್ತಿತ್ತ ಚೆದರಿ, ತಿರುಗಿ ಬೆಟ್ಟಗಳ ಸಾಲು ಕಾಣಿಸತೊಡಗುವುದು. ಅಲ್ಲಿನ ಚೆಲುವಿನ ಹಂಬಲದಿಂದ ಅವರು ಇನ್ನೊಮ್ಮೆ ಕೊಲ್ಲೂರಿಗೆ ಸಮೀಪದ ಕುಟಚಾದ್ರಿ ಶಿಖರವನ್ನೂ, ಸುಬ್ರಹ್ಮಣ್ಯಕ್ಕೆ ಸಮೀಪದ ಕುಮಾರ ಪರ್ವತವನ್ನೂ ಏರಲು ಹೋಗಿದ್ದರು. ಒಂದಕ್ಕಿಂತ ಮತ್ತೊಂದು ಚೆಲುವಾಗಿತ್ತು. ಒಂದು ಸಾರಿ ಹೋದರೆ, ತಿರುಗಿ ತಿರುಗಿ ಹೋಗಿಬರುವ ಆಸೆಯುಂಟಾಗುವುದು.

ಇಂತಹ ಎಷ್ಟೆಷ್ಟೋ ಶಿಖರಗಳಿಂದಲೂ, (ಚಿ. 4) ಬೆಟ್ಟದ ಸಾಲುಗಳಿಂದಲೂ ಕೂಡಿದುದು ನಮ್ಮ ಪಶ್ಚಿಮ ಘಟ್ಟ. ಆದರೆ ಎಲ್ಲಾ ಶಿಖರಗಳಿಗೂ ಹೋಗುವ ಹಾದಿಯಿಲ್ಲ. ದಟ್ಟವಾದ ಕಾಡು ಕಡಿದು ಸಾಗುವುದು ಸುಲಭವೇ?

೨. ಬೆಟ್ಟದಿಂದ ಬಯಲಿಗೆ

ಬೆಟ್ಟವನ್ನು ಏರುವ ಆಸೆಯಿಂದ ಕಿಟ್ಟು, ಪುಟ್ಟು, ರಾಮುರು ಹೋಗುವಾಗ ತಮ್ಮ ಮನೆಯಿಂದ ಆ ಪರ್ವತಶ್ರೇಣಿಯ ವರೆಗಿನ ನೋಟಗಳನ್ನು ನೋಡಿದುದು ಕಡಿಮೆ. ಆದರೆ ಮರಳಿ ಬರುವಾಗ ದಾರಿಯುದ್ದದ ಬಲು ರಮಣೀಯವಾದ ನೋಟಗಳನ್ನು ಕಂಡರು.

ಸಹ್ಯಾದ್ರಿಯು ಒಂದೇ ಉದ್ದಳತೆಯಿಂದ ಬಿದ್ದಿರುವ ಬೆಟ್ಟವಲ್ಲ. ಅಂಕುಡೊಂಕಾಗಿ, ಹರುಕುಮುರುಕಾಗಿ ನಮ್ಮ ಜಿಲ್ಲೆಯ ಆ ತುದಿಯಿಂದ ಈ ತುದಿಯ ತನಕವೆಂಬಂತೆ ಬಿದ್ದಿರುವ ಶ್ರೇಣಿ. ಶಿಲೆಯೇ ಕರಗಿ, ಎರಕವಾಗಿ ಬಿದ್ದುದೆಂದರೂ ಎನ್ನಬಹುದು. ಈ ಶಿಲೆಯ ಎರಕವು ಎಷ್ಟೋ ಕಡೆಗಳಲ್ಲಿ ಪದರುಪದರಾಗಿ ಕಾಣುವುದೂ ಉಂಟು. ಆದರೆ ಲಕ್ಷಾಂತರ ವರುಷಗಳಲ್ಲಿ ಮಳೆ ಬಿಸಿಲುಗಳು ಬಿದ್ದು, ಅದರ ಎಷ್ಟೋ ಭಾಗಗಳು ಸವೆದು ಮಣ್ಣಾದುದರಿಂದ, ಆ ನೆಲದ ಮೇಲೆ ನಾನಾ ವಿಧದ ಗಿಡಮರಗಳು ಬೆಳೆದಿವೆ.

ಈ ಘಟ್ಟಗಳ ಮೈ ಅಲ್ಲಲ್ಲಿ ಬೋಳಾಗಿ ಕಾಣಿಸಿದರೂ, ಅದರಲ್ಲಿ ತುಂಬಾ ಎತ್ತರವಾದ ಹುಲ್ಲಾದರೂ ಬೆಳೆಯುವುದು. ಇಲ್ಲಿನ ಕಾಡುಪ್ರದೇಶವು ತೀರ ಪ್ರಯೋಜನಕಾರಿಯಾಗಿದೆ (ಚಿ. 6). ಅಲ್ಲಿನ ಮರಗಳೆಂತಹವು! ನಾಲ್ಕು ಜನರು ಅಪ್ಪಿ ಹಿಡಿಯಲಾರದಂತಹ ೧೦೦—೨೦೦ ಅಡಿಗಳಷ್ಟು ಎತ್ತರದವು! ಅವುಗಳ ಎಡೆಯಲ್ಲಿ ಸ್ವೇಚ್ಛೆಯಿಂದ ಹರಡಿ ಹಬ್ಬಿರುವ ಬೀಳಲು, ಪೊದೆಗಳೆಷ್ಟು! ಬೆತ್ತದ ಬೀಳಲುಗಳಂತೂ ಹಬ್ಬಿ ಬೆಳೆಯದ ಸ್ಥಳವೇ ಇಲ್ಲ. ಈ ಘಟ್ಟಗಳಲ್ಲಿ ಪ್ರತಿವರುಷ ಬಿರುಗಾಳಿಗೆ ಮುರಿದು ಬೀಳುವ ಮರಗಳನ್ನು ಸಾಗಿಸುವುದು ಸಾಧ್ಯವಿದ್ದರೆ ನಮ್ಮ ಊರಿಗೆ ಲಕ್ಷಾಂತರ ರೂಪಾಯಿಗಳ ಲಾಭವಿದೆ.

ಪಶ್ಚಿಮ ಘಟ್ಟಗಳಿಂದ ಕವಲೊಡೆದು ಕರಾವಳಿಯ ಕಡೆಗೆ ಚಾಚಿದ ಗುಡ್ಡಬೆಟ್ಟಗಳು ಅಷ್ಟೇ ಎತ್ತರವಾಗಿಲ್ಲದಿದ್ದರೂ, ಹೆಚ್ಚಿನವು ಗಿಡಮರಗಳಿಂದ ತುಂಬಿವೆ. ಇಂತಹ ಪ್ರದೇಶಗಳಿಂದ ಮರಗಳನ್ನು ಸಾಗಿಸುವ ಕೆಲಸವಾದರೂ ಸುಲಭವಲ್ಲ. 'ಬಂಟ

ಮಲೆ'ಯು (ಚಿ. 5) ಅಂತಹ ಒಂದು ಎತ್ತರದ ಬೆಟ್ಟ. ನಮ್ಮ ಜಿಲ್ಲೆಯ ಉದ್ದಕ್ಕೂ ಈ ರೀತಿಯ ಕಾಡುಗುಡ್ಡಗಳಿವೆ. ಪಡುವಿಗೆ ಬಂದಂತೆ, ಈ ಸೆರಗುಗಳ ಎತ್ತರವೂ ಕಡಿಮೆಯಾಗುತ್ತ ಬರುವುದು. ಅಲ್ಲದೆ, ಅಲ್ಲಿನ ಕಾಡುಗಿಡಗಳ ಸಮೃದ್ಧಿಯು ಕಡಿಮೆಯಾಗುತ್ತ ಬಂದು ಸಾಮಾನ್ಯವಾಗಿ ಬೋಳುಗುಡ್ಡಗಳಂತೆ ಕಾಣಿಸುವುವು. ಇಂತಹ ಚಿಕ್ಕಪುಟ್ಟ ಬೆಟ್ಟಗಳಲ್ಲಿ ಕರಡ ಹುಲ್ಲೊಂದಲ್ಲದೆ ಇನ್ನೇನೂ ಬೆಳೆಯುವುದಿಲ್ಲ. ಈ ರೀತಿಯ ಗುಡ್ಡಗಳು (ಚಿ. 7) ಪಡು ಸಮುದ್ರದ ತಡಿಯ ತನಕವೂ ಹರಡಿಕೊಂಡಿವೆ. ಹೀಗಾಗಿ ನಮ್ಮ ನಾಡಿನಲ್ಲಿ ಬಯಲು ಭೂಮಿಯೆಂಬುದೇ ಇಲ್ಲ. ಈ ಗುಡ್ಡಗಳ ಎಡೆಗಳಲ್ಲಿನ ಕಣಿವೆಗಳನ್ನು ಕಡಿದು, ಮಟ್ಟವಾಗಿ ಮಾಡಿಕೊಂಡು, ಹೊಲಗದ್ದೆಗಳನ್ನು ಮಾಡಿರುತ್ತಾರೆ.

ನೋಡುವಾಗ ಈ ಬೆಟ್ಟಗಳು ನಮ್ಮ ಜೀವನಕ್ಕೆ ಹಾನಿಕರವಾಗಿ ಕಾಣುವುವು. ನಿಜಕ್ಕೂ ಅವುಗಳಿಂದ ಹಾನಿಯಿಲ್ಲವೆಂದಲ್ಲ. ಕಾಡುಗಳಲ್ಲಿನ ಮೃಗಗಳ ಕಾಟದಿಂದ ರೈತರ ಬೇಸಾಯವು ಹಾಳಾಗುವುದು. ಅಲ್ಲದೆ ಈ ಪ್ರಾಂತ್ಯವು ಚಳಿಜ್ವರದ ತವರೂರಾಗಿ ವರ್ಷಂಪ್ರತಿ ಸಾವಿರಾರು ಜನರ ಸಾವಿಗೆ ಕಾರಣವಾಗುವುದು. ಅವುಗಳಿಂದ ಅಷ್ಟು ಉಪದ್ರವಿದ್ದರೂ ಅದಕ್ಕೂ ಮೀರಿದ ಉಪಕಾರವಿದೆ.

ಪಶ್ಚಿಮ ಘಟ್ಟಗಳು ಆಕಾಶದಲ್ಲಿ ಹಾರುವ ಮೋಡಗಳನ್ನು ತಡೆದು, ತಮ್ಮ ಸಸ್ಯಾದಿಗಳಿಂದ ತಂಪುಗೊಳಿಸದಿದ್ದರೆ ಇಷ್ಟೊಂದು ಮಳೆಯು ನಮಗೆ ಸಿಗುತ್ತಿರಲಿಲ್ಲ. ಮಳೆಯು ಇಲ್ಲವಾದರೆ ನಾವು ಬೆಳೆಯುವುದೇನು? ಉಣ್ಣುವುದೇನು? ನಮ್ಮ ಗುಡ್ಡಬೆಟ್ಟಗಳಲ್ಲಿನ ಕಾಡುಗಳು (ಚಿ. 6) ಎಷ್ಟು ಬೆಲೆಬಾಳುವ ಮೋಪುಗಳನ್ನು ಕೊಡುವುದಿಲ್ಲ! ಹುಲ್ಲು ನಮ್ಮ ಜಾನುವಾರುಗಳಿಗೆ ಎಂತಹ ಅವಶ್ಯದ ಮೇವು! ನಾವು ಜಾಣರಾದರೆ, ಇಲ್ಲಿನ ಬಿದಿರು, ಹುಲ್ಲು, ಮರಗಳಿಂದ ಕಾರಖಾನೆಗಳ ಮೂಲಕ ಕಾಗದ, ಬೆಂಕಿಪೆಟ್ಟಿಗೆ ಮೊದಲಾದ ಕಾಮಗಾರಿಗಳನ್ನು ಮಾಡಬಹುದು. ಬೆಟ್ಟಗಳನ್ನು ಅಗೆದು, ಕಬ್ಬಿಣ, ಬಿಂಗ ಮೊದಲಾದ ವಸ್ತುಗಳನ್ನು ಸಂಗ್ರಹಿಸಬಹುದು.

ಕಾಡು ನಮಗೆ ತೀರ ಅವಶ್ಯ. ಅದನ್ನು ನಾವು ಮನಸ್ವಿಯಾಗಿ ಕಡಿಯುವುದಾಗಲಿ, ಸುಡುವುದಾಗಲಿ ತಪ್ಪು. ಒಂದು ಗಿಡವನ್ನು ಕಡಿದರೆ, ಇನ್ನೊಂದನ್ನು ಆ ಸ್ಥಳದಲ್ಲಿ ಬೆಳೆಯಿಸಬೇಕು. ಕಾಡುಗಳಿಂದ ಬರುವ ಹಾನಿಗಳನ್ನೂ, ಉಪದ್ರಗಳನ್ನೂ ನಾವು ಉಪಾಯದಿಂದ ತೀರಿಸಲು ಬರುವುದು; ಆದರೆ ಕಾಡುಗಳೇ ಇಲ್ಲವಾದರೆ ನಮ್ಮ ಜೀವನವು ತೀರ ಕಷ್ಟವಾದೀತು.

೩. ನೀರಿನ ಯಾತ್ರೆ

ಆಕಾಶದಲ್ಲಿ ಮೋಡಗಳು ಸಂಚರಿಸುವಾಗಲೆಲ್ಲ ನಮಗೆ ಅವನ್ನು ಏರಿಹೋಗುವ ಆಸೆಯಾಗುವುದಿಲ್ಲವೆ? ಚೈತ್ರ ಮಾಸವು ಬಂದಿತೆಂದರೆ, ಸಾಲುಸಾಲಾಗಿ ಮೋಡಗಳು ಪಡುವಿನಿಂದ ಮೂಡುದಿಕ್ಕಿಗೆ ಸಾಗುವುವು. ಎಷ್ಟೋ ಮುಗಿಲುಗಳು ಪಡುವಿನ ಗೋಡೆಗೆ ತಗಲಿ, ಮುಂದುವರಿಯಲಾರದೆ ನಿಂತುಬಿಡುವುವು. ಅಲ್ಲೇ ಗುಡ್ಡಗಳ ಎಡೆಯಲ್ಲಿ ಆಟ ಮಾಡುವುವು. ಚೈತ್ರಮಾಸವು ಕಳೆಯಿತೆಂದರೆ, ಮೋಡಗಳ ದಟ್ಟನೆಯು ಹೆಚ್ಚಾಗಿ ಕರಿದಾಗಿ ಕಾಣಿಸುವುವು. ಅವೆಲ್ಲ ಮುಂದೆಹೋಗಲು ಬೆಟ್ಟಗಳು ಬಿಡುವುದಿಲ್ಲ. ಆದುದರಿಂದ ಅವುಗಳೊಳಗೆ ತಿಕ್ಕಾಟವು ತೊಡಗಿ, ಗುಡುಗುಮಿಂಚುಗಳಾಗುವುವು. ಮಳೆಗಾಲವು ಬರುವುದೆಂದು ಊರಿನ ರೈತರು ಅವಸರದಿಂದ ಓಡಾಡುವರು. ಪುಟ್ಟು, ಕಿಟ್ಟು ತಮ್ಮ ಊರಿನ ಗುಡ್ಡವೊಂದರ ತುದಿಯನ್ನೇರಿ, ಈ ಮುಗಿಲುಗಳ ರಾಶಿಯನ್ನು ನೋಡುತ್ತ ನಿಲ್ಲುವರು. ಬೆಳಗಿನಿಂದ ಸಂಜೆಯತನಕ ಸಹಿಸಲಾರದ ಸೆಕೆ! ಮುಗಿಲುಗಳನ್ನು ಕಾಣುತ್ತ, ಗಾಳಿಯನ್ನು ಬಯಸುತ್ತಿರುವಷ್ಟರಲ್ಲಿ, ಒಮ್ಮೆಗೇ ತಂಗಾಳಿ ಬೀಸುವುದು. 'ಎಲ್ಲೋ ಮಳೆ ಬಂದಿರಬೇಕೆ'ಂದು ಅವರು ಅನ್ನುವರು. ಮಾತು ಮುಗಿಯುವುದರೊಳಗೆ ಬಿರುಗಾಳಿ! ಸಿಡಿಲುಮಿಂಚಿನ ಬಡಿತ! ಸರಿ—ನಿಮಿಷಾರ್ಧದಲ್ಲಿ ಚಟಚಟಲು ಮಳೆ! ಮಕ್ಕಳೆಲ್ಲ ಓಡಿ ಓಡಿ ಮನೆಯ ಕಡೆ ಬರುತ್ತಾರೆ! ಏನೆನ್ನುವುದು? ಹೋಗುವಾಗ ಬರಿದಾಗಿ ಇದ್ದ ತೋಡುಗಳು, ಮೊರೆದುಬರುವ ಮಳೆಯ ನೀರಿಂದ ಈಗ ದಾಟಲು ಬರುವಂತಿಲ್ಲ. ತೋಡಿನ ಮೇಲಿನ ಮರದ ಸಂಕದ ಮೇಲಿಂದ ಕೈಕೈ ಹಿಡಿದು ಅವರು ಮನೆಗೆ ಬರುವರು.

ಮಳೆಗಾಲ ತೊಡಗಿದೆ. ಬಂದ ಮಳೆ ನಿಲ್ಲುವುದಿಲ್ಲ! ಬೋಳಾದ ಗುಡ್ಡಗಳು ನಾಲ್ಕಾರು ದಿನಗಳಲ್ಲಿ ಹಸುರು ಹುಲ್ಲಿನಿಂದ ತುಂಬಿಹೋಗುವುವು! ಎಲ್ಲೆಲ್ಲೂ ಕಪ್ಪೆಗಳ ಗೊಟರು! ಬೇಸಾಯಗಾರರು ಮಳೆ ಚಳಿಯೆನ್ನದೆ ಹೊಲದಲ್ಲಿ ಸುತ್ತುತ್ತಾರೆ! ಕಿಟ್ಟು, ಪುಟ್ಟು, ಎಲ್ಲರೂ ಮಳೆಯ ಲೀಲೆಯನ್ನು ನೋಡುತ್ತಾರೆ! ಕಾಗದದ ದೋಣಿಗಳನ್ನು ಮಾಡಿ ನೀರಲ್ಲಿ ತೇಲಿಸಿಬಿಡುತ್ತಾರೆ! ನೀರು ಅಂಗಳದಿಂದ ತೋಡಿಗೆ ಹೋಗುವುದು. ಇನ್ನು ಅರೆಕ್ಷಣದಲ್ಲಿ ಆ ದೋಣಿಯಿಲ್ಲ. ದೋಣಿ ನೀರಿನೊಂದಿಗೆ ಹೊರಟೇಹೋಯಿತು. ಅಷ್ಟು ನೀರು ಎಲ್ಲಿಗೆ ಹೋಗುತ್ತದೆ? ಯಾರು ಬಲ್ಲರು! ಅಷ್ಟು ನೀರು ಬಂತೆಲ್ಲಿಂದ? ಪುಟ್ಟುವಿಗೆ ಮೋಡದಿಂದ ಮಳೆಯೂ, ಮಳೆಯಿಂದ ನೀರೂ ಬಂದುದು ಗೊತ್ತು. ಆದರೆ ಅದು ಬರುವ ಹಾದಿ, ಹೋಗುವ ರೀತಿ ಒಂದೂ ತಿಳಿಯದು. ಒಮ್ಮೆ ಅವನು ಗೆಳೆಯರೊಂದಿಗೆ ಕುಮಾರ ಪರ್ವತಕ್ಕೆ ಹೋಗಿದ್ದ. ಅಲ್ಲೂ ಬೆಟ್ಟದ ಶಿಖರದ ಮೇಲೆ ಮೋಡಗಳು ಮುರಿದುಬೀಳುತ್ತಿದ್ದುವು. ಒಂದು ಬಾರಿ ಮಳೆಯು ಬಂದಿತು. ಬೆಟ್ಟದ ಗಿಡಮರಗಳ ತಂಪಿಗೆ ಮಳೆಯು ಎರಗಿರಬೇಕೆಂದು ತಿಳಿದನು. ಮಳೆ ಬಿಡಲು, ಅವರು ಹೊರಗೆಬಂದು ದೂರ ನೋಡಿದರು.

ಎಷ್ಟೋ ಕಡೆಗಳಿಂದ ಮಳೆಯ ನೀರೆಲ್ಲ ಕುಣಿಕುಣಿದು, ಕಣಿವೆಗಳಿಗೆ ಹಾರುವುದನ್ನು ಕಂಡನು. ಅದರ ಜತೆಯಲ್ಲಿ ತಾನೂ ಇಳಿದುಬರುವ ಆಸೆಯಾಯಿತು. ಒಂದೆರಡು ದಿನಗಳು ಕಳೆಯಲು, ಗೆಳೆಯರೊಂದಿಗೆ ನೀರಿನ ಕೊರಕಲೊಂದನ್ನು ಸೇರಿದನು. ಮಳೆಯ ನೀರು ನೆಲವನ್ನು ಕೊರೆದು ಸಾಗಿದ ಹಾದಿಯಲ್ಲಿ ಅವರು ಸಾಗಿದರು. ಬೆಟ್ಟವು ನೇರಾಗಿ ನಿಂತಲ್ಲಿ ನೀರು ೧೦೦–೨೦೦ ಅಡಿಗಳಿಗೆ ಒಂದೇ ಹಾರಾಟವನ್ನು ಮಾಡುತ್ತಿತ್ತು. ಅದರ ಚೆಲುವು ಎಂತಹದು! ಸಹ್ಯಾದ್ರಿಯ ತೊಪ್ಪಲಲ್ಲಿ ಇಂತಹ ಸಾವಿರಾರು ಪ್ರಪಾತಗಳಿವೆ.

ಅವರೆಲ್ಲ ಆ ಪರ್ವತದ ಬುಡಕ್ಕೆ ಬಂದರು. ಇವರು ಸೇರಿದ, ಕೊರಕಲಿನಂತಿರುವ ಇನ್ನೂ ಹತ್ತೆಂಟು ಕೊರಕಲುಗಳು ಅವರ ಹಾದಿಗೆ ಕೂಡಿದುವು. ಎಲ್ಲವುಗಳಲ್ಲೂ ಸ್ವಲ್ಪ ನೀರು ಹರಿಯುತ್ತಲೇ ಇತ್ತು. ಅವುಗಳೆಲ್ಲ ಬೆಟ್ಟದ ಬುಡದಲ್ಲಿ ಕೂಡುವಾಗ ಒಂದು ಹಳ್ಳವೇ ಆಯಿತು. ಈ ಹಳ್ಳವು ಮುಂಬರಿಯಲು, ಹೆಚ್ಚಿನ ಬಂಡೆಗಳೂ, ಗುಡ್ಡಗಳೂ ಅಡ್ಡಾಗುವುವು. ಅವುಗಳ ಎಡೆಯಿಂದ ಹಳ್ಳವು ಸುತ್ತಿ, ಅಡ್ಡವಾಗಿ ತಡೆಯುವ ಬಂಡೆಗಳನ್ನು ಕೊರೆಯುತ್ತ, ಹಾರುತ್ತ, ಧುಮುಕುತ್ತ ಮುಂಬರಿಯಿತು. ಈಗ ಬಂದುದು ಕುಳುಗುಂದದ ಬಯಲ ಬಳಿಗೆ (ಸುಬ್ರಹ್ಮಣ್ಯದ ಸಮೀಪ). ಅಲ್ಲಿಯೂ ನದಿ ನಿಲ್ಲುವುದೇ? ಮುಂದೆ ಒಂದೇ ಸವನೆ ಓಡುತ್ತಿದೆ. ಹಾದಿಯಲ್ಲಿ ಎಣೆಕಲ್ಲು, ಪಂಜ ಮೊದಲಾದ ಹಲವು ಕಡೆಗಳಲ್ಲಿ ಚಿಕ್ಕಪುಟ್ಟ ಹಳ್ಳಗಳು ಸೇರುತ್ತಲೇ ಇವೆ. ಈಗ ಅದು ಹಳ್ಳ ಹೋಗಿ, ದೊಡ್ಡದಾದ ನದಿಯೇ ಆಯಿತು. ಈಗ ಕುಮಾರಧಾರಾ ನದಿಯೆಂಬ ಬಿರುದು ಅದಕ್ಕೆ ಸಿಕ್ಕಿದೆ. ಇನ್ನೂ ಅದರ ಹಾದಿಯಲ್ಲಿ ತಡೆಯುವ ಬಂಡೆಕಲ್ಲುಗಳು ಒಂದೆರಡಲ್ಲ. ಅವನ್ನು ಒಡೆದು, ಸೀಳಿ, ಚಿಮ್ಮಿನೆಗೆದು (ಚಿ. 9–12), ಬಲುದೂರ ಗುಡ್ಡಗಾಡನ್ನು ಕಳೆದುಬರಲು, ಸಮತಟ್ಟಾದ ಭೂಮಿಯು ಸಮೀಪಿಸಿತು. ಹಾಗೆ ಉಪ್ಪಿನಂಗಡಿಯನ್ನು ಸೇರಲು, ನೇತ್ರಾವತಿ ನದಿಯು ಅದನ್ನು ಕೂಡಿಕೊಂಡಿತು (ಚಿ 14). ಎರಡು ನದಿಗಳಿಗೂ ಈಗ ನೇತ್ರಾವತಿಯೆಂಬ ಒಂದೇ ಹೆಸರು. ಇಲ್ಲಿಂದ ನದಿಯು ಮುಂಬರಿಯಿತು. ಈಗ ಬಂಡೆಗಳ ತಡೆಯು ಮೊದಲಿನಷ್ಟಿಲ್ಲ. ಮುಂದೆ ಬಂಟ್ವಾಳ, ಪಾಣೆಮಂಗಳೂರು, ಫರಂಗಿಪೇಟೆಗಳ ಹಾದಿಯಾಗಿ ನೇತ್ರಾವತಿಯು ಸಾಗುತ್ತಾ ನಡೆಯಿತು. ಈಗ ಹಿಂದಿನ ಆರ್ಭಟೆ, ರಭಸಗಳಿಲ್ಲ. ಶಾಂತವಾದ ನದಿಯದು! ಉಪ್ಪಿನಂಗಡಿಯಿಂದಲೇ ಅದು ದೋಣಿಗಳ ಪ್ರಯಾಣಕ್ಕೆ ಅನುಕೂಲವಾಗುವುದು. ನದಿಯು ಮುಂದೆ ಅಗಲವಾಗುತ್ತ ಬಂದು, ಮಂಗಳೂರಿನ ಬಳಿ ಕಡಲನ್ನು ಸೇರಿಬಿಡುವುದು! ತಾನು ಹೊತ್ತುತಂದ ಕಶ್ಮಲಗಳನ್ನೂ, ಮರಗಳನ್ನೂ ಅದು ದಾರಿಯುದ್ದಕ್ಕೂ ಚೆಲ್ಲುತ್ತ ಬಂದು ತವರುಮನೆಗೆ ಬಂದು ಸೇರುವುದು. ಸಮುದ್ರವನ್ನು ಕೂಡುವಲ್ಲೇ ಗುರುಪುರ ಹೊಳೆಯ ಗೆಳೆತನವು ಅದಕ್ಕಾಗುವುದು. ಅವೆರಡು ಸೇರಿ, ಕೊರೆದ ಹೊಳೆಯ ಸಾಲುಗಳ ದೆಸೆಯಿಂದ ಸಮುದ್ರದಿಂದ ದೊಡ್ಡ ಹಾಯಿಹಡಗುಗಳು ಬಂದು ಹೋಗುವಷ್ಟು ಅನುಕೂಲವಾಯಿತು. ಇಷ್ಟರ

ತನಕ ನದೀತೀರದ ರೈತರು ಅದನ್ನು ಕೊಂಡಾಡಿದರೆ, ಈಗ ಮಂಗಳೂರಿನ ದೊಡ್ಡದೊಡ್ಡ ವ್ಯಾಪಾರಿಗಳೇ ಅದನ್ನು ಸ್ಮರಿಸುತ್ತಾರೆ. ಆ ನದಿಯು ಅಲ್ಲಿರದಿರುತ್ತಿದ್ದರೆ ಹಡಗುಗಳು ಒಳಕ್ಕೆ ಬರುವುದಕ್ಕಿತ್ತೆ?

ಮಳೆಗಾಲದಲ್ಲಿ ನೇತ್ರಾವತಿಯ ಮತ್ತು ಆಕೆಯ ಅಕ್ಕ ತಂಗಿಯರ ಸೊಕ್ಕೆಂತಹದು? ತೀರ ಸೆಕೆಗಾಲದಲ್ಲಿ ಅವುಗಳ ದಂಡೆ ಒಣಗಿಹೋಗಿ, ದೋಣಿಗಳಿಗೂ ಸಾಕಷ್ಟು ನೀರಿಲ್ಲವಾಗುವುದುಂಟು. ಆದರೆ ಮಳೆಗಾಲದಲ್ಲಿ ಸುತ್ತುಮುತ್ತಲಿನ ಬಯಲುಗಳನ್ನೂ, ಹಳ್ಳಿಗಳನ್ನೂ ಮುಳುಗಿಸುವಷ್ಟು ನೀರು ಹರಿದುಬರುವುದು. ಇಂತಹ ನೆರೆನೀರಿನಿಂದ ನದಿದಂಡೆಯ ಬಯಲುಗಳಲ್ಲಿ ಕೊಳೆ ಕಸಗಳು ಬಂದು ಸೇರಿ, ಬೆಳೆಗಳಿಗೆ ಉತ್ತಮ ಗೊಬ್ಬರವಾಗುವುದು. ಆದರೆ ಬಂದ ನೆರೆ ನೀರು ಬಲುದಿವಸಗಳ ತನಕ ನಿಂತರೆ, ಇದ್ದ ಬೆಳೆಯೂ ಕೊಳೆತೇ ಹೋಗುವುದು.

ನಮ್ಮ ಜಿಲ್ಲೆಯೊಂದರಲ್ಲಿ ವರುಷಕ್ಕೆ ಸರಾಸರಿ ೧೪೦ ಇಂಚು ಮಳೆಯಂತೆ! ಅಂದರೆ ೩೯೦೩ ಚದರ ಮೈಲಿ ವಿಸ್ತಾರಕ್ಕೆ ೧೪೦ ಇಂಚು ದಪ್ಪವಾಗಿ ಇರಿಸುವಷ್ಟು ಮಳೆಯ ನೀರು ಸುರಿಯುವುದು. ಇಷ್ಟೊಂದು ನೀರನ್ನು ಸಾಗಿಸಲು ಎಷ್ಟು ನದಿಗಳು ಬೇಡ! ಆದುದರಿಂದಲೇ ನಮ್ಮ ಜಿಲ್ಲೆಯಲ್ಲಿ ತುಂಬಾ ನದಿಗಳಿವೆ! ಕೊಲ್ಲೂರು, ಗಂಗೊಳ್ಳಿ, ಸೀತಾನದಿ, ಸುವರ್ಣನದಿ, ಎಣ್ಣೆಹೊಳೆ, ಉದಿಯಾವರ, ಮೂಲ್ಕಿ ಹೊಳೆ, ಸಸಿಹಿತ್ತಲು, ಗುರುಪುರ, ನೇತ್ರಾವತಿ, ಮಂಜೇಶ್ವರ, ಸೀರೆ, ಕುಂಬಳೆ, ಪಯಸ್ವಿನಿ, (ಚಿ. 13) ನೀಲೇಶ್ವರ, ಚರ್ವತ್ತೂರು ಹೊಳೆಗಳು. ಇವೆಲ್ಲ ಮಳೆಗಾಲದಲ್ಲಿ ತುಂಬಿದ್ದು, ಸೆಕೆಗಾಲಕ್ಕೆ ಬಲು ಕಡಿಮೆ ನೀರುಳ್ಳದ್ದಾಗಿವೆ.

ನದಿ, ಹಳ್ಳಗಳಿಂದಾಗಿ ನಮ್ಮ ಜಿಲ್ಲೆಯು ಬಲು ಮನೋಹರವಾಗಿ ಕಾಣಿಸುವುದು. ಅಲ್ಲಲ್ಲಿ ನಮ್ಮ ಜಿಲ್ಲೆಯಲ್ಲಿ ಕೆರೆಕುಂಟೆಗಳೂ ಇವೆ. ಕಾರ್ಕಳದ ರಾಮಸಮುದ್ರವು ಒಂದು ದೊಡ್ಡ ಕೆರೆ (ಚಿ 8). ಇದು ಸುಂದರವಾದ ಸ್ಥಳ.

ನದಿಗಳಿಂದ ನಮಗಾಗುವ ಉಪಕಾರವು ಸ್ವಲ್ಪವೇ? ನಮ್ಮ ವ್ಯಾಪಾರಕ್ಕೆ ಎಷ್ಟೋ ಸಹಾಯವಾಗುವುದು. ಅತಿಮಳೆಯಿಂದ ಬೆಳೆಗಳು ಕೆಡದಂತೆ, ಹೆಚ್ಚಾದ ನೀರನ್ನು ಸಮುದ್ರಕ್ಕೆ ಒಯ್ದು ಮುಟ್ಟಿಸುವುವು (ಚಿ. 15). ಅದೇ ನೀರು ಇನ್ನೊಮ್ಮೆ ನಮಗೆ ಮೋಡವಾಗಿ ಮಳೆಯ ರೂಪದಿಂದ ಸಿಗುವುದು. ವ್ಯಾಪಾರಕ್ಕೆ ಅನುಕೂಲವಾಗದ ನೀರಿನ ಧುಮುಕಾಟಗಳೂ, ಜಲಪಾತಗಳೂ ವ್ಯರ್ಥವಲ್ಲ. ಬೀಳುವ ನೀರಿಗೆ ಎಷ್ಟು ಶಕ್ತಿಯಿದೆ! (ಚಿ. 9) ಅದು ದೊಡ್ಡ ಬಂಡೆಗಳನ್ನು ಉರುಳಿಸಬಲ್ಲುದು. ಅಂಥ ನೀರನ್ನು ದೊಡ್ಡ ನಳಿಗೆಗಳ ಮೂಲಕ ಕೆಳಕ್ಕೆ ಇಳಿಸಿ, ಒಂದು ಭಾರಿ ಚಕ್ರವನ್ನು ತಿರುಗಿಸುವಂತೆ ಮಾಡಿ, ವಿದ್ಯುಚ್ಛಕ್ತಿಯನ್ನು ಹೊರಡಿಸಬಹುದು. ನಮ್ಮ ಘಟ್ಟಗಳಲ್ಲಿ ನೂರಾರು ಜಲಪಾತಗಳು ಹೀಗೆ ಮಾಡಲು ತೀರ ಅನುಕೂಲವಾಗಿವೆ. ಒಮ್ಮೆ ಹಾಗೆ ಮಾಡಿದರೆ, ನಮ್ಮ ಮನೆಯನ್ನು ಬೆಳಗಲು ವಿದ್ಯುದ್ದೀಪಗಳನ್ನೂ, ದೊಡ್ಡ ದೊಡ್ಡ ಯಂತ್ರಗಳನ್ನೂ ನಡೆಸಲು

ಶಕ್ತಿಯನ್ನು ನಾವು ಬಹಳ ಕಡಿಮೆ ಖರ್ಚಿನಿಂದ ಗಳಿಸಬಹುದು. ಧುಮುಕುವ ನದಿಯೆಂದರೆ ಮನೆತುಂಬ ಆಳುಗಳಿದ್ದಂತೆ; ಶಾಂತವಾಗಿ ಹರಿಯುವ ನದಿಯೆಂದರೆ ತುಂಬಿದ ಉಗ್ರಾಣವಿದ್ದಂತೆ!

೪. ಕಾಡಿನ ಒಡೆಯರು

ಪುಟ್ಟುವಿನ ಮನೆಯು ಒಂದು ಎತ್ತರವಾದ ಗುಡ್ಡದ ಮಗ್ಗುಲಲ್ಲಿದೆ. ಈ ಗುಡ್ಡದಲ್ಲಿ ಗಿಡಮರಗಳ ದಟ್ಟಣೆಯು ವಿಶೇಷವಾಗಿಲ್ಲ. ಅಲ್ಲಿ ತುಂಬಾ ಹುಲ್ಲು ಬೆಳೆಯುತ್ತಿದ್ದುದರಿಂದ ಅವನ ಮನೆಯ ದನಕರುಗಳನ್ನು ಮೇಯಿಸಲು ಅಲ್ಲಿಗೇನೇ ಒಯ್ಯುತ್ತಿದ್ದರು. ಒಂದು ಆದಿತ್ಯವಾರ ಮಧ್ಯಾಹ್ನ ಪುಟ್ಟುವು ದನಕಾಯುವ ಹುಡುಗರ ಜತೆಯಲ್ಲಿ ಆಟವಾಡಲು ಹೋಗಿದ್ದನು. ಇವನ ಸಂತೋಷವನ್ನು ಹೆಚ್ಚಿಸಲು ರಾಮು ಮತ್ತು ಕಿಟ್ಟು ತಮ್ಮ ಮನೆಯ ದನಕರುಗಳ ಜತೆಯಲ್ಲಿ ಅಲ್ಲಿಗೇ ಬಂದಿದ್ದರು. ನೆತ್ತಿಯ ಮೇಲಿನ ಸೂರ್ಯನು ಸ್ವಲ್ಪ ಇಳಿಯಲು, ಎಲ್ಲರೂ ಸೇರಿ ಆಟವಾಡಲು ನಿಶ್ಚಯಿಸಿದರು. 'ಜಿಬಲಿ' ಆಟವಾಡಲು ತೊಡಗಿದರು. ಆಟವು ಬಲು ರಭಸದಿಂದ ಸಾಗಿತು. ಇತ್ತ ದನಕರುಗಳು ಎಲ್ಲಿ ಮೇಯುತ್ತಿವೆ ಎಂಬ ಗೊಡವೆ ಒಬ್ಬರಿಗೂ ಇಲ್ಲದಾಯಿತು. ಹಾಗೆಯೇ ಸಂಜೆಯು ಸಮೀಪಿಸಿತು. ಮಕ್ಕಳಿಗೆ ಆಟದ ಅಮಲು ಇನ್ನೂ ಇಳಿದಿರಲಿಲ್ಲ. ಆದರೆ ಒಮ್ಮೆಗೇ ಅವರ ಮನಸ್ಸನ್ನು ಸೆಳೆಯುವಷ್ಟು ಭೀಕರವಾದ ಕೂಗೊಂದು ಕೇಳಿಸಿತು. ಒಂದು ದನದ ಕಡೆಗಾಲದ ಕೂಗದು! ಇತ್ತ ದನಕರುಗಳು ಬಾಲವೆತ್ತಿ, ಬೆದರಿಕೆಯಿಂದ ಕೂಗುತ್ತ ನಾಲ್ಕೂ ಕಡೆಗೆ ಓಡುತ್ತಿದ್ದುವು. ದನಕಾಯುವ ಹುಡುಗರು ಊಹೆಯಿಂದ "ಹುಲಿ! ಹುಲಿ!!" ಎಂದು ಕೂಗಿದರು.

ಆಟ ನಿಂತಿತು. ಎಲ್ಲರೂ "ಹುಲಿ! ಹುಲಿ!" ಎಂದು ಕೂಗಿದರು. ಹುಲಿಯೆಲ್ಲಿದೆ ಎಂದು ಯಾರಿಗೂ ತಿಳಿಯದು. ದನಕಾಯುವ ಹುಡುಗರು ಕೆಲವರು ವಾಸನೆಯಿಂದ ಅದರ ದಿಕ್ಕನ್ನು ತಿಳಿಯಲು ಯತ್ನಿಸಿದರು. ಅಷ್ಟರಲ್ಲೆ ಅವರಿಗೆ ತುಸು ದೂರದಲ್ಲಿ ಪೊದೆಗಳ ಅಲುಗಾಟವು ಕಾಣಿಸಿತು. ನೋಡುತ್ತಿರುವಷ್ಟರಲ್ಲೇ, ದೊಡ್ಡ ಹೆಬ್ಬುಲಿಯೊಂದು ಒಂದು ದನವನ್ನು ಕಚ್ಚಿ, ಎಳೆದುಕೊಂಡು ಹೋಗುತ್ತಿತ್ತು. ಮಕ್ಕಳಲ್ಲಿ ಯಾರೊಬ್ಬರಿಗೂ ಬಾಯಿತೆರೆಯುವ ಧೈರ್ಯವಿಲ್ಲ. ಅದು ಕಣ್ಮರೆಯಾದ ಮೇಲೆ, ಅವರು ಗುಡ್ಡವನ್ನಿಳಿದು, ತಮ್ಮ ಮನೆಯವರನ್ನು ಕರೆದುತಂದರು. ಎಲ್ಲರೂ ಅಲ್ಲಿಗೆ ಗಾಬರಿಯಿಂದ ಓಡಿ ಓಡಿ ಬಂದರು. ದನವನ್ನು ಎಳೆದು ಸಾಗಿಸಿದ ಹಾದಿಯಲ್ಲಿ ರಕ್ತವು ಚೆಲ್ಲಿದ್ದುದರಿಂದ ಅದನ್ನು ಹಿಂಬಾಲಿಸಿ ಮುಂಬರಿದರು. ಅವರ ಕೈಗಳಲ್ಲಿ ಕತ್ತಿಕೋವಿಗಳಿದ್ದರೂ, ನೇರಾಗಿ ಮುಂದರಿಯುವಷ್ಟು ಸಾಹಸವೆಲ್ಲಿ! ಅವರಲ್ಲೊಬ್ಬನು ತೀರ ಮುಂದೆ ಹೋದನು. ಅವನಿಗೆ ದನದ ಶವವು ಮಾತ್ರ ಕಾಣಸಿಕ್ಕಿತಂತೆ. ಹುಲಿಯು ಊಟ ಮುಗಿಸಿ ಹೊರಟುಹೋಗಿತ್ತು.

ಆ ತಿಂಗಳಲ್ಲೇ ಆ ಹಳ್ಳಿಯವರು ಕಳೆದುಕೊಂಡ ಎಂಟನೆಯ ದನವದು. ಊರವರ ಭೀತಿಯನ್ನು ಹೇಳಿ ತೀರದು. ಅವರಿಗೆ ಆ ರಾತ್ರಿಯೆಲ್ಲಾ ಹುಲಿಯದೇ ಚಿಂತೆ. ಯಾರೋ ಅಂದರು — ನೆರೆಗ್ರಾಮದಲ್ಲಿ ಹುಲಿಯೊಂದು ಒಬ್ಬನ ಮೈಯನ್ನೇ ಪರಚಿಬಿಟ್ಟಿದೆ ಎಂದು. ಆದರಿಂದಾಗಿ ಅವರು ಇನ್ನು ಸುಮ್ಮನಿರಬಾರದೆಂದು ನಿಶ್ಚಯಿಸಿದರು. ಊರವರಿಗೆಲ್ಲಾ ಹೇಳಿಕೆಮಾಡಿ, ಮರುದಿನ ಹುಲಿಯ ಶಿಕಾರಿಯೆಂದು ನಿರ್ಣಯವಾಯಿತು. ಊರ ಮಗ್ಗುಲಿನ ಕಾಡಿನಲ್ಲಿ ಆ ಹುಲಿಯು ಅಡಗಿರಬೇಕೆಂಬುದರಿಂದ, ಅದನ್ನು ಸುತ್ತುವರಿದು ಬೇಟೆಯಾಡಲು ನಿರ್ಧರಿಸಿದರು.

ಮರುದಿನ ಬಂದಿತು — ಕಿಟ್ಟು ಪುಟ್ಟು ರಾಮುರಿಗೂ ಬೇಟೆ ನೋಡುವ ಮನಸ್ಸು. ಆದರೆ ಚಿಕ್ಕವರನ್ನು ಯಾರಾದರೂ ಜತೆಯಲ್ಲಿ ಕೊಂಡುಹೋಗುವರೆ? ಅದು ಅವರಿಗೆ ತಿಳಿದಿತ್ತು. ಅದಕ್ಕಾಗಿ ಅವರು ಮೂವರು ಯಾರಿಗೂ ತಿಳಿಯದಂತೆ ಮನೆಯಿಂದ ಹೊರಟು, ಊರಿನ ಕಾಡಿನ ಮಗ್ಗುಲನ್ನು ಸೇರಿದರು. ಮುಂದೇನು ಮಾಡುವುದೆಂದು ತಿಳಿಯದೆ, ಎತ್ತರದ ಮರವೊಂದನ್ನು ಏರಿ ಕುಳಿತುಕೊಂಡರು. ಅವರು ಬಂದು ಸೇರಿದ ಅರ್ಧತಾಸಿನೊಳಗಾಗಿ ಊರವರು ಬಂದರು. ಎಲ್ಲರೂ ಕಾಡಿನ ಸುತ್ತ ಅಲ್ಲಲ್ಲಿ ಚೆದರಿ ನಿಂತರು. ಈ ಹುಡುಗರು ಅಡಗಿದ್ದ ಮರದ ಕೆಳಗೆ ಒಬ್ಬ ಬೇಟೆಗಾರನು ನಿಂತಿದ್ದನು.

ಎಲ್ಲರೂ ಸಿದ್ಧರಾಗಲು, ಕೆಲವು ಜನರು ಡಬ್ಬೆಗಳನ್ನೂ ಡೋಲುಗಳನ್ನೂ ಕಿವಿ ಕಿವುಡಾಗುವಂತೆ ಸುತ್ತಲಿಂದ ಬಡಿಯತೊಡಗಿದರು. ಆ ಶಬ್ದಕ್ಕೆ ಎಂಥವನ ಎದೆಯೂ ನಡುಗಬೇಕು. ಕಾಡಿನ ಮೃಗಗಳು ಅದನ್ನು ಕೇಳಿ ತುಂಬಾ ಗಾಬರಿಗೊಂಡುವು. ಶಬ್ದದ ಮೊದಲಿಗೇ ಒಂದೆರಡು ಜಿಂಕೆಗಳು ನಾಗಾಲೋಟದಿಂದ ಓಡಿಬಂದುವು. ಯಾರೂ ಅವನ್ನು ತಡೆಯಲಿಲ್ಲ ಅರ್ಧತಾಸು ಸರಿಯಿತು. ಪಂಗಡದಲ್ಲಿ ಕೆಲವರು ಮುಂದೊತ್ತಿ ನಡೆದರು. ಒಂದು ಕಡೆಯಿಂದ "ಹಂದಿ!" ಎಂದು ಕೂಗಿದರು. ..ಒಂದು "ಢಂ" ಎಂಬ ಸದ್ದೂ ಕೇಳಿಸಿತು. ಶಿಕಾರಿಯ ಗದ್ದಲ ಇನ್ನೂ ನಡೆಯುತ್ತಲೇ ಇದೆ. . . . . ಕಿಟ್ಟು ಪುಟ್ಟುವಿಗೆ ಕಾದು ಕಾದು ಬೇಸರವಾಯಿತು. ಕೆಳಕ್ಕೆ ಯಾರೂ ನಿಂತಿರದಿದ್ದರೆ, ಅವರು ಮರವನ್ನು ಇಳಿದು ಮನೆಗೆ ಹೋಗುತ್ತಿದ್ದರೋ ಏನೋ. ಅಷ್ಟರಲ್ಲಿಯೇ ಅವರ ಕೆಳಗಿನಿಂದಲೇ "ಢಂ" ಎಂಬ ಇನ್ನೊಂದು ಸದ್ದು ಕೇಳಿಸಿತು. ಹುಲಿಯ ಘರ್ಜನೆಯು ಕೇಳಿಸಿತು. ಅದನ್ನು ಸೇರಿಕೊಂಡು "ಅಯ್ಯೋ" ಎಂಬ ಕೂಗೂ ಕೇಳಿಸಿತು. ಹುಲಿಯೊಂದು ಗಾಯಗೊಂಡು, ಕೆಳಗೆ ನಿಂತಿದ್ದ ಬೇಟೆಯವನ ಮೇಲೆ ಹಾರಿತು. ಅವನ ಗುರಿಯು ಚೆನ್ನಾಗಿ ನಾಟರಲಿಲ್ಲ. ಅದು ಅವನ ಮೇಲಿನ ಸಿಟ್ಟಿನಿಂದ ಪರಚಿ, ತನ್ನ ಜೀವದಾಸೆಗಾಗಿ ಓಡುತ್ತಿತ್ತು. ಅಷ್ಟರಲ್ಲಿ ಮತ್ತೊಂದು ಗುಂಡಾಯಿತು. ಹುಲಿಯು ತುಸು ದೂರಹೋಗಿ ಪ್ರಾಣಬಿಟ್ಟಿತು. ಬೇಟೆಯು ಸಾಕೆಂಬ ಸಂಕೇತವಾಗಲು, ಎಲ್ಲರೂ ಅಲ್ಲಿಗೆ ಓಡಿಬಂದರು. ಗಾಯಗೊಂಡವನನ್ನು ಉಪಚರಿಸಿದರು. ಗಾಯವು ಅಷ್ಟೊಂದು ಬಲವಾಗಿರಲಿಲ್ಲ. ಅವನನ್ನು ಹೊತ್ತು ಊರಿಗೆ ಒಯ್ದರು. ಉಳಿದವರು ಹುಲಿಯ

ಕಡೆಗೆ ಓಡಿದರು. ಅದು ನಿಜಕ್ಕೂ ಹುಲಿಯಲ್ಲ (ಚಿ. 19). ಚಿರತೆ (ಚಿ. 20). ಹಳ್ಳಿಯವರು ಚಿರತೆಯನ್ನು ಹುಲಿಯೆನ್ನುವರು.

ಸರಿ, ಆ ದಿನದ ಶಿಕಾರಿಯೆಂದರೆ ಊರವರ ಹಿಗ್ಗು! ಒಂದು ಹುಲಿ, ಎರಡು ಕಾಡುಹಂದಿಗಳನ್ನು (ಚಿ. 21) ಅವರು ಕೊಂದಿದ್ದರು. ಆದರೆ ಹಿಂದಿನ ದಿನದ ಹೆಬ್ಬುಲಿಯು ಯಾರಿಗೂ ಸಿಗಲಿಲ್ಲ. ಊರವರು ಶಿಕಾರಿಯನ್ನು ಮನೆಗೆ ಸಾಗಿಸಿದ ಮೇಲೆ, ಹುಡುಗರು ಮೆಲ್ಲನೆ ಇಳಿದು ಮನೆಯನ್ನು ಸೇರಿದರು. ಹೋಗುವಾಗ ಅವರ ಜೀವ ಅವರ ಕೈಯಲ್ಲಿಲ್ಲ.

---

೫. ಇನ್ನೊಂದು ದಿನ

ರಾಮುವಿನ ಅಜ್ಜನ ಮನೆ ಸಂಪಾಜೆಯ ಬಳಿ. ರಜೆಯು ಬರಲು ರಾಮುವು ಅಲ್ಲಿಗೆ ಹೋಗಿದ್ದನು. ಹೋಗುವಾಗ ಜತೆಯಲ್ಲಿ ಕಿಟ್ಟುವನ್ನೂ, ಪುಟ್ಟುವನ್ನೂ ಕರೆದುಕೊಂಡೇ ಹೋಗಿದ್ದನು. ರಾಮುವಿನ ಅಜ್ಜನಿಗೆ ಇವರೆಲ್ಲ ಮನೆಗೆ ಬಂದುದು ಬಲು ಸಂತೋಷ. ಅಲ್ಲಿನ ಮನೆಗಳೆಂದರೆ ಬಲು ದೂರ ದೂರ. ಆ ಬೆಟ್ಟದ ಸಂದಿನಲ್ಲೊಂದು ಮನೆಯಾದರೆ ಈ ಬೆಟ್ಟದ ಸಂದಿನಲ್ಲೊಂದು ಮನೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲು ಎರಡು ಮೂರು ಮೈಲು ಕಾಡುಗುಡ್ಡಗಳನ್ನು ದಾಟ ಹೋಗಬೇಕು. ಒಬ್ಬನೇ ಹೋಗುವುದಕ್ಕೆ ಭಯ. ಆದರೆ ಇವರಿಗೆ ಆ ಪ್ರಾಂತವನ್ನೆಲ್ಲಾ ತಿರುಗಾಡಿಕೊಂಡು ಬರಬೇಕೆಂಬ ಹಿರಿಯಾಸೆ. ಹಾಗೆ ತಮ್ಮನ್ನು ಊರ ಸುತ್ತುಮುತ್ತು ಕರೆದುಕೊಂಡು ಹೋಗುವಂತೆ ರಾಮು ಅಜ್ಜನನ್ನು ಪೀಡಿಸುತ್ತಿದ್ದನು.

ರಾಮುವಿನ ಅಜ್ಜ ಮುದುಕನಲ್ಲ. ಏನು ೫೦ ವರುಷ ವಯಸ್ಸು. ತುಂಬಾ ಕಾಯಕಷ್ಟಮಾಡುವ ಬೇಸಾಯಗಾರ. ಅವನಿಗೆ ಚಿಕ್ಕಂದಿನಲ್ಲಿ ಇಂಥ ಆಸೆಯೇ ಬಹಳ. ಆದುದರಿಂದ ತಾನು ಎಲ್ಲಿಗೆ ಹೋಗುವುದಿದ್ದರೂ ಇವರನ್ನು ಜತೆಯಲ್ಲಿ ಒಯ್ಯುತ್ತಿದ್ದನು. ಒಂದು ದಿನ ಬೇಗ ಊಟ ಮುಗಿಸಿ, ರಾತ್ರಿ ಹೊಲವನ್ನು ಕಾಯಲು ಮುಸ್ಸಂಜೆಗೇ ಹೊರಟನು. ಹೊಲವಿರುವುದು ಮನೆಯಿಂದ ಒಂದು ಮೈಲಿ ದೂರಕ್ಕೆ. ಹೋಗುವಾಗ ಜತೆಯಲ್ಲಿ ಬಾಲಕರೆಲ್ಲರೂ ಇದ್ದರು. ದಾರಿಯಲ್ಲಿ ಹೋಗುತ್ತ, ರಾಮುವಿನ ಅಜ್ಜನು ತನಗೂ ಮುಂದಿದ್ದ ಕಿಟ್ಟುವನ್ನು ಎಳೆದು ಹಿಡಿದನು. ಕಿಟ್ಟುವಿಗೆ ಏಕೆಂದು ತಿಳಿಯಲಿಲ್ಲ. ಅಜ್ಜನು ಸದ್ದುಮಾಡಬಾರದೆಂದು ಸೂಚಿಸಿ, ತುಸುದೂರದ ಒಂದು ತರಗೆಲೆಯ ರಾಶಿಯನ್ನು ತೋರಿಸಿದನು. ಮಕ್ಕಳಿಗೆ ಏನೆಂದು ತೋರಲಿಲ್ಲ. ಚೆನ್ನಾಗಿ ಎವೆಯರಳಿಸಿ ನೋಡಲು ದೊಡ್ಡದೊಂದು (ಚಿ. 25) ಹೆಬ್ಬಾವು ಮಲಗಿದುದು ಕಂಡಿತು. ಇದುವರೆಗೆ ನಮ್ಮ ಹುಡುಗರಿಗೆ ಹೆಬ್ಬಾವೇನೆಂದು ತಿಳಿದಿರಲಿಲ್ಲ. ಕೇರೆಹಾವನ್ನು ಕಂಡ ಹುಡುಗರಿಗೆ ಹೆಬ್ಬಾವನ್ನು ಕಂಡು ದಿಗಿಲುಹಾರಿತು. "ಅದೀಗ ತಿಂದುಬಿದ್ದಿದೆ; ಅಲುಗಾಡುವುದಿಲ್ಲ" ವೆನ್ನದಿದ್ದರೆ ಹುಡುಗರೆಲ್ಲ ಪರಾರಿಯೇ!

ರಾತ್ರಿ ಅಜ್ಜನು ಇವರನ್ನು ಹೊಲಕ್ಕೆ ಒಯ್ದನು. ಹೊಲದಲ್ಲಿ ಒಂದು ಎತ್ತರವಾದ ಅಟ್ಟಣಿಗೆಯನ್ನು ಕಟ್ಟಿದ್ದರು. ಅದನ್ನೇರಿ ನಾಲ್ವರೂ ಕುಳಿತರು. ಕತ್ತಲು ಕವಿಯಲು, ಅಜ್ಜನು ಅವರಿಗೆ ಕಥೆ ಹೇಳತೊಡಗಿದನು. ಕಾಡಿನಲ್ಲಿರುವ ಹುಲಿ; ಹಂದಿ, ಆನೆಗಳ ಸುದ್ದಿಯೆಲ್ಲವನ್ನೂ ಹೇಳಿದನು. ಬಲುಹೊತ್ತು ಕಥೆ ಕೇಳಿಕೊಂಡು, ಕೊನೆಗೆ ಎಲ್ಲರೂ ಮಲಗಿದರು. ಅಜ್ಜನು ಕಾವಲು ಕುಳಿತಿದ್ದನು. ಕೈಯಲ್ಲಿ ಕೋವಿಯೂ ಇತ್ತು. ಒಮ್ಮೆಗೇ, ಕಾಡಿನ ಮರಗಳು ಅಲುಗುವ ಸದ್ದು, ರೆಂಬೆ ಮುರಿಯುವ ಸದ್ದು ಕೇಳಿಸಿತು! ಮುದುಕನು ಗುಂಡನ್ನು ಹಾರಿಸಿದನು. ಮಕ್ಕಳಿಗೆ ಎಚ್ಚರವಾಯಿತು. 'ಏನು?! ಎಂದು ಕೇಳಿದರು. ಕತ್ತಲಲ್ಲಿ ಏನೂ ಕಾಣಿಸುತ್ತಿರಲಿಲ್ಲ ಅಜ್ಜನು ನಾಲ್ಕಾರು ಗುಂಡುಗಳನ್ನೂ, ಕೆಲವು ಗರ್ನಾಲುಗಳನ್ನೂ ಹಾರಿಸಿದನು . . . . ಸಾವಿರಾರು ಮಂದಿ ಕಾಡನ್ನು ಒಮ್ಮೆಗೇ ನುಗ್ಗಿ ಹೊರಟುಹೋಗುವಂತೆ ಸದ್ದಾಯಿತು.

ಬೆಳಗಿನ ತನಕ ಯಾರಿಗೂ ನಿದ್ದೆ ಬರಲಿಲ್ಲ. ಬಂದ ಅರಿಷ್ಟವು ಹೋದುದಕ್ಕಾಗಿ ಎಲ್ಲರೂ ಸಂತೋಷಪಟ್ಟರು. "ಆನೆಯ ಹಿಂಡು (ಚಿ. 18) ನಮ್ಮ ಅಡಿಕೆತೋಟ ಹಾಳು ಮಾಡಲು ಬಂದಿತ್ತು; ನಾನು ಮೇಲಿಂದ ಮೇಲೆ ಗುಂಡುಹಾರಿಸಿ ಅವುಗಳಲ್ಲಿ ಹೆದರಿಕೆ ಹುಟ್ಟಿಸದಿದ್ದರೆ, ಅವು ಪರಾರಿಯಾಗುತ್ತಿರಲಿಲ್ಲ" ಎಂದು ಅಜ್ಜನು ಹೇಳಿದನು. ಬೆಳಗಾಗಲು, ಎಲ್ಲರೂ ಕೆಳಕ್ಕಿಳಿದು, ಹಿಂದಿನ ರಾತ್ರೆ ಸದ್ದು ಕೇಳಿದಲ್ಲಿಗೆ ಬಂದರು. ಕಾಡಾನೆಗಳ ಕಾಲು ತುಳಿತಕ್ಕೆ ಚಿಕ್ಕಪುಟ್ಟ ಪೊದೆಗಳು ಮುರಿದು ಚೂರಾಗಿ ಬಿದ್ದಿದ್ದುವು.

ಆ ಪ್ರಾಂತದ ಬಡರೈತರು ರಾತ್ರಿ ಆನೆ, ಕಾಡುಹಂದಿ, ಕಾಟ, (ಚಿ. 22) ಕಡವೆಗಳಿಂದ (ಚಿ. 23) ತಮ್ಮ ಪೈರನ್ನು ರಕ್ಷಿಸಬೇಕು. ಹಗಲಿಗೆ ಮಂಗಗಳ ಹಿಂಡಿನಿಂದ ಅವನ್ನು ಕಾಯಬೇಕು. ಕೆಲವು ಬಾರಿ ಕಾಡಲ್ಲಿ ಹಿಂಡುಹಿಂಡಾಗಿ ಸಂಚರಿಸುವ ಕೋತಿಗಳೂ, ಮುಸುಗಳೂ ಬಂದು ಪೈರಿನ ಬತ್ತವನ್ನೆಲ್ಲ ತಿಂದುಹೋಗುವುದುಂಟು. ಎಂಥ ಕಷ್ಟದ ಜೀವನ! ಆದರೆ ಅಂತಹ ಸ್ಥಳಗಳಲ್ಲಿ ಬಾಳ್ವೆ ಮಾಡುವುದೆಂದರೆ ಗಡಸುತನವಿದೆ; ಪೌರುಷವಿದೆ.

---

೬. ಪ್ರಾಣಿಗಳ ಬಳಗ

ನಮ್ಮ ಗೆಳೆಯರು ಮೂವರಿಗೆ ಈ ರೀತಿಯ ಸಾಹಸ ಕಾರ್ಯಗಳಲ್ಲಿ ಮನಸ್ಸು ಬೆಳೆಯುತ್ತ ಹೋಯಿತು. ಊರಲ್ಲಿ ನಡೆಯುವ ಪ್ರತಿ ಬೇಟೆಯನ್ನು ಕದ್ದುನೋಡುವ ಸಾಹಸವು ಅವರದು. ದೊಡ್ಡವರಾದ ಮೇಲೆ ತಾವೇ ಕೋವಿ, ಕತ್ತಿಗಳನ್ನು ಹಿಡಿದು, ಒಂಟಿಯಾಗಿ ಕಾಡನ್ನೆಲ್ಲ ಸುತ್ತುವರಂತೆ. ತಮ್ಮ ನಂಟರ ಮನೆಗೆ ಹೋದರೆ, ಈ ಹುಡುಗರು ಪ್ರತಿ ಸಾರಿಯೂ ಗದ್ದೆಯಲ್ಲಿ ಬೆಳೆಯ ಕಾವಲಿಗೆ ಹೋಗುವವರ ಜತೆಯಲ್ಲಿ ಹೋಗುತ್ತಿದ್ದರು. ಇದರಿಂದಾಗಿ ಅವರಿಗೆ ಕಾಡು ಪ್ರಾಣಿಗಳನ್ನು ಕಾಣುವ ಆಸೆ ಬಹಳವಾಯಿತು. ಎಷ್ಟೋ ಬಾರಿ ಕತ್ತೆಕಿರುಬ, ಹುಲಿ, ಚಿರತೆಗಳನ್ನು ಅವರು ಹಗಲಲ್ಲೇ ಕಂಡುದುಂಟು.

ಮೂಡು ಪ್ರದೇಶದಲ್ಲಿ ಅಲೆಯುತ್ತಿರುವಾಗ ಕಡವೆ, ಜಿಂಕೆ, (ಚಿ. 23 – 24) ಮೊಲ ಮೊದಲಾದ ಸಾಧು ಮೃಗಗಳನ್ನು ಕಂಡು, ಸಾಕುವ ಆಸೆಯಾದುದೂ ಉಂಟು.

ರಜೆಯ ಸಮಯ ಬಂತೆಂದರೆ ಸರಿ, ಅವರೆಲ್ಲ ಕೂಡಿ ಒಂದು ನದಿಯ ದಂಡೆಯನ್ನೋ, ಕಾಡಿನ ಮರವನ್ನೋ ಏರಿ ಕುಳಿತುಕೊಳ್ಳುವರು. ಸುತ್ತಲಿನ ಪ್ರಪಂಚವನ್ನು ನೋಡುವುದೆಂದರೆ ದೊಡ್ಡ ಹಬ್ಬ ಅವರಿಗೆ. ನದಿಯ ದಂಡೆಯಲ್ಲಿ ಬಂದು ಕಲ್ಲಿನಂತೆ ಕುಳಿತಿರುವರು. ಮಧ್ಯಾಹ್ನ ಬಿಸಿಲಿಗೆ, ಮೆಲ್ಲಗೆ, ನೀರಿನ ಆಳದಿಂದ ಬರುವ ಮೊಸಳೆಯನ್ನು (ಚಿ. 27) ಕಂಡು ಹಿಗ್ಗುವರು. ಒಂದು ಬಾರಿ ಮೊಸಳೆಯ ಮರಿಗಳು ಮೊಟ್ಟೆಯೊಡೆದು ಬಂದುದು ಅವರಿಗೆ ಕಾಣಸಿಕ್ಕಿತ್ತು.

ಇನ್ನೂ ಮರದ ಮೇಲಿನ ಮಂಗ, ಮುಸು, ಕೆಂಚಳಿಲುಗಳನ್ನು ಕಂಡು, ಅವರು ಪಡುವ ಹಿಗ್ಗು ಯಾರೂ ಪಡಲಾರರಂತೆ. "ಅವರೆಲ್ಲ ನಮ್ಮ ದೋಸ್ತಿಗಳು" ಎಂದು ಕಿಟ್ಟು ಆಡಿಕೊಳ್ಳುವುದುಂಟು. ಬರೇ ಬಯಲುಪ್ರದೇಶಗಳಿಗೆ ಹೋದರೂ ಕಿಟ್ಟುವಿಗೆ ಬೇಸರವಿಲ್ಲ. ಕೆರೆಕುಂಟೆಯೊಂದರ ಬಳಿ ಅಡಗಿ ಕುಳಿತಿದ್ದು, ಕೊಕ್ಕರೆ, ಮೀನ್ಬುಳ್ಳಿಗಳು ತಮ್ಮ ಹೊಟ್ಟೆ ತುಂಬಿಸಿಕೊಳ್ಳುವುದನ್ನು ನೋಡುವರು. ಕೇರೆ, ನಾಗರಹಾವುಗಳು (ಚಿ. 26) ಕಪ್ಪೆಯನ್ನು ಹಿಡಿದು ನುಂಗುವುದನ್ನೂ ಕಾಣುವರು. ಪೊದೆಗಳ ಎಡೆಯಲ್ಲಿ ಮೊಲ, ಮುಂಗುಸಿಗಳ ಓಟವನ್ನೂ ಕಾಣುವರು.

ಒಂದು ಬಾರಿ ಕಿಟ್ಟುವು ಗೆಳೆಯರೊಂದಿಗೆ ಸಮುದ್ರತೀರಕ್ಕೆ ಹೋಗಿದ್ದನು. ಸಮುದ್ರದ ಅಂಚಿನಲ್ಲಿ ಸಾಲುಸಾಲಾಗಿ ಕುಳಿತ ಬೆಳ್ಳಕ್ಕಿಗಳನ್ನು ಕಂಡು (ಚಿ. 28) ಅವನಿಗಾದ ಆನಂದ ಅಷ್ಟಿಷ್ಟಲ್ಲ. ಅವುಗಳು ಹಾರುವುದು, ಅಲೆಗಳ ಮೇಲೆ ತೇಲಾಡುವುದು, ಬೆಸ್ತರ ಮೀನು ಬಲೆಗಳಿಂದ ಮೀನು ಕದಿಯಲು ಯತ್ನಿಸುವುದು—ಇವೆಲ್ಲ ಅವನ ಮನಸ್ಸನ್ನು ಮೋಹಿಸಿಬಿಟ್ಟುವು. ಅದನ್ನು ಕಂಡು ಅವನು —"ನಮ್ಮ ಬಳಗದವರು ಇಲ್ಲದ ಸ್ಥಳವಿಲ್ಲ, ಪುಟ್ಟು" ಎನ್ನುತ್ತಿದ್ದನು.

ನಮ್ಮ ಜಿಲ್ಲೆಯ ಆನೆ, ಹುಲಿ, ಚಿರತೆ, ಕೋತಿ, ಮಿಗ, ಹಾವು, ಹೆಬ್ಬಾವುಗಳು ನಮ್ಮಲ್ಲಿಗೇ ವಿಶೇಷವಾದವುಗಳಲ್ಲ. ತುಂಬಾ ಕಾಡು ಮಲೆಗಳಿರುವ ಬಂಗಾಳ, ಅಸ್ಸಾಮು ಪ್ರಾಂತದಲ್ಲೂ, ತೀರ ದೂರದೇಶವಾದ ಆಫ್ರಿಕಾ ಖಂಡದಲ್ಲೂ ಇವೆ. ನಮ್ಮ ಊರಿನಂತೆ ಉಷ್ಣಪ್ರದೇಶವಾಗಿದ್ದು, ಅಲ್ಲಿಯೂ ತುಂಬಾ ಕಾಡುಗಳಿವೆ.

---

೭. ಕಿಟ್ಟುವಿನ ಗೆಳೆಯರು

ಚಿಕ್ಕಂದಿನಲ್ಲಿ ಕಿಟ್ಟುವಿಗೆ ರಾಮು, ಪುಟ್ಟು ಇವರೊಡನೆಯೇ ಆಡಿ ಗೊತ್ತು. ಅವರು ನೆರೆಮನೆಯವರು; ಅಲ್ಲದೆ ಇವನ ಜಾತಿಯವರಾದುದರಿಂದ ಅವನ ಮನೆಗೆ ಆಗಾಗ ಬಂದು ಹೋಗುತ್ತಿದ್ದರು. ಅವನು ದೊಡ್ಡವನಾಗುತ್ತ ಬಂದಂತೆ ಅವನ ಗೆಳೆಯರು ಹೆಚ್ಚಿ

ದರು. ತನ್ನ ಅಣ್ಣನೊಡನೆ ಅವನೊಂದು ದಿನ ಗುಡ್ಡಕ್ಕೆ ದನ ಮೇಯಿಸಲು ಹೋಗಿದ್ದನು. ಆಗ ಇನ್ನೂ ಅವನು ಚಿಕ್ಕವನು. ಅಲ್ಲಿ ಅವರೆಲ್ಲ ಆಟವಾಡುವಾಗ, ಅವರಿಗೆ ತುಸು ದೂರದಲ್ಲಿ ಒಬ್ಬ ಹುಡುಗನು ಕೊಳಲೂದುತ್ತ ಕುಳಿತಿದ್ದನು. ಕಿಟ್ಟುವಿಗೆ ಕೊಳಲನ್ನು ಕೇಳಿ ಕಿವಿನೆಟ್ಟಗಾಯಿತು. ಅಲ್ಲಿಗೆ ಓಡಲು, ಅವನ ಅಣ್ಣನು ತಡೆದು ಹಿಡಿದು —"ಕಿಟ್ಟು, ಅಲ್ಲಿಗೆ ಹೋಗಬೇಡ. ಅವನು ಚೋಮನಲ್ಲವೆ? ಹೊಲೆಯರ ಹುಡುಗ!" ಎಂದನು. ಆ ದಿನವೇನೋ ಕಿಟ್ಟು ಚೋಮನ ಹತ್ತಿರ ಹೋಗಲಿಲ್ಲ. ಮುಂದೆ ದೊಡ್ಡವನಾಗುತ್ತ ಬಂದಂತೆ ಅವನಿಗೆ ಹಲವು ಹೊಲೆಯರ ಹುಡುಗರ ಪರಿಚಯವಾಯಿತು. ಅವರನ್ನು ಊರಹೊರಗೆ ಇರಿಸಿದ್ದಕ್ಕೆ ಅವನಿಗೆ ದುಃಖವೂ ಆಯಿತು. ಒಂದು ಸಾರಿ ಅವನು ಕದ್ದು ಚೋಮನ ಗುಡಿಸಲನ್ನು ನೋಡಹೋಗಿದ್ದನು. ಚೋಮನನ್ನು ಹಾಗೇಕೆ ದೂರವಿರಿಸುತ್ತಿದ್ದರೆಂದು ಅವನಿಗೆ ತಿಳಿಯಲಿಲ್ಲ. ಚೋಮನು ದನ ಮೇಯಿಸಲು ಬಂದರೆ, ದೂರದಿಂದಲೇ ಅವನ ಹತ್ತಿರ ಮಾತನಾಡುತ್ತ ಕಾಲಕಳೆಯುತ್ತಿದ್ದನು. ಚೋಮನು ಎಷ್ಟೋ ಬಾರಿ ಇವನಿಗೆ ಆಟವಾಡಲು ಚಿಕ್ಕಪುಟ್ಟ ಬುಟ್ಟಿಗಳನ್ನು ಮಾಡಿ ತರುತ್ತಿದ್ದನು. ಅವನ ಮನೆಯವರಿಗೆ ಬೇಸಾಯವಿಲ್ಲ. ಬುಟ್ಟಿ ಹೆಣೆಯುವುದು, ಚಾಪೆ ಹೆಣೆಯುವುದು ಇಂಥದರಿಂದಲೇ ಜೀವನ. ಚೋಮನ ಜಾತಿಯವರಿಗೆ ಕೊರಗರೆಂದು ಹೆಸರು. ಅವರು ನಮ್ಮ ಊರಿನ ಮೂಲ ನಿವಾಸಿಗಳಂತೆ (ಚಿ. 37). ನಾವೇ ಅನಂತರ ಈ ಊರಿಗೆ ಬಂದವರಂತೆ! ಊರಿನ ಹಿರಿಯರೇ ಈಗ ನಮ್ಮ ನಿರ್ದಯೆಯಿಂದ ಅನ್ನಕ್ಕಿಲ್ಲದೆ, ಊರ ಹೊರಗೆ ಇದ್ದಾರೆ. ಹೊಟ್ಟೆಗಾಗಿ ಕೆಲವು ಸಾರಿ ಅವರು ಬಿಲ್ಲು ಬಾಣ ಹಿಡಿದು, ಮೊಲ, ಮಿಗಗಳ ಶಿಕಾರಿಗೆ ಹೋಗುವುದೂ ಉಂಟು.

ಕಿಟ್ಟುವು ಶಾಲೆಗೆ ಹೋದಮೇಲೆ ಬೇರೆ ಹಲವು ಗೆಳೆಯರು ದೊರೆತರು. ಎಲ್ಲರೂ ಒಂದೇ ಜಾತಿಯವರಲ್ಲ. ಕೆಲವರು ಬಂಟರು, ಕೆಲವರು ಬಿಲ್ಲವರು, ಕೆಲವು ಕ್ರಿಶ್ಚನರು, ಇನ್ನು ಕೆಲವರು ಜೈನರು, ಒಬ್ಬನು ಮಾಪಿಳ್ಳೆ—ಹೀಗೆ ಬೇರೆ ಬೇರೆ ಜಾತಿ, ಮತದವರು ಅಲ್ಲಿ ಸೇರುತ್ತಿದ್ದರು. ಮನೆಯಲ್ಲಿ ಹೀಗೆ ಕಲೆಯುವುದಿಲ್ಲ. ಒಬ್ಬರಲ್ಲಿ ಒಬ್ಬರು ಊಟಮಾಡುವುದಿಲ್ಲ. ಆದರೆ ಶಾಲೆಯಲ್ಲಿ ಗೆಳೆಯರಂತೆ ವರ್ತಿಸುತ್ತಾರೆ. ಒಂದು ದಿನ ಚೋಮನೇ ಶಾಲೆಯನ್ನು ಸೇರಿದನು. ಆಗ ಉಳಿದ ಹುಡುಗರು ಸಿಟ್ಟಾದರು. ಕೆಲವರು ಶಾಲೆಯನ್ನು ಬಿಟ್ಟುಹೋದರು. ಒಂದೆರಡು ತಿಂಗಳು ಕಳೆಯಲು, ಬಿಟ್ಟು ಹೋದವರಲ್ಲಿ ಹಲವರು ತಿರುಗಿ ಬಂದು ಸೇರಿದರು. ಕಿಟ್ಟುವಿಗೆ ಇದೊಂದು ವಿಚಿತ್ರವಾಗಿ ಕಾಣಿಸಿತು.

ಕಿಟ್ಟುವಿನ ಗೆಳೆಯರಲ್ಲಿ ಆಲ್ಬರ್ಟ್, ಅಮ್ಮದೆ ಎಂಬವರಿಬ್ಬರು ಬೇರೆ ಮತದ ಗೆಳೆಯರಿದ್ದರು. ಪದ್ಮರಾಜನೆಂಬ ಜೈನ ಮತಸ್ಥನೂ ಇದ್ದನು. ಆಲ್ಬರ್ಟನು ಕ್ರಿಶ್ಚಿಯನನು. ಅವನ ಹಿರಿಯರು ಅದೇ ಊರಿನಲ್ಲಿ ಒಂದು ಕಾಲದಲ್ಲಿ ಹೊಲೆಯರಾಗಿದ್ದರಂತೆ. ಯಾರೋ ಪಾದ್ರಿಗಳು ಬಂದು, ಅವನನ್ನು ಕ್ರಿಶ್ಚಿಯನನ್ನಾಗಿ ಮಾಡಿದರು. ಕ್ರಿಶ್ಚಿಯನರು (ಚಿ. 40)

೫೦೦ ವರುಷಗಳ ಹಿಂದೆ ನಮ್ಮ ಜಿಲ್ಲೆಗೆ ಬಂದರು. ಅವರಿಗೂ ಮೊದಲು ಅರಬಿದೇಶದಿಂದ ಮುಸಲ್ಮಾನರು ಬಂದು ನಮ್ಮ ಜಿಲ್ಲೆಯಲ್ಲಿ ಅವರ ಧರ್ಮವನ್ನು ಪ್ರಚಾರಮಾಡಿದರು. ಅಮ್ಮದೆಯೂ ಮೊದಲಿನಿಂದಲೂ ಮುಸಲ್ಮಾನನಲ್ಲವಂತೆ. ಅವನ ಹಿರಿಯರು ಬಿಲ್ಲವರಾಗಿದ್ದರಂತೆ. ಯಾರೋ ಮಾಪಿಳ್ಳೆಯವರು (ಚಿ. 39) ಅವನ ಹಿರಿಯರನ್ನು ತಮ್ಮ ಜಾತಿಗೆ ಸೇರಿಸಿಕೊಂಡರಂತೆ. ಇದನ್ನು ಕೇಳಿ ಕಿಟ್ಟುವಿಗೆ ಕೆಲವು ಸಾರಿ ನಗು ಬರುವುದು. ಚೋಮನ ಜಾತಿಯನ್ನು ಮುಟ್ಟದವರು, ಆಲ್ಬರ್ಟ್, ಅಮ್ಮದೆಯವರನ್ನು ಮುಟ್ಟುವರೆಂದು ಹೇಳಿ ನಗುವನು.

ಹಬ್ಬ ಹುಣ್ಣಿಮೆ ದಿನಗಳಲ್ಲಿ ಕಿಟ್ಟುವು, ಪುಟ್ಟು, ರಾಮುವಿನೊಂದಿಗೆ ತನ್ನ ಊರ ದೇವಸ್ಥಾನಗಳಿಗೆ ಹೋಗುವನು. ಅಲ್ಲಿ ಬ್ರಾಹ್ಮಣರು ತುಂಬಾ ಕಲೆಯುವರು. ಇತರ ಜಾತಿಯವರು ಒಳಗಿನ ಗರ್ಭಗುಡಿಯತನಕ ಹೋಗುವುದಿಲ್ಲ. ಎಷ್ಟೋ ಜನರು ದೇವಾಲಯಕ್ಕೆ ಬರುವುದಿಲ್ಲ. ಚೋಮನ ಜಾತಿಯವರು ಹಬ್ಬಕ್ಕೆ ಬಂದರೆ, ಬಲು ದೂರದಲ್ಲೇ ನಿಂತಿದ್ದು, ಅಲ್ಲಿ ಡೋಲು ದುಡಿಗಳನ್ನು ಬಡಿಯುತ್ತ, ಕುಣಿಯುತ್ತ ಕಾಲಕಳೆಯುವರು (ಚಿ. 83). ಇದನ್ನೆಲ್ಲಾ ಕಂಡು, ಕಿಟ್ಟುವಿಗೆ–"ನಮಗೆ ದೇವಾಲಯ, ದೇವರು ಇದ್ದಹಾಗೆ ಆಲ್ಬರ್ಟ್, ಅಮ್ಮದೆ, ಪದ್ಮರಾಜ, ಚೋಮರಿಗೆ ಇಲ್ಲವೆ?" ಎಂದು ತೋರುವುದು. ಒಂದು ದಿನ ಅವರನ್ನು ಕೇಳಿದನು. ಆಲ್ಬರ್ಟನ ದೇವರು "ಯೇಸು"ವಂತೆ! ಅಮ್ಮದೆಗೆ "ಅಲ್ಲಾ"ನಂತೆ! ಚೋಮನಿಗೆ "ಪಂಜುರ್ಲಿ"ಯಂತೆ! ಪದ್ಮರಾಜನು "ತೀರ್ಥಂಕರ"ರೆನ್ನುವವರನ್ನು ಪೂಜಿಸುವನಂತೆ! ಕಿಟ್ಟುವು ಅವರ ದೇವರನ್ನು ಕಾಣುವ ಆಸೆಯಿಂದ ಅವರ ದೇವಾಲಯಗಳಿಗೂ ಹೋಗಿದ್ದನು.

ನಮ್ಮೂರಿನ ಹಲವು ಹಿಂದೂ ದೇವಾಲಯಗಳನ್ನು ಅವನು ಕಂಡಿದ್ದನು. ಒಮ್ಮೆ ತಂದೆಯ ಜತೆಯಲ್ಲಿ ಸುಬ್ರಹ್ಮಣ್ಯಕ್ಕೂ, ಇನ್ನೊಮ್ಮೆ ಧರ್ಮಸ್ಥಳ, ಉಡುಪಿ (ಚಿ. 29–31), ಕೊಲ್ಲೂರುಗಳಿಗೂ ಹೋಗಿದ್ದನು. ಅಲ್ಲಿನ ಉತ್ಸವಗಳನ್ನೂ ಜಾತ್ರೆಗಳನ್ನೂ ಕಂಡು ಹಿಗ್ಗಿದ್ದನು. ಅದನ್ನು ಕಂಡು,—"ಆಲ್ಬರ್ಟ್, ಅಮ್ಮದೆಯರು ಪಾಪ! ಅವರಿಗೆ ಜಾತ್ರೆಯಿಲ್ಲ" ಎಂದಂದುಕೊಂಡಿದ್ದನು. ಆದರೆ ಮುಂದೆ ಅವನ ಭ್ರಮೆಯು ಹೋಯಿತು.

ಆಲ್ಬರ್ಟನು ಅವನನ್ನೊಮ್ಮೆ ತನ್ನ ನೆರೆಯೂರಿನ ಇಗರ್ಜಿಗೆ (ಚಿ. 35–36) ಕರೆದುಕೊಂಡುಹೋಗಿದ್ದನು. ಇಗರ್ಜಿಯ ಕಟ್ಟಡವನ್ನು ಕಂಡು ಅವನ ಮನಸ್ಸು ಹಿಗ್ಗಿತು. ಒಳಕ್ಕೆ ಹೋದನು. ಅಲ್ಲಲ್ಲಿ ಮೇಣದ ಬತ್ತಿಗಳು ಉರಿಯುತ್ತಿದ್ದವು. ಒಂದು ಕಡೆಯಲ್ಲಿ ಯೇಸುವಿನ, ಮರಿಯಮ್ಮಳ ವಿಗ್ರಹಗಳಿದ್ದುವು. ಆಲ್ಬರ್ಟನು ಕಿಟ್ಟುವಿಗೆ ತಮ್ಮ ದೇವರ ಕಥೆಯನ್ನು ಹೇಳಿದನು. ಯೇಸುವು ನಮ್ಮ ದೇವರಂತೆ ಒಳ್ಳೆಯವನು ಎಂದುಕೊಂಡನು. ಇನ್ನೊಂದು ದಿನ ಅಮ್ಮದೆಯ ಜತೆಯಲ್ಲಿ ಮಜೀದಿಗೂ (ಚಿ. 34) ಹೋಗಿದ್ದನು. ಅಲ್ಲಿ ವಿಗ್ರಹವೇ ಇಲ್ಲ! ಆದರೂ ಅವರೆಲ್ಲ ನಮಿಸುತ್ತ ದೇವರನ್ನು ಪೂಜಿಸುತ್ತಿದ್ದರು. ಇತರರಷ್ಟೇ ಭಕ್ತಿಯಿಂದ ಮಜೀದಿಗೆ ಹೋಗುತ್ತಿದ್ದರು.

ಒಂದು ಬಾರಿ ಅವನು ಪದ್ಮರಾಜನ ಹೇಳಿಕೆಯಂತೆ ವೇಣೂರಿಗೆ ಹೋಗಿದ್ದನು. ಅಲ್ಲಿ 'ಗೋಮಟೇಶ್ವರ'ನ ಮಸ್ತಕಾಭಿಷೇಕವು ನಡೆಯುವುದಿತ್ತು. ಹದಿನೆರಡು ವರುಷಗಳಿಗೊಮ್ಮೆ ಆಗುವ ಹಬ್ಬವಿದು. ಕಾರ್ಕಳದಲ್ಲೂ ಇಂಥದೊಂದು ಭಾರಿ ವಿಗ್ರಹವಿದೆ (ಚಿ. 86). ಅದರ ಮುಂದೆ ನಾವು ನಿಂತರೆ, ಕಸವಾಗಿ ಕಾಣುವೆವು. ಅಷ್ಟು ದೊಡ್ಡ ವಿಗ್ರಹ. ಅಲ್ಲಿನ ವಿಗ್ರಹಕ್ಕೆ ೭೦ ವರುಷಗಳಿಗೊಮ್ಮೆ ಉತ್ಸವ. ಈ ಉತ್ಸವಗಳಿಗೆ ಉತ್ತರ ಹಿಂದೂಸ್ಥಾನದಿಂದಲೂ ಜೈನ ಯಾತ್ರಿಕರು ತಂಡತಂಡವಾಗಿ ಬರುವರು. ಉತ್ಸವದ ದಿನ ಹಾಲು, ತುಪ್ಪ ಮೊದಲಾದ ಹಲವು ಅಮೂಲ್ಯ ಒಡವೆಗಳನ್ನು ವಿಗ್ರಹದ ಮೇಲೆ ಸುರಿಯುವರು. ಮೂಡಬಿದರೆಯ "ಸಾವಿರಕಂಭದ ಬಸದಿ"ಯು ಜೈನ ದೇವಾಲಯವು (ಚಿ. 33). ಅದರಂಥ ಚೆಲುವಿನ ಗುಡಿ ನಮ್ಮ ಜಿಲ್ಲೆಯಲ್ಲೇ ಇಲ್ಲ.

ಸ್ವಲ್ಪ ಸಮಯದಲ್ಲಿ ಕ್ರಿಶ್ಚಿಯನರ "ಸಾಂತಮಾರಿ ಹಬ್ಬ"ವನ್ನೂ, ಮುಸಲ್ಮಾನರ "ಮೊಹರಮ್" ಹಬ್ಬವನ್ನೂ ಕಾಣುವ ಪ್ರಸಂಗವು ಕಿಟ್ಟುವಿಗೆ ದೊರೆಯಿತು. ಅದಕ್ಕೆ ತುಂಬಾ ಜನರು ನೆರೆಯುತ್ತಿದ್ದರು. ಮೊಹರಮ್ಮಿನ ಹುಲಿಯ ಕುಣಿತವನ್ನು ಕಂಡು ಕಿಟ್ಟುವೂ ಕೆಲವು ಬಾರಿ ಕುಣಿಯುವುದುಂಟು. ಇಷ್ಟೆಲ್ಲ ಕಂಡವನಿಗೆ ಜೋಮನ ದೇವರು ಎಂಥವರು? ಅವನ ಉತ್ಸವ ಹೇಗೆ ಎಂದು ತಿಳಿಯುವ ಆಸೆಯಾಯಿತು. ಅದನ್ನು ತನಗೆ ತೋರಿಸಲೇಬೇಕೆಂದು ಅಣ್ಣನನ್ನು ಕೇಳಿದನು. ಅಣ್ಣನು ಒಂದು ದಿನ ಅವನನ್ನು ಊರಿನ "ನೇಮ"ಕ್ಕೆ ಒಯ್ದನು (ಚಿ. 32). ಅವರ ದೈವದ ಗುಡಿಯು ದೇವಾಲಯದಷ್ಟು ದೊಡ್ಡದಿದ್ದಿಲ್ಲ. ಅಲ್ಲಿ ದೇವರ ವಿಗ್ರಹದ ಬದಲು ಹುಲಿ, ಕುದುರೆ ಮೊದಲಾದ ಪ್ರಾಣಿಗಳ ಮತ್ತು ಒಂದೆರಡು ಕ್ರೂರ ರೂಪವುಳ್ಳ ಭೂತಗಳ ಪ್ರತಿಮೆಗಳಿದ್ದುವು. ಜನರು ತುಂಬಾ ಸೇರಿದ್ದರು. ಎರಡು ಮೂರು ಜನರು ಘೋರವಾದ ಭೂತದ ರೂಪಗಳನ್ನು ಧರಿಸಿ ಕುಣಿಯುತ್ತಿದ್ದರು ಅದನ್ನು ಕಾಣಲು ಜನರು ಕಿಕ್ಕಿರಿದಿದ್ದರು. ದೈವದ ಕುಣಿತವು ಉಗ್ರವಾಗಿ, ಹೆದರಿಕೆಯನ್ನು ಹುಟ್ಟಿಸುವಂಥದಿತ್ತು. ಅಲ್ಲಿನ ದೇವರಿಗೆ ಹಣ್ಣು ಕಾಯಿಗಳನ್ನು ಕೊಡುವ ಬದಲು, ಕುರಿ ಕೋಳಿಗಳನ್ನು ತುಂಬಾ ಕಡಿಯುತ್ತಿದ್ದರು! "ಜೋಮನ ದೇವರು ಜೋರಿನ ದೇವರಪ್ಪ!" ಎಂದುಕೊಂಡು ಕಿಟ್ಟುವು ಮನೆಗೆ ಬಂದನು.

---

೮. ಹೊಟ್ಟೆ ತುಂಬಿಸಿಕೊಳ್ಳುವ ಉಪಾಯಗಳು

ಮುಂಗಾರು ಮಳೆಯು ತುಂಬ ಜಡಿಯಿತೆಂದರೆ, ಹಳ್ಳಿಯ ರೈತರು ಬಲು ಜೋರಿನಿಂದ ಕೆಲಸಮಾಡುವರು. ಕೆಲವರು ಬೆಳಕು ಹರಿಯುವ ಮೊದಲೇ ನೇಗಿಲು ನೊಗಗಳನ್ನು ಗದ್ದೆಗಳಿಗೆ ಕೊಂಡುಹೋಗಿ ಉಳತೊಡಗುವರು (ಚಿ. 41). ಹೊಲದಲ್ಲಿ ಸಾಕಷ್ಟು ನೀರು ನಿಂತಿತೆಂದರೆ, ಈ ಮೊದಲೇ ಬೆಳೆಯಿಸಿಟ್ಟ ಆಗೆಯನ್ನು (ಬತ್ತದ ಸಸಿಗಳನ್ನು) ಕಿತ್ತು ತಂದು, ದೂರದೂರವಾಗಿ ನೆಡುವರು. ಜೂನ್, ಜುಲಾಯಿಯ ಸಮಯವು

ನಮ್ಮ ಜಿಲ್ಲೆಯಲ್ಲಿ ಬೇಸಾಯದ ಸಮಯ. ಚಿಕ್ಕವರು, ದೊಡ್ಡವರೆಲ್ಲರು ದಣಿಯುವ ಸಮಯ. ಉಳುವುದು, ಬಿತ್ತುವುದು, ನೇಜಿ ನಡುವುದು, ಗೊಬ್ಬರ ಸಾಗಿಸುವುದು—ಇವೇ ಮೊದಲಾದ ತುಂಬಾ ಕೆಲಸಗಳಿರುವುವು. ಪುಟ್ಟ ಮಕ್ಕಳನ್ನು ಬಿಟ್ಟರೆ, ಉಳಿದವರೆಲ್ಲರೂ ಬೆಳಗಿನಿಂದ ಸಂಜೆಯ ತನಕ ಹೊಲಗಳಲ್ಲೇ ಇರುವರು. ತುಂಬಾ ಮಳೆಯ ಸಮಯವದು! ಅದರಲ್ಲೇ ಕೆಲಸಮಾಡಬೇಕು. ಕಿಟ್ಟುವಿನ ಮನೆಯವರು ರೈತರು. ಅವನ ಹಿರಿಯರು ಬ್ರಾಹ್ಮಣರಾದುದರಿಂದ, ತಾವಾಗಿ ಉಳದಿದ್ದರೂ, ಇತರ ಬೇಸಾಯದ ಕೆಲಸವನ್ನು ಮಾಡುವರು. ಕಿಟ್ಟುವೂ ಹಿರಿಯರ ಜತೆಯಲ್ಲಿ ಆಗಾಗ ಗದ್ದೆಗೆ ಹೋಗಿ ಬರುವನು. ನೇಜಿ ನಡುವ ಕೂಲಿಗಳು "ಲೇ ಲೇ ಲೆ" ಹಾಡುವುದನ್ನು ಸಂತೋಷದಿಂದ ಕೇಳುತ್ತ ನಿಲ್ಲುವನು. ಸುತ್ತ ಎಲ್ಲೆಲ್ಲೂ ಬೆಳೆದಿರುವ ಹಸುರು ಹಚ್ಚೆಯನ್ನು ಕಂಡು ಆನಂದಿಸುವನು. ಎಷ್ಟೋ ಸಮಯ, ಮಳೆಯ ನೀರಿನಿಂದ ತುಂಬಿ ಹರಿಯುವ ತೋಡು ಹಳ್ಳಗಳನ್ನು ಕಾಣುವನು.

ನೇಜಿ ನಟ್ಟು, ಬರೇ ಒಂದು ತಿಂಗಳು ಸಂದಿತೆಂದರೆ, ತಿರುಗಿ ಕೆಲವು ದಿನ ರೈತರಿಗೆ ಬಿಡುವಿಲ್ಲದ ಸಮಯ. ಬತ್ತದ ಪೈರಿನ ನಡುವೆ ಬೆಳೆದಿರುವ ಕಾಡು ಕಳೆಗಳನ್ನು ಕಿತ್ತು ಬಿಸಾಡುವ ಸಮಯ. ಅದಾದ ಬಳಿಕ ಊರವರಿಗೆ ೧—೨ ತಿಂಗಳ ಕಾಲ ವಿರಾಮ. ಸಮಯವೆಲ್ಲ ಬೇಸರದಿಂದ ಹೋಗಬೇಕು. ಆದರೆ ಅಲ್ಲಲ್ಲಿ ನಡೆಯುವ ಪುರಾಣವಾಚನ, ಸೋಣೆಯಾರತಿ ಮೊದಲಾದವುಗಳಲ್ಲದಿದ್ದರೆ ತೀರ ಬೇಸರದ ಸಮಯವೇ ಸರಿ. ಮಳೆಯು ಇನ್ನೂ ಆಗಾಗ ಬರುತ್ತಲೇ ಇರುವುದು.

ನಾಲ್ಕು ತಿಂಗಳ ಸಮಯ ಜಡಿಮಳೆಯು ಬಂದು, ಕೆರೆ ತೊರೆಗಳು ತುಂಬಿ, ನದಿಗಳು ಉಕ್ಕಿಹೋಗಲು, ತಿರುಗಿ ಕೆಲಸದ ಸಮಯ ಬರುವುದು. ನದಿಗಳ ಇಬ್ಬದಿಯಲ್ಲಿ ಅದು ತಂದುಹಾಕಿದ ಕೆಸರಿನಿಂದ ಸೊಕ್ಕಿದ ಬೆಳೆಯ ಚೆಲುವನ್ನು ಹೇಳಿ ತೀರದು. ಬಹು ಹೆಚ್ಚು ಮಳೆಯಿದ್ದರೆ, ಬಯಲಿಗೆ ಬಯಲೇ ನೀರಿನಡಿ ಮುಳುಗಿ ಕೊಳೆಯಲೂ ಬಹುದು. ಸರಿ, ಈಗ ತಿರುಗಿ ಬಿಸಿಲು ಬೀಳುವುದು. ಮಳೆಯು ನಾಲ್ಕೆಂಟು ದಿನಗಳಿಗೊಮ್ಮೆ ಹನಿದರೆ ಬಹಳವಾಯಿತು. ಹಸುರಾದ ಬಯಲುಗಳು ಹಣ್ಣಾಗಿ ತೆನೆ ಹೊತ್ತು, ಮಗುಚಿ ಬೀಳುವುವು. ಹಸುರೆಲ್ಲ ಹೋಗಿ, ಹೊನ್ನಿನ ಹಳದಿ ಬಣ್ಣ ಬರುವುದು. ರೈತರೆಲ್ಲ ಹೊಲ ಗದ್ದೆಗಳಿಗೆ ಓಡುವರು. ಪೈರನ್ನು ಕತ್ತರಿಸಿ, ಮನೆಗೆ ಸಾಗಿಸುವರು. ಈ ಸಮಯ ಮಳೆ ಬಂತೆಂದರೆ ರೈತರಿಗೆ ಹೇಳಲಾರದ ತೊಂದರೆ.

ಬತ್ತದ ಮೊದಲನೆ ಬೆಳೆಯು ಮುಗಿಯಲು, ನೀರಿನ ಅನುಕೂಲತೆ ಇರುವಲ್ಲಿ, ಎರಡನೆಯ ಬೆಳೆಗಾಗಿ ಉತ್ತು, ಬಿತ್ತುವರು. ಎರಡನೆಯ ಬೆಳೆಯೂ ಬತ್ತದ ಬೆಳೆಯೇ. ಅದನ್ನು ಬೆಳೆಯಲು ನೀರು ಸಾಲದೆ ಹೋದರೆ, ತೋಡುಗಳನ್ನು ಕಟ್ಟಿ, ಜಲಸಂಗ್ರಹ ಮಾಡಿ (ಚಿ. 42) ಬೇಸಾಯ ಮಾಡುವರು ನೀರಿನ ಅನುಕೂಲವಿಲ್ಲದವರು ಹುರುಳಿ, ಉದ್ದು ಮೊದಲಾದ ಧಾನ್ಯಗಳನ್ನು ಬೆಳೆಯುವರು. ಎಷ್ಟೋ ಹೊಲಗಳಲ್ಲಿ ಮೂರನೆಯ

ಕೊಳಕೆಯ ಬೆಳೆಯನ್ನು ಬೆಳೆಯಿಸುವರು. ಅತಿರೇಕವಾಗಿ ಮಳೆ ಬೀಳುವ ಪ್ರದೇಶವಾದುದರಿಂದ, ಬಯಲು ಸೀಮೆಯಂತೆ ನಮ್ಮಲ್ಲಿ ಹತ್ತಿ, ಗೋಧಿ, ಜೋಳಗಳನ್ನು ಬೆಳೆಯಿಸುವುದಿಲ್ಲ. ಮೂರು ಬೆಳೆಗಳನ್ನು ಬೆಳೆಯಿಸಿದರೂ ರೈತನ ಜೀವನವು ಬಲು ಕಠಿಣವೇ ಸರಿ. ಧನಿಗೆ ಗೇಣಿಯನ್ನೂ, ಸರಕಾರಕ್ಕೆ ಕಂದಾಯವನ್ನೂ ಸಲಿಸಿ, ಅವನಿಗೆ ಉಳಿಯುವುದೇನಿಲ್ಲ. ಬಂದ ಬತ್ತದಲ್ಲೇ ಕೆಲವನ್ನು ಮಾರಿ, ಅವರು ಬಟ್ಟೆಬರೆಗಳನ್ನು ಕೊಳ್ಳಬೇಕು. ನಮ್ಮ ಜಿಲ್ಲೆಯಲ್ಲಿನ ಮುಕ್ಕಾಲು ಮೂರು ವೀಸ ಜನರಿಗೆ ಬೇಸಾಯದಿಂದಲೇ ಜೀವನವಾಗಬೇಕು. ಮುಖ್ಯ ಬೆಳೆಯು ಬತ್ತವೇ (ಚಿ. 43). ಎಷ್ಟೋ ರೈತರು ಗುಡ್ಡದ ಅಂಚನ್ನು ಸವರಿ, ಮಳೆಗಾಲಕ್ಕೆ ರಾಗಿ, ಬತ್ತಗಳ ಕುಮರಿ ಸಾಗುವಳಿ ಮಾಡುವರು. ಕೆಲವು ರೈತರಿಗೆ ಬತ್ತದ ಸಾಗುವಳಿಯಿಲ್ಲದೆ ಜೀವನವಾಗಬೇಕು. ಕರಾವಳಿಯಲ್ಲಿನ ರೈತರು ಹಲವರು ತೆಂಗಿನ ತೋಟಗಳನ್ನು (ಚಿ 45) ಬೆಳೆಯಿಸಿ, ಅದರ ಸಿಪ್ಪೆಯಿಂದ ಹಿಡಿದು ಕಾಯಿಯ ತನಕ ಮಾರಿ ಜೀವಿಸುವರು. ಕಿಟ್ಟುವಿನ ಮನೆಯವರು ಬತ್ತದ ಬೇಸಾಯದ ಜೊತೆಯಲ್ಲಿ ಅಡಿಕೆ ವ್ಯವಸಾಯ ಮಾಡುವರು. ಅಡಿಕೆಗೆ ಪರದೇಶದ ಗಿರಾಕಿಗಳಿಂದಾಗಿ ಬೆಲೆ ಸಿಗಬೇಕು. ಗುಡ್ಡದ ಸಂದುಗಳಲ್ಲಿ ಇವುಗಳ ತೋಟ ಚೆನ್ನಾಗಿ ಆಗುತ್ತವೆ (ಚಿ. 46) ಅವು ಹೂ ಬಿಡುವ ಸಮಯ ಎಲ್ಲೆಲ್ಲೂ ಪರಿಮಳವೇ! ಅಲ್ಲಲ್ಲಿ ನಮ್ಮ ಜಿಲ್ಲೆಯಲ್ಲಿ ಕಬ್ಬಿನ ತೋಟಗಳನ್ನು (ಚಿ. 43) ಕಾಣಬಹುದು. ಕರಾವಳಿಯಲ್ಲಿನ ಮರಳುಭೂಮಿಯ ಮೇಲೆ ಹೊಗೆಸೊಪ್ಪಿನ ಸೊಗಸಾದ ಪೈರನ್ನು (ಚಿ. 44) ಬೆಳೆಯಿಸುತ್ತಾರೆ. ಈ ರೀತಿ ನಾನಾ ಬಗೆಯ ಕೃಷಿಗಳಿಂದ ನಮ್ಮವರ ಜೀವನ ಸಾಗಬೇಕು.

ಕಿಟ್ಟುವು ಸಂಪಾಜೆಗೆ ಹೋದಾಗ, ಒಮ್ಮೆ ಘಟ್ಟದ ಅಂಚಿನಲ್ಲಿ ದೊಡ್ಡ ರಬ್ಬರು ಮರಗಳ ತೋಟವನ್ನು (ಚಿ. 47) ನೋಡಿದ್ದನು. ಅವುಗಳ ತೊಗಟೆಯನ್ನು ಗೀರಿ, ರಸವನ್ನು ತೆಗೆಯುತ್ತಿದ್ದರು. ಅದೇನೆಂದು ಅವನು ಅಜ್ಜನನ್ನು ಕೇಳಿದನು — "ಇದೇ ರಬ್ಬರು ತೋಟವಲ್ಲವೇ?" ಎಂದನು. ಹಾಗೆ ತೆಗೆದ ಹಾಲನ್ನು ಗಟ್ಟಿಮಾಡಿ ಪರದೇಶಗಳಿಗೆ ಕಳುಹಿಸುವರು. ಅಲ್ಲಿಂದ ಅದು ಪೆನ್ಸಿಲಿನ ಗೆರೆಯನ್ನು ಉಜ್ಜುವ ರಬ್ಬರಾಗಿ ಬರುವುದು. ಸಂಪಾಜೆಯು ಕೊಡಗು ಜಿಲ್ಲೆಗೆ ಸೇರಿದುದು. ನಮ್ಮ ಜಿಲ್ಲೆಯ 'ಕಡಮಕಲ್ಲು' ಎಂಬಲ್ಲೂ ರಬ್ಬರನ್ನು ಬೆಳೆಯಿಸುವರು.

ಕಿಟ್ಟುವಿನ ಊರಲ್ಲಿ ಬೇಸಾಯಮಾಡದೆ ಜೀವನ ಸಾಗಿಸುವವರೂ ಇದ್ದಾರೆ. ಒಂದಲ್ಲ ಒಂದು ಕೆಲಸದಿಂದ ಅವರ ಜೀವನ ಸಾಗಬೇಕಷ್ಟೆ. ಅವನ ಊರಿನ ಹೊಲೆಯರು ಬೇಸಾಯದ ಸಮಯದಲ್ಲಿ ಕೆಲಸಕ್ಕೆ ಬಂದರೂ, ಉಳಿದ ಸಮಯ ಊರನ್ನು ಬಿಟ್ಟು, ಘಟ್ಟದಲ್ಲಿನ ಕಾಫಿ ತೋಟಗಳಿಗೆ ಕೂಲಿಗೆ ಹೋಗುತ್ತಾರೆ. ಈ ರೀತಿಯ ಕೂಲಿಯಲ್ಲದಿದ್ದರೂ ಜೀವನ ಸಾಗುತ್ತದೆ.

ಅನ್ನವನ್ನು ಬಿಟ್ಟು ಎಷ್ಟು ಸಾಮಗ್ರಿಗಳು ನಮಗೆ ಬೇಡ? ಅವನ್ನೆಲ್ಲ ತಯಾರಿಸುವವರು ಯಾರು? ನೇಗಿಲೊಂದನ್ನು ತಯಾರಿಸಲು, ಮನೆಕಟ್ಟಲು ಬಡಗಿ (ಚಿ. 51) ಬೇಕು;

ಕಮ್ಮಾರನು (ಚಿ. 48) ಬೇಕು. ಮಣ್ಣಿನ ಕೆಲಸದವನು ಬೇಕು. ಪ್ರತಿ ಹಳ್ಳಿಯಲ್ಲೂ ಇಂಥವರು ಇರುತ್ತಾರೆ. ಪೈರು ಕಟಾವಿನ ಸಮಯ ಕಮ್ಮಾರನ ತಿದಿಯ ಮುಂದೆ ಕುಳಿತು, ಅವನು ಕಬ್ಬಿಣವನ್ನು ಹೊಡೆಯುವಾಗ ಕಿಡಿಯು ಹಾರುವುದನ್ನು ನೋಡಲು ಎಷ್ಟು ಚೆಂದ! ಇನ್ನೂ ಹಳ್ಳಿಯಲ್ಲಿ ಚಿನ್ನದ ಕೆಲಸಮಾಡುವ ಅಕ್ಕಸಾಲಿಗರು, ಮೆಟ್ಟನ್ನು ಹೊಲಿಯುವ ಸಮಗಾರರು (ಚಿ. 49), ಬಟ್ಟೆನೇಯುವ ನೇಕಾರರು (ಚಿ. 52), ಎಣ್ಣೆಗಾಣ ತಿರುಗಿಸುವ ಗಾಣಿಗರು, ಮಡಕೆಕುಡಿಕೆಗಳನ್ನು ಮಾಡುವ ಕುಂಬಾರರು (ಚಿ. 50), ಬಟ್ಟೆಮಡಿ ಮಾಡುವ ಮಡಿವಾಳ ಮೊದಲಾದವರು ಊರಿನ ಹಿತಕ್ಕಾಗಿ ದುಡಿಯುವರು. ಅವರ ಮಕ್ಕಳೂ ಊರ ಸಾಲೆಗೆ ಬರುವರು. ಕಿಟ್ಟುವಿನ ಊರಲ್ಲಿ ಒಂದು ಕಲ್ಲಣೆಯೂ (ಚಿ. 54) ಉಂಟು. ಸುತ್ತಲಿನ ಪ್ರದೇಶದವರು ಮನೆಯನ್ನು ಕಟ್ಟುವ ಕಲ್ಲಿಗಾಗಿ ಅಲ್ಲಿಗೇ ಬರುತ್ತಾರೆ. ಅಲ್ಲಿ ಕಲ್ಲುಕುಟ್ಟಿಗರು ನೆಲದಿಂದ ಕಲ್ಲನ್ನು ಕಡಿದು ತೆಗೆಯುತ್ತಾರೆ.

ಕಿಟ್ಟುವು ಒಂದು ದಿನ ಸಮುದ್ರತೀರಕ್ಕೆ ಹೋಗಿದ್ದನೆಂದೆನಷ್ಟೆ (ಚಿ 53). ಅಲ್ಲಿನ ಜನರ ಜೀವನಕ್ರಮವು ಅವನಿಗೆ ತೀರ ವಿಚಿತ್ರವಾಗಿ ಕಾಣಿಸಿತು. ಸಮುದ್ರದಲ್ಲಿ ಎತ್ತರವಾದ ತೆರೆಗಳು ಉರುಳುವುದನ್ನು ಕಂಡರೆ ಅವನ ಎದೆ ಬಡಿಯುತ್ತಿತ್ತು. ಆದರೆ ಇವನ ಕಣ್ಮುಂದೆಯೇ ಚಿಕ್ಕದೊಂದು ಪಾತಿಯನ್ನೇರಿ, ಇಬ್ಬರು ಹುಡುಗರೂ, ನಾಲ್ಕಾರು ಮಂದಿ ಹಿರಿಯರೂ ಸಮುದ್ರದ ತೆರೆಗಳನ್ನೇರಿ ಹೋದರು. ದೋಣಿ ಮೇಲೆ ಕೆಳಗೆ ಉಯ್ಯಾಲೆಯಂತೆ ತೂಗಿ ತೇಲಾಡಿದರೂ ಅವರಿಗೆ ಅಂಜಿಕೆಯೇ ಇಲ್ಲ. ಅವರಂತೆ ಹಲವು ದೋಣಿಕಾರರು ಸಮುದ್ರಕ್ಕೆ ಹೋದರು. ಇವರ ದೋಣಿಗಳಲ್ಲೆಲ್ಲ ಬಲೆಯ ರಾಶಿಯಿತ್ತು. ಒಂದು ದೊಡ್ಡ ದೋಣಿಯು ನೂರಾರು ಗಜ ಉದ್ದದ ಬಲೆಯನ್ನು ಸಾಗಿಸಿಕೊಂಡು ನಡೆಯಿತು. ಎರಡು ಮೂರು ತಾಸಿನಲ್ಲಿ ಪುಟ್ಟ ದೋಣಿಯವರು ಮರಳಿಬಂದರು. ಹೋಗುವಾಗ ಬರಿದಾಗಿ ಹೋದ ದೋಣಿಗಳಲ್ಲಿ ಬರುವಾಗ ಮೀನಿನ ರಾಶಿ. ಕೊನೆಗೆ ಹೋದ ದೋಣಿಯವರು ತಮ್ಮ ಮಾರಿಬಲೆಯನ್ನು ಸಮುದ್ರದಲ್ಲಿ ಬೀಸಿದ್ದರು. ಬೆಸ್ತರು ದಡದ ಮೇಲೆ ನಿಂತು, ಅದರ ಎರಡು ಬದಿಗಳನ್ನು ಎರಡು ಕಡೆಗಳಿಂದ ಎಳೆಯ ತೊಡಗಿದರು. ಹನುಮಂತನ ಬಾಲದಂತೆ ಉದ್ದವಾಗಿದ್ದ ಆ ಬಲೆಯನ್ನು ಎಳೆದಷ್ಟು ಮುಗಿಯದು. ಆಯಾಸ ಪರಿಹಾರಕ್ಕೆ ಹಾಡಲು ತೊಡಗಿದರು. ಎಳೆದು ಎಳೆದು ದಣಿವಾಯಿತು. ಈಗ ದೊಡ್ಡ ಬಲೆಯ ನಡುಭಾಗವು ಸಮೀಪಿಸಿತು. ಏನು ಬಂದಿತೆಂದು ಸುತ್ತಮುತ್ತ ನಿಂತಿದ್ದ ಬೆಸ್ತರ ಕೂಟವೇ ಅಲ್ಲಿ ಸೇರಿತು. ಮೀನಿನ ಆಸೆಯಿಂದ ಆಕಾಶದಲ್ಲಿ ಕಾಗೆ, ಹದ್ದು, ಬೆಳ್ಳಕ್ಕಿಗಳು ಗುಂಪಾಗಿ ಹಾರತೊಡಗಿದವು. ಆ ದಿನದ ಬಲೆಯೇ ಬಲೆ! ರಾಶಿರಾಶಿಯಾಗಿ ಮೀನು ಬಂದಿತ್ತು. ಕೆಲವು ಮೀನುಗಳು ತೋಳಿಗೂ ಉದ್ದವಾಗಿದ್ದುವು. ಒಂದೆರಡು ಕಡೆಗಳಲ್ಲಿ ಮೀನುಗಳು ಬಲೆಯನ್ನು ಹರಿದು, ತಪ್ಪಿಸಿಕೊಂಡು ಹೋಗಿದ್ದುವು. ಮೀನುಗಳ ಎಡೆಯಲ್ಲಿ ಕಡಲಹಾವುಗಳೂ ಬಂದಿದ್ದುವು. ಬೆಸ್ತರ ಪಡೆಯು ನಿಮಿಷದಲ್ಲಿ ಈ ಮೀನನ್ನು ರಾಶಿಹಾಕಿತು. ಅಲ್ಲೇ ಅದನ್ನು ಹರಾಜು

ಮಾಡಿದರು. '೫ ರೂಪಾಯಿ! ೧೦ ರೂಪಾಯಿ!' ಎಂದು ಕೂಗಿದರು. ಬಂದ ಮೀನನ್ನು ಒಬ್ಬ ಮಾಪಿಳ್ಳೆ ವ್ಯಾಪಾರಿಯು ೩೦೦ ರೂಪಾಯಿಗಳಿಗೆ ಕೊಂಡುಕೊಂಡನು.

ಸರಿ! ಮೀನನ್ನು ಒಯ್ದರು. ಕೆಲವರು ಅವನ್ನು ಸೀಳಿ, ಉಪ್ಪುಹಾಕಿ ಒಣಗಿಸಿದರು. ಇತ್ತ ಕೆಲವರು ಹರಿದ ಬಲೆಯನ್ನು ಸರಿಮಾಡತೊಡಗಿದರು. ನಾಳೆಗೆ ತಿರುಗಿ ಬಲೆ ಬೀಸುವರು. ಸಿಕ್ಕಿದರೆ ೫೦೦ ರೂಪಾಯಿಗಳ ಮೀನು ಸಿಗಬಹುದು. ಇಲ್ಲವಾದರೆ ಬರೀ ಬಲೆಯನ್ನು ಎಳೆಯಬೇಕಾಗಲೂ ಬಹುದು. ಬೆಸ್ತರ ಅದೃಷ್ಟ. ಬೇಸಾಯಕ್ಕಿರುವಂತೆ ಇಲ್ಲೂ ಮೀನುಬರುವ ಕಾಲವಿದೆ. ಕೆಲವು ಜಾತಿಯ ಮೀನುಗಳು ಬಂದರೂ ಉಪಯೋಗವಿಲ್ಲ.

ಸಮುದ್ರದ ಉಪ್ಪುನೀರು ನಮ್ಮಲ್ಲಿ ತುಂಬಾ ಇದೆ. ಆದರೂ ನಾವು ಉಪ್ಪನ್ನು ಪರವೂರುಗಳಿಂದ ತರಿಸುತ್ತಿದ್ದೇವೆ. ಕುಂದಾಪುರದಲ್ಲಿ ಉಪ್ಪಿಗಾಗಿ ಮಾಡಿದ ದೊಡ್ಡ ದೊಡ್ಡ ಆಗರಗಳು ಈಗಲೂ ಇವೆ ಮೊದಲು ನಮ್ಮಲ್ಲಿ ಉಪ್ಪು ತುಂಬಾ ಆಗುತ್ತಿತ್ತು. ಈಗ ಆ ಕೈಗಾರಿಕೆಯು ಸರಕಾರದವರ ವಶವಿರುವುದರಿಂದ, ಅವರೇ ಅದನ್ನು ಮಾಡಿಸುತ್ತಾರೆ. ಎಲ್ಲೆಲ್ಲೂ ಅದನ್ನು ಮಾಡಲು ಅಪ್ಪಣೆ ಕೊಡುವುದಿಲ್ಲ.

ಜೀವನವನ್ನು ಸಾಗಿಸಲು ಎಷ್ಟೊಂದು ಉಪಾಯಗಳು ಬೇಕು! ಬೇಸಾಯ, ಕೈಕಸುಬುಗಳು ಹಳ್ಳಿಯವನಿಗೆ ಉಣಿಸನ್ನಿತ್ತರೆ, ಬೆಸ್ತನಿಗೆ ಮೀನನ್ನು ಹಿಡಿಯುವುದರಿಂದ ಜೀವನ. ನಗರದಲ್ಲಿ ವಾಸಮಾಡುವವರ ಜೀವನಕ್ರಮ ಇನ್ನೂ ಭಿನ್ನವಾಗಿದೆ. ಕೆಲವರು ಸರಕಾರಿ ನೌಕರಿಯಿಂದಲೂ, ಹಲವರು ವ್ಯಾಪಾರ ಮೊದಲಾದುವುಗಳಿಂದಲೂ ಜೀವಿಸುವರು. ಆದರೆ ಮಂಗಳೂರಿನಂಥ ಶಹರಿನಲ್ಲಿ ಸಾವಿರಾರು ಜನರು ಬೇರೆ ಬೇರೆ ರೀತಿಯಿಂದ ದುಡಿಯುವರು. ಕಿಟ್ಟುವು ಒಮ್ಮೆ ತಂದೆಯೊಂದಿಗೆ ಅಲ್ಲಿನ ಕಾರ್ಖಾನೆಗಳಿಗೆ ಹೋಗಿದ್ದನು. ಗೇರುಬೀಜ, ಕಾಫಿ (ಚಿ. 55–57) ಕಾರ್ಖಾನೆಗಳಲ್ಲಿ ಬೀಜವನ್ನು ಶುಚಿಮಾಡುವ ಸಾವಿರಾರು ಜನ ಗಂಡಸು ಹೆಂಗಸರನ್ನು ಕಂಡಿದ್ದನು. ಅಲ್ಲಿನ ಹೆಂಚಿನ ಕಾರ್ಖಾನೆಗಳಲ್ಲಿ (ಚಿ. 58) ಮಣ್ಣನ್ನು ಹೊರುವ, ನಯಮಾಡುವ, ಹೆಂಚನ್ನು ಅಚ್ಚುಮಾಡುವ ಹಲವು ಜನರನ್ನು ಕಂಡಿದ್ದನು. ಒಂದೊಂದು ಕಾರ್ಖಾನೆಯು ಸಾವಿರಾರು ಜನರಿಗೆ ಕೆಲಸ ಕೊಡುವುದು. ಇವಲ್ಲದೆ, ಹಲವು ಚಿಕ್ಕಪುಟ್ಟ ಕೈಗಾರಿಕೆಗಳು ನಮ್ಮ ನಗರಗಳಲ್ಲಿವೆ. ಮಂಗಳೂರಿನಲ್ಲಿ ಹೆಂಚಿನಷ್ಟೇ ಪ್ರಸಿದ್ಧವಾದ ಇನ್ನೊಂದು ಕೈಗಾರಿಕೆಯೆಂದರೆ ಮುದ್ರಣವು (ಚಿ. 59). ಅದಿಲ್ಲದಿದ್ದರೆ, ಈ ಪುಸ್ತಕವು ಉಂಟಾಗುತ್ತಿರಲಿಲ್ಲ. ನಮ್ಮಲ್ಲಿಯ ಛಾಪಖಾನೆಗಳು ಇಂಗ್ಲಿಷು, ಕನ್ನಡ, ಮರಾಠಿ, ಗುಜರಾಥಿ ಬರಹಗಳಲ್ಲಿ ಪುಸ್ತಕಗಳನ್ನು ಅಚ್ಚುಹಾಕಿಸುತ್ತವೆ. ಈ ಕಸುಬಿನಿಂದ ನೂರಾರು ಜನರ ಜೀವನವು ಸಾಗುತ್ತದೆ.

ಪಟ್ಟಣದ ಜನಸಂಖ್ಯೆ ಗದ್ದಲಗಳು ಹಳ್ಳಿಗಳಲ್ಲಿಲ್ಲ. ಹಳ್ಳಿಗಳ ಶಾಂತಿ, ಚೆಲುವುಗಳು ಪಟ್ಟಣದಲ್ಲಿಲ್ಲ!

---

೯. ಹಳ್ಳಕ್ಕೆ ಅದರ ಹಾದಿ; ಹಳ್ಳಿಗೆ ನಮ್ಮ ಹಾದಿ

ಒಂದು ದಿನ ಕಿಟ್ಟುವಿನ ಉಪಾಧ್ಯಾಯರು ಒಂದು ವರ್ತಮಾನ ಪತ್ರವನ್ನು ಹಿಡಿದುಕೊಂಡು ಓದುತ್ತಿದ್ದರು. ಪಾಠದ ಘಂಟೆಯಾಯಿತು. ಕಿಟ್ಟುವು ಅವರನ್ನು ತಮ್ಮ ತರಗತಿಗೆ ಕರೆಯಲು ಹೋದನು. ಉಪಾಧ್ಯಾಯರ ಮನಸ್ಸೆಲ್ಲ ಬೇರೆಯಾಗಿತ್ತು. ಅವರು—"ಸ್ವಲ್ಪ ತಡಿ, ಇದನ್ನು ಮುಗಿಸಿ ಬರುತ್ತೇನೆ" ಎಂದರು. ಕಿಟ್ಟುವಿಗೆ—'ಏನನ್ನು?' ಎಂದು ಕೇಳುವ ಆಸೆಯಾಯಿತು. ಕೇಳಿದನು. ಅವರು ಓದು ಮುಗಿಸಿ ತರಗತಿಗೆ ಬಂದರು. "ನಿಮಗೆಲ್ಲ ಒಂದು ಹೊಸ ಸುದ್ದಿಯನ್ನು ಹೇಳುತ್ತೇನೆ" ಎಂದರು. ಎಲ್ಲರೂ - "ಏನು? ಏನದು?" ಎಂದು ಕೇಳಿದರು. ಕಿಟ್ಟುವು—"ಆಗ ಓದುತ್ತಿದ್ದುದನ್ನೆ?" ಎಂದು ಕೇಳಿದನು. "ಅಹುದು" ಎಂದರು. ಜಪಾನು ದೇಶದಲ್ಲಿ ಭಯಂಕರ ಭೂಕಂಪವಾಯಿತೆಂದೂ, ಅದರಿಂದಾಗಿ ಸಾವಿರಾರು ಮನೆಗಳು ಮುರಿದು ಬಿದ್ದುವೆಂದೂ ಹೇಳಿದರು. ಕಿಟ್ಟುವು–"ಯಾವಾಗ?" ಎಂದು ಕೇಳಿದನು. ಉಪಾಧ್ಯಾಯರು–"ಮೊನ್ನೆ ಆದಿತ್ಯವಾರ" ಎಂದರು. ಆದಿತ್ಯವಾರ ಕಳೆದು ಅಂದಿಗೆ ನಾಲ್ಕು ದಿನವಾಗಿತ್ತಷ್ಟೆ. ಜಪಾನು ನಮ್ಮ ಊರಿನಿಂದ ೪೦೦೦ ಮೈಲು ದೂರದಲ್ಲಿದೆಯೆಂದು ಅವನು ಕೇಳಿದ್ದನು. ಅಷ್ಟು ದೂರದ ಸುದ್ದಿ ನಾಲ್ಕು ದಿನದಲ್ಲಿ ತಮಗೆ ಹೇಗೆ ಮುಟ್ಟಿತೆಂದು ಆಶ್ಚರ್ಯವಾಯಿತು.

ಜಪಾನಿನಲ್ಲಿ ಭೂಕಂಪವು ನಡೆದ ದಿನವೇ ಮದ್ರಾಸಿಗೆ ತಂತಿವಾರ್ತೆಯು ಬಂತೆಂದೂ, ಅಲ್ಲಿ ಅದು ಪತ್ರಿಕೆಯಲ್ಲಿ ಅದೇ ದಿನ ಪ್ರಕಟವಾಗಿ ಆ ಪತ್ರಿಕೆಯು ೨೪ ತಾಸಿನೊಳಗೆ ಮಂಗಳೂರಿಗೆ ಬಂದು ಮುಟ್ಟಿ, ಮರುದಿನ ಅದು ಅಲ್ಲಿಂದ ಅವರ ಹಳ್ಳಿಗೆ ಮೋಟಾರಿನ ಮುಖಾಂತರ ಮುಟ್ಟಿತೆಂದೂ ಹೇಳಿದರು. ಜಪಾನಿಗೂ ಮದ್ರಾಸಿಗೂ ೪೦೦೦ ಮೈಲಿ ದೂರ. ಅಲ್ಲಿನ ವಾರ್ತೆಯು ಬರಲು ಒಂದು ಘಂಟೆ ಕೂಡ ಬೇಕಿಲ್ಲವಂತೆ. ಮಂಗಳೂರಿನಲ್ಲಿ ಅಂಥ ಪತ್ರಿಕೆಯಿದ್ದರೆ ಈ ವರ್ತಮಾನವು ಅದೇ ದಿನ ಮುಟ್ಟಿ, ಕಿಟ್ಟುವಿನ ಹಳ್ಳಿಗೆ ಒಂದು ದಿನದೊಳಗಾಗಿ ಬರುವುದು ಸಾಧ್ಯವಿದೆ.

ಈ ವರ್ತಮಾನವು ಬಂದ ಹತ್ತೆಂಟು ದಿನಗಳಲ್ಲಿ ಆ ಭೂಕಂಪದ ಅನಾಹುತದ ಚಿತ್ರವು ವರ್ತಮಾನ ಪತ್ರಗಳಲ್ಲಿ ಬಂತು. ಚಿತ್ರವು ಜಪಾನಿನಿಂದ ಮದ್ರಾಸಿಗೆ ಹಡಗಿನಲ್ಲಿ ಬರುವುದಾದರೆ ೧೫–೨೦ ದಿನಗಳಾದರೂ ಬೇಕು. ಆದರೆ ಆ ಚಿತ್ರವು ವಿಮಾನಗಳ ಮುಖಾಂತರ ನಮ್ಮ ದೇಶಕ್ಕೆ ಬಂದು ಪ್ರಕಟವಾಯಿತು. ಇಂಗ್ಲಾಂಡಿನಲ್ಲಾಗುವ ವಿಶೇಷ ಸಂಗತಿಗಳ ಚಿತ್ರವು ನಮ್ಮ ಊರಿನಲ್ಲಿ ೯–೧೦ ದಿನಗಳಲ್ಲಿ ಪ್ರಕಟವಾಗುವುದುಂಟು. ಹಿಂದಿನ ಕಾಲಗಳಲ್ಲಿ ಅಲ್ಲಿಂದ ನಮ್ಮ ದೇಶಕ್ಕೆ ಒಂದು ಕಾಗದವು ಬಂದು ಸೇರಲು, ಒಂದು ವರ್ಷವೇ ತಗಲುತ್ತಿತ್ತು. ಈಗ ಅಲ್ಲಿಂದ ನಮ್ಮ ಊರಿಗೆ ೧॥ ತಿಂಗಳೊಳಗಾಗಿ ದೊಡ್ಡ ದೊಡ್ಡ ಸಾಮಾನುಗಳೂ ಬರುತ್ತವೆ! ಈ ವಿಚಿತ್ರಕ್ಕೆ ಕಾರಣವೇನು?

ಮೊದಲು ವರ್ತಮಾನವನ್ನು ಬರೆದು ಕಳುಹಿಸಿಯಾಗಲಿ, ಬಾಯಿಮಾತಿನಿಂದಾಗಲಿ ಒಂದೂರಿನಿಂದ ಇನ್ನೊಂದೂರಿಗೆ ತಿಳಿಸುತ್ತಿದ್ದರು. ಈಗ ಅವು ರೈಲು (ಚಿ. 67), ವಿಮಾನಗಳ ಮುಖಾಂತರ ಸಾಗುತ್ತವೆ. ರೈಲು ತಾಸಿಗೆ ೪೦—೫೦ ಮೈಲಿಯಂತೆ ಓಡುವುದು. ವಿಮಾನವು ವಿಲಾಯತಿಯಿಂದ ನಮ್ಮ ದೇಶಕ್ಕೆ (ಕರಾಚಿಗೆ) ೭ ದಿನಗಳಲ್ಲಿ ಮುಟ್ಟುವುದು. ಇದಕ್ಕೂ ವೇಗವಾಗಿ ತಂತಿಸಮಾಚಾರಗಳಿವೆ! ಇಂದು ನಮಗೆ ಉಕ್ಕಿನ ಒಳ್ಳೇ ಚೂರಿಗಳು ಬೇಕಿವೆ ಎಂದು ತಿಳಿಯುವ. ನಾವು ಮಂಗಳೂರಿನ ವ್ಯಾಪಾರಿಗಳಿಗೆ ತಿಳಿಸಿದರೆ, ಅವುಗಳಾಗುವ ದೇಶದಿಂದ ಒಂದು ತಿಂಗಳ ಒಳಗೆ ಅಂಥ ಚೂರಿಗಳನ್ನು ತರಿಸಿ ಕೊಡಲು ಬರುವುದು. ಅವರು ಅದೇ ದಿನ ಮುಟ್ಟುವಂತೆ ವರ್ತಮಾನವನ್ನು ಜರ್ಮನಿ ಇಲ್ಲವೆ ಇಂಗ್ಲಾಂಡಿನ ವ್ಯಾಪಾರಿಗೆ ತಿಳಿಸುವರು. ಅಲ್ಲಿ ಅವು ಸಿದ್ಧವಿದ್ದರೆ ಕೂಡಲೇ ಅಲ್ಲಿನ ಕಾರ್ಖಾನೆಯವರು ಹಡಗಿನ ಮೇಲೆ ಹೊರಿಸಿ ಕಳುಹಿಸುವರು. ಒಂದು ತಿಂಗಳೊಳಗಾಗಿ ಈ ಹಡಗು ೭೦೦೦ ಮೈಲಿ ಹಾದಿ ಸಾಗಿ ಮುಂಬಯಿಗೋ ಮಂಗಳೂರಿಗೋ ಬಂದು ಮುಟ್ಟುವುದು! ಅಲ್ಲಿಂದ ಆ ಚೂರಿಗಳು ನಮ್ಮೂರಿಗೆ ಒಂದೆರಡು ದಿನಗಳಲ್ಲಿ ಬಂದು ಮುಟ್ಟಲು ಸಾಧ್ಯವಿದೆ.

ಈ ರೀತಿ ಶೀಘ್ರವಾಗಿ ವ್ಯಾಪಾರ ವಹಿವಾಟುಗಳು ನಡೆಯಲು ಹಲವು ತರದ ಅನುಕೂಲತೆಗಳು ನಮಗೆ ಬೇಕು. ವೇಗವಾಗಿ ಚಲಿಸುವ ರೈಲು, ಹಬೆಹಡಗುಗಳಷ್ಟೇ ಅವಶ್ಯಕವಾಗಿ ತಂತಿಟಪ್ಪಾಲುಗಳೂ ಬೇಕು. ಅಲ್ಲದೆ ಇವೆಲ್ಲ ಸಾಗಲು ಯೋಗ್ಯ ರಸ್ತೆಗಳು ಬೇಕು. ಕಿಟ್ಟುವಿನ ಮನೆ ಮುಂದಿನ ಹಳ್ಳವನ್ನು ದಾಟಿ ಬಂಡಿ ಹೋಗುವ ಹಾಗಿಲ್ಲ. ಬಂಡಿಯ ಹಾದಿ ಅವನ ಮನೆಯಿಂದ ಬಹು ದೂರದಲ್ಲಿದೆ. ಆದರೆ ಈಗ ಪ್ರತಿ ಹಳ್ಳಿಗೂ ಹೋಗುವ ರಸ್ತೆಗಳನ್ನು ರಚಿಸುತ್ತಿದ್ದಾರೆ. ನಡುವೆ ಹಳ್ಳಗಳೂ, ನದಿಗಳೂ ಅಡ್ಡ ಬಂದರೆ ಪ್ರಯಾಣಕ್ಕೆ ತೊಡಕು ಬಾರದಂತೆ ಸೇತುವೆಗಳನ್ನು (ಚಿ. 64) ಕಟ್ಟಿಸುತ್ತಾರೆ. ಹಳ್ಳಿಗಳಲ್ಲಿ ತೋಡು ಹಳ್ಳಗಳಿಗೆ ಒಂದೆರಡು ಮರದ ತುಂಡುಗಳನ್ನು ಅಡ್ಡವಾಗಿ ಕೆಡೆದು ಮನುಷ್ಯರು ದಾಟಬಹುದಾದ ಸಂಕವನ್ನು (ಚಿ. 62) ಮಾಡುವರು. ಆದರೆ ಅವುಗಳ ಮೇಲೆ ಗಾಡಿಗಳು ಚಲಿಸುವ ಹಾಗಿಲ್ಲ. ನಮ್ಮ ಜಿಲ್ಲೆಯ ಎಷ್ಟೋ ನದಿಗಳಿಗೆ ಸೇತುವೆಯಿಲ್ಲ. ಆದರೆ ಕೂಡಲೆ ಕೂಡಲೆ ಸಾಮಾನುಗಳನ್ನೂ, ಜನರನ್ನೂ ಆಚೀಚೆಗೆ ಸಾಗಿಸಲು ದೋಣಿಗಳಿವೆ. ಹೀಗೆ ದಾಟುವ ಸ್ಥಳಗಳಿಗೆ ಕಡವು (ಚಿ. 63)ಗಳೆನ್ನುತ್ತಾರೆ.

ಹಡಗುಗಳು ಸಮುದ್ರ ಯಾನ ಮಾಡುವುದು ಅಷ್ಟು ಸುಲಭವಲ್ಲ. ರಸ್ತೆಯಲ್ಲಿ ಹೋಗುವ ಗಾಡಿಗಳಿಗೆ ನದಿಗಳು ಅಡ್ಡ ಬಂದು, ಪಯಣಕ್ಕೆ ತೊಂದರೆ ಕೊಡುವಂತೆ, ಸಮುದ್ರದಲ್ಲಿ ಎತ್ತರವಾದ ಕಲ್ಲು ಬಂಡೆಗಳು ಚಾಚಿ ನಿಂತು ಅಪಾಯವನ್ನುಂಟುಮಾಡುತ್ತವೆ. ನಮ್ಮ ಕರಾವಳಿಯಲ್ಲಿ 'ಕಾಪು' ಎಂಬ ಸ್ಥಳವಿದೆ. ಇಲ್ಲಿಗೆ ಎದುರಾದ ಸಮುದ್ರದಲ್ಲಿ ಬಂಡೆಕಲ್ಲುಗಳು ತುಂಬಾ ಇವೆ. ಈ ಹಾದಿಯಾಗಿ ಹಡಗುಗಳು ಮನಸ್ಸಿಯಾಗಿ ಹೋಗುವ ಹಾಗಿಲ್ಲ. ಕತ್ತಲಲ್ಲಂತು ಹಡಗುಗಳು ಆಚೀಚೆ ಹೋಗಿ ಬರು

ವುದು ಬಲು ಕಠಿಣ. ಆದುದರಿಂದ ಆ ಹಾದಿಯಾಗಿ ಸಾಗುವ ನಾವಿಕರನ್ನು ಎಚ್ಚರಿಸಲು, ಎತ್ತರವಾದ ದೀಪಸ್ತಂಭವನ್ನು (ಚಿ. 71) ಕಟ್ಟಿದ್ದಾರೆ. ಬಲು ದೂರದ ವರೆಗೆ ಮಿಂಚುವ ಈ ಬೆಳಕಿನ ಸಹಾಯದಿಂದ ನಾವಿಕರು ಎಚ್ಚರವಾಗಿ ಮುಂದೆ ಸಾಗುತ್ತಾರೆ.

ನಮ್ಮ ನಾಡಿನ ವ್ಯಾಪಾರವು ಬೆಳೆಯಬೇಕಾದರೆ ನಮಗೆ ಉತ್ತಮ ರಸ್ತೆಗಳು, ರೈಲು ಹಾದಿಗಳು, ನದಿಗಳಿಗೆಲ್ಲಾ ಸೇತುವೆಗಳು ತೀರ ಅವಶ್ಯವು. ಇವಿಲ್ಲದ ಯಾವ ದೇಶವೂ ವ್ಯಾಪಾರದಲ್ಲಿ ಅಭಿವೃದ್ಧಿಯನ್ನು ಹೊಂದಲಾರದು.

ಮಂಗಳೂರು ಬಂದರಿನಿಂದ ಕಾಫಿ, ಏಲಕ್ಕಿ ತುಂಬಾ ರಫ್ತಾಗುವುದು. ನಾವೇನು ಇವನ್ನು ಬೆಳೆಯಿಸುವುದಿಲ್ಲ. ಕೊಡಗು, ಮೈಸೂರು ಪ್ರಾಂತಗಳಿಂದ ಇವು ನಮ್ಮ ಬಂದರಿಗೆ ಬರುತ್ತವೆ. ಇದಕ್ಕೆ ಏನು ಕಾರಣ? ಅಲ್ಲಿಂದ ನಮ್ಮ ಊರಿಗೆ ಇರುವ ಅಗಲವಾದ ರಸ್ತೆಗಳೂ, ಹಾದಿಯಲ್ಲಿ ಅಡ್ಡವಾಗಿ ಹರಿಯುವ ನದಿಗಳಿಗೆ ಸೇತುವೆಗಳೂ ಸಹಾಯವಾಗುವುವು.

ನಮ್ಮ ಜಿಲ್ಲೆಯಲ್ಲಿ ಕರಾವಳಿಗೆ ಸಮೀಪವಾಗಿ ಹಾಯುವ ಕಾಸರಗೋಡು-ಮಂಗಳೂರು-ಉಡುಪಿ-ಕುಂದಾಪುರ-ಬೈಂದೂರು ರಸ್ತೆಯಿದೆ. ಉಡುಪಿ, ಕುಂದಾಪುರ, ಮಂಗಳೂರುಗಳಿಂದ ಘಟ್ಟಕ್ಕೆ ಹೋಗುವ ದೊಡ್ಡ ರಸ್ತೆಗಳಿವೆ. ಕರಾವಳಿ ರಸ್ತೆಗೆ ತುಂಬಾ ನದಿಗಳು ಅಡ್ಡ ಬರುತ್ತವೆ. ಉಡುಪಿ, ಕುಂದಾಪುರಗಳಿಂದ ಘಟ್ಟಕ್ಕೆ ಹೋಗುವ ಹಾದಿಗಳಿಗೂ ನದಿಗಳು ಅಡ್ಡ ಇವೆ. ಇದರಿಂದಾಗಿ, ಅಲ್ಲಿ ಮಳೆಗಾಲದಲ್ಲಿ ಗಾಡಿ ಚಲಾವಣೆಯು ನಿಂತೇ ಬಿಡುವುದು. ನಮ್ಮ ಜಿಲ್ಲೆಯ ನಕ್ಷೆಯಿಂದ ಯಾವಾವ ರಸ್ತೆಗಳು ಗಾಡಿಗಳ ಪ್ರಯಾಣಕ್ಕೆ ಅನುಕೂಲವೆಂದು ತಿಳಿಯಬಹುದು.

ನಮ್ಮ ಊರಿಗೂ, ಇತರ ದೇಶಗಳಿಗೂ ಜಲಮಾರ್ಗದ ವ್ಯಾಪಾರ ಸಂಬಂಧ ಇರುವಂತೆ, ನಮಗೂ, ಮೈಸೂರು, ಕೊಡಗುಗಳಿಗೂ ನೆಲಮಾರ್ಗದ ವ್ಯಾಪಾರದ ಸಂಬಂಧವಿದೆ. ಇದಕ್ಕೆ ನಮ್ಮ ರಸ್ತೆಗಳಲ್ಲಿ ಪಾಣೆಮಂಗಳೂರು, ಬೆಳ್ತಂಗಡಿ ಮೊದಲಾದ ಸ್ಥಳಗಳಲ್ಲಿರುವ ಸೇತುವೆಗಳೇ ಕಾರಣ. ಈ ರಸ್ತೆಗಳು ಇತರ ರಸ್ತೆಗಳಂತಿಲ್ಲ. ಎತ್ತರವಾದ ಪಶ್ಚಿಮ ಘಟ್ಟಗಳ ಮಗ್ಗುಲನ್ನು ಕಡಿದು ಮಾಡಿದ, ಸಂಪಾಜೆ, ಬಿಸಿಲೆ, ಶಿರಾಡಿ, ಚಾರ್ಮಾಡಿ, ಆಗುಂಬೆ, ಹೊಸಂಗಡಿ, ಕೊಲ್ಲೂರು ಹಾದಿಗಳು (ಚಿ. 60-61) ಅಗಾಧವಾದುವು. ಅವುಗಳನ್ನು ಯಾವಾಗಲೂ ವ್ಯಾಪಾರಕ್ಕನುಕೂಲವಾಗುವಂತೆ ದುರಸ್ತಿಯಲ್ಲಿರಿಸುವ ಕೆಲಸವೂ ಕಷ್ಟವಾದುದು. ಈ ಘಟ್ಟದ ರಸ್ತೆಗಳನ್ನು ತಾಸುತಾಸುಗಳ ತನಕ ನೋಡುತ್ತಿರಬಹುದು. ಅಲ್ಲಿನ ಸುತ್ತಮುತ್ತಲಿನ ಸೌಂದರ್ಯ ಬಹಳ.

ನಮ್ಮ ಜಿಲ್ಲೆಯಿಂದ ಕಾಲು ಹಾದಿಯಾಗಿ ಕಾಸರಗೋಡು, ನೀಲೇಶ್ವರಗಳಿಗೆ ಹೋಗಲು ನದಿಗಳ ಅವಾಂತರವು ಬಹಳ. ಆದರೆ ರೈಲು ಅದೇ ಹಾದಿಯಾಗಿ ಮಂಗಳೂರಿನಿಂದ ಮಲಬಾರು, ಮದ್ರಾಸುಗಳಿಗೆ ಹೋಗುವುದು. ಆ ದಾರಿಯ ನದಿಗಳ ಮೇಲೆ ಭಾರೀ ಸಂಕಗಳಿವೆ. ರೈಲುದಾರಿಯಾಗಿ ತುಂಬಾ ಜನರೂ, ಸರಕುಗಳೂ ಹೋಗುವುದುಂಟು.

೧೦. ನೇಗಿಲೂ ಬೇಕು; ತ್ರಾಸೂ ಬೇಕು

ಒಂದು ದಿನ ಸಂಜೆ ಆಟವಾಡಿ, ಕಿಟ್ಟು, ರಾಮು ಇಬ್ಬರೇ ಆಯಾಸಗೊಂಡು ಕುಳಿತಿದ್ದರು. ಅವರಿರುವಲ್ಲಿ ಅವರ ಸಹಪಾಠಿಯಾದ ವಾಮನ ಕಮ್ತಿಯು ಬಂದನು. ರಾಮುವು ಚೇಷ್ಟೆಗೆ— "ಹೂಂ, ಬಂದ ಸಾಹುಕಾರ"— ಎಂದನು. ವಾಮನನ ತಂದೆ ನಾರಾಯಣ ಕಮ್ತಿಯರು ಆ ಊರಿನ ಒಬ್ಬರು ವ್ಯಾಪಾರಸ್ಥರು. ಅದರಿಂದಲೇ ರಾಮುವು ಚೇಷ್ಟೆ ಮಾಡಿದುದು. ರಾಮುವಿನ ಚೇಷ್ಟೆಗೆ ಪ್ರತಿಯಾಗಿ ವಾಮನನು— "ನೀವೆಲ್ಲ ಬೇಸಾಯಗಾರರಲ್ಲವೋ? ಸಾಹುಕಾರರಿಲ್ಲದಿದ್ದರೆ ನೀವು ನೇತಾ ಹೊಡೆಯ ಬೇಕು" ಎಂದು ಹಂಗಿಸಿದನು. ಕಿಟ್ಟುವಿಗೆ ಸಿಟ್ಟು ಬಂದಿತು. "ಈ ಸಾಹುಕಾರರಿಲ್ಲದೆ ನಾವು ಇರಲಿಕ್ಕೆ ಸಾಧ್ಯವಿಲ್ಲವೊ? ನಾವು ಬತ್ತ ಬೆಳೆಯಿಸದಿದ್ದರೆ ನಿಮ್ಮ ಬಾಯಿಗೆ ಮಣ್ಣು!" ಎಂದನು. ಅವರಲ್ಲಿ ಜಗಳವಾಯಿತು. ಕಿಟ್ಟುವು ರೈತನು ಹೆಚ್ಚಿನವನು ಎಂದನು. ರಾಮುವೂ ಅವನಿಗೆ ನೆರವಾದನು. ವಾಮನನು ಕಕ್ಕಾಬಿಕ್ಕಿಯಾದನು. ಆದರೂ ಸೋಲುವ ಮನಸ್ಸು ಬಂದೀತೇ? ಅದಕ್ಕೆ ಪ್ರತಿವಾದವನ್ನು ಹೂಡಿದನು— "ಹೌದು! ನೀವು ರೈತರು ದೊಡ್ಡವರು! ನಾವೆಲ್ಲ ಬಡವರು! ಆದರೆ ಇನ್ನು ಮುಂದೆ ಬಡವರ ಮನೆಗೆ ಬರಬೇಡಿ. ನಮ್ಮ ಕಾಗದ, ನಮ್ಮ ವಸ್ತ್ರ, ನಮ್ಮ ಸೂಜಿ, ನಮ್ಮ ಬೆಂಕಿ ಪೆಟ್ಟಿಗೆ, ನಮ್ಮ ಹಾರೆ, ನಮ್ಮ ಗುದ್ದಲಿ ಯಾವುದೂ ನಿಮಗೆ ಬೇಡ!" ಎಂದು ಹೇಳಿ ಹೊರಟು ಹೋದನು.

ಕಿಟ್ಟುವಿನ ಮನಸ್ಸು ಕೊರೆಯ ತೊಡಗಿತು. ಯೋಚನೆ ಮಾಡಿದಂತೆ ಅವನಿಗೆ ವ್ಯಾಪಾರಿಯ ಹಂಗು ಹೆಚ್ಚು ಹೆಚ್ಚಾಗಿ ಕಾಣಿಸಿತು. ಅವನ ಊರಲ್ಲಿ ಕಬ್ಬಿಣವಿದೆಯೆ? ಬಟ್ಟೆಯಾಗುವುದೆ? ಕಾಗದವಿದೆಯೆ? ಹಾರೆಯಾಗುವುದೆ? ಬೆಂಕಿ ಪೆಟ್ಟಿಗೆ ಇದೆಯೆ? ಯಾವುದೂ ಇಲ್ಲ. ಬರೇ ಬತ್ತ, ಕಬ್ಬು, ಹೊಗೆಸೊಪ್ಪು, ತೆಂಗಿನ ಕಾಯಿ, ಅಡಿಕೆ ಮೊದಲಾದುವು ಬೆಳೆಯುವುವು. ಅವುಗಳಿಂದಲೇ ಜೀವಿಸಲು ಬರುವುದೇ? ಬಲು ಹಿಂದೆ ಅವರ ಊರಲ್ಲಿ ಕಬ್ಬಿಣ, ಬಟ್ಟೆಗಳು ಆಗುತ್ತಿದ್ದುವೆಂದು ಅವನ ಅಜ್ಜಿ ಹೇಳುತ್ತಿದ್ದಳು. ಆದರೆ ಈಗ ಅಜ್ಜಿಯ ಕಾಲವಲ್ಲ, ಮೊಮ್ಮಗನ ಕಾಲ. ಒಂದು ಸೂಜಿಯು ಬೇಕಾದರೆ ಅವರು ವ್ಯಾಪಾರಿಯಲ್ಲಿಗೆ ಹೋಗಬೇಕು.

ಊರಿನ ರೈತರು ತಮಗೆ ಸಾಕಾಗಿ ಮಿಗುವ ದವಸಧಾನ್ಯಗಳನ್ನು ಅಂಗಡಿಗೆ ಒಯ್ದು ಮಾರುವರು. ತುಂಬ ದವಸಧಾನ್ಯಗಳನ್ನು ಬೆಳೆಯಿಸುವ ರೈತರು ತಮ್ಮ ಕಾಳುಕಡ್ಡಿಗಳನ್ನು, ಅಡಿಕೆ, ತೆಂಗುಗಳನ್ನು ಮಂಗಳೂರಿನ ತನಕ ಒಯ್ದು, ಅಲ್ಲಿ ವ್ಯಾಪಾರಿಗಳಿಗೆ ಮಾರಿ ಬಿಡುವರು. ಬಂದ ಹಣದಿಂದ ತಮಗೆ ಬೇಕಾಗುವ ಬಟ್ಟೆಬರೆ, ಕಾಗದ, ಕಬ್ಬಿಣ, ಕಾಜುಗಳನ್ನು ಕೊಳ್ಳುವರು. ಇವೆಲ್ಲ ಬಲು ದೂರದಿಂದ ಬರಬೇಕು. ಕಬ್ಬಿಣದ ಸೂಜಿಯು ನಮ್ಮೂರಿಗೆ ೭೦೦೦ ಮೈಲಿ ದೂರದ ವಿಲಾಯತಿಯಿಂದ ಬರುವುದು.

ಗಾಜಿನ ಮಣಿಗಳು ೪೦೦೦ ಮೈಲಿ ದೂರದ ಜಪಾನಿನಿಂದ ಬರುವುವು. ನಾವು ಕಾಣುವ ಮೋಟಾರು ಬಂಡಿಗಳು ಮತ್ತೂ ದೂರದ ಅಮೇರಿಕಾದೇಶದಿಂದ ಬರುವುವು. ನೋಡುವ ಕಣ್ಣಿಗೆ ನಾವು ಹಳ್ಳಿಯಲ್ಲೇ ಇರುವ ರೈತರು ನಿಜ. ಆದರೆ ನಮ್ಮ ನೆಂಟಸ್ತಿಕೆಯು ಸಾವಿರಾರು ಮೈಲಿ ದೂರದ ಜನರೊಂದಿಗಿದೆ. ಇದನ್ನು ಮಾಡುವವನು ವ್ಯಾಪಾರಿಯು. ನಮ್ಮ ದೇಶದಿಂದ ನಮಗೆ ಬೇಡವಾದುದನ್ನು ಅಥವಾ ಹೆಚ್ಚಾದುದನ್ನು ಹೆರವರಿಗೆ ಮಾರಿ, ಅವರಿಂದ ನಮಗೆ ಬೇಕಾದುದನ್ನು ಅವನು ಒದಗಿಸಿ ಕೊಡುವನು. ಅವನಿಂದಾಗಿ ಯಾವ ಯಾವ ದೇಶಗಳಿಂದ ನಮಗೆ ಬೇಕಾಗುವ ಕಬ್ಬಿಣ, ಕಾಜುಗಳು ಬರುವುವು. ಕುಂದಾಪುರ, ಉಡುಪಿ, ಮಂಗಳೂರು, ಕಾಸರಗೋಡುಗಳಲ್ಲಿ ಇಂಥ ದೊಡ್ಡ ವ್ಯಾಪಾರಿಗಳಿರುವರು.

ಬಂದರುಗಳಿರುವುದರಿಂದ ವ್ಯಾಪಾರಕ್ಕೆ ಅನುಕೂಲವಿದೆ. ವಿದೇಶದಿಂದ ಸಾಮಾನುಗಳನ್ನು ಹೊತ್ತು ತಂದ ಹಡಗುಗಳು ಬಂದು ನಿಲ್ಲುವುವು. ಮಂಜಿ, ಪತ್ತೆಮಾರಿಗಳಂಥ ಸಣ್ಣ ಹಡಗುಗಳು ಒಳಕ್ಕೆ ಬಂದು, ನದಿಯ ಶಾಂತ ನೀರಿನಲ್ಲಿ ನಿಲ್ಲುವುವು (ಚಿ. 70). ಉಗಿಹಡಗುಗಳಿಗೆ ನದಿಯ ನೀರು ಸಾಲದು. ಅವು ಸಮುದ್ರದಲ್ಲೇ ನಿಲ್ಲಬೇಕು (ಚಿ. 72). ಮಲ್ಪೆಯಲ್ಲಿರುವಂತೆ, ಸಮುದ್ರದಲ್ಲಿ ಬಾದರಗಡದಂಥ ದ್ವೀಪಗಳಿದ್ದರೆ, ಬಿರುಗಾಳಿ ಬರುವಾಗ ಅಡ್ಡ ಬಂದು ಉಗಿಹಡಗುಗಳಿಗೆ ನಿಲ್ಲಲು ಅನುಕೂಲವಾಗುವುದು. ಮಂಗಳೂರು ಅಂಥದಲ್ಲ. ಆದುದರಿಂದ ಬಿರುಗಾಳಿ ಇದ್ದಾಗ, ಹಡಗು ಹಿಂದಿರುಗಿ ಮಲ್ಪೆಗೆ ಹೋಗಿ ನಿಲ್ಲುವುದುಂಟು.

ಹೊರಗಿನ ಸಾಮಾನುಗಳು ಬರಲು, ನಾವು ನಮ್ಮ ಉತ್ಪತ್ತಿಗಳನ್ನು ಮಾರಬೇಕು. ಅಂಥವುಗಳಲ್ಲಿ ನಮ್ಮ ಕಾಡಿನ ಉತ್ಪತ್ತಿಗಳು ಕೆಲವಿವೆ. ಅಣಿಲೆಕಾಯಿ, ಕಾಸರಕ ಮೊದಲಾದ ಬೀಜಗಳು, ಮೋಪು, ಕಟ್ಟಿಗೆಗಳು ಇಂಥವು. ಅವಲ್ಲದೆ ನಾಡು ಉತ್ಪತ್ತಿಗಳು— ಅಂದರೆ ತೆಂಗು, ಕಂಗು, ಮೆಣಸಿನ ಕಾಳು, ಏಲಕ್ಕಿ, ಕಾಫಿ, ಗೇರುಬೀಜ ಮೊದಲಾದುವು— ಬಂಡಿಗಟ್ಟಲೆಯಿಂದ ವಿದೇಶಕ್ಕೆ ಹಡಗುಗಳ ಮೂಲಕ ಸಾಗಿಹೋಗುವುವು. ಕಟ್ಟಿಗೆ, ಹಂಚು, ಒಣ ಮೀನು, ಹುರಿಹಗ್ಗ ಇವು ಬಹಳವಾಗಿ ನಮ್ಮ ಊರಿಂದ ಪರದೇಶಕ್ಕೆ ಸಾಗುವುವು (ಚಿ. 75-77). ಈ ರೀತಿಯ ವ್ಯಾಪಾರವು ಸಾವಿರಾರು ವರ್ಷಗಳಿಂದ ನಮ್ಮ ಊರವರಿಗೂ, ಅರೇಬಿಯಾ ಮೊದಲಾದ ಪರದೇಶಗಳಿಗೂ ನಡೆಯುತ್ತಿತ್ತಂತೆ. ನಮ್ಮ ಊರು ಸಮುದ್ರತೀರದಲ್ಲಿರುವುದರಿಂದ ನಮ್ಮ ಬಂದರುಗಳ ಮುಖಾಂತರ ಹಡಗು, ಸ್ಟೀಮರುಗಳನ್ನು ಏರಿ ಹೋಗುವ ಮಾಲುಗಳೇ ಅಧಿಕ. ವಿಲಾಯತಿಯ ಹಡಗುಗಳು ಮಂಗಳೂರಿನ ಸಮುದ್ರದಲ್ಲಿ ಬಂದು ನಿಲ್ಲುತ್ತವೆ. ಮಂಗಳೂರಿನಿಂದ ರೈಲುಮಾರ್ಗವಾಗಿ ದಕ್ಷಿಣ ಪ್ರದೇಶಗಳಿಗೂ ಎಷ್ಟೆಷ್ಟೋ ವಸ್ತುಗಳು ಸಾಗಿಸಲ್ಪಡುತ್ತವೆ.

ನಮ್ಮ ಹಿರಿಯರ ಕಾಲದಲ್ಲಿ, ಅಂದರೆ ಬಲು ಹಿಂದೆ, ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೇರೆತ್ತುಗಳ ಮೇಲೆ ಬತ್ತ ಮೊದಲಾದ ದಿನಸುಗಳನ್ನು ಸಾಗಿಸು

ತ್ತಿದ್ದರು. ಈಗ ಈ ರೀತಿಯ ಪದ್ಧತಿಗಳು ನಿಂತಿವೆ. ಇವತ್ತಿನ ವ್ಯಾಪಾರವು ಬಲುವಾಗಿ ಬೆಳೆದಿರುವುದರಿಂದಲೂ, ಎಲ್ಲವೂ ಕ್ಷಿಪ್ರವೇ ಸಾಗುವ ಅವಶ್ಯವಿರುವುದರಿಂದಲೂ ನಾವು ಹೊಸ ರೀತಿಯ ಸಾಗುವಾಡನ್ನು ಕಲಿತಿದ್ದೇವೆ.

ತೀರ ಕಗ್ಗ ಹಳ್ಳಿಗಳಿಂದ ವಸ್ತು ಒಡವೆಗಳು ಎತ್ತಿನ ಬಂಡಿಗಳ (ಚಿ. 65) ಮುಖಾಂತರ ಬಂದರುಗಳಿಗೆ ಸಾಗಿಸಲ್ಪಡುತ್ತವೆ. ಮಳೆಗಾಲವೊಂದನ್ನು ಬಿಟ್ಟರೆ, ಉಳಿದ ಸಮಯಗಳಲ್ಲಿ ಮಡಿಕೇರಿ, ಹಾಸನ, ಕಡೂರು, ಶಿವಮೊಗ್ಗಾ, ಸಾಗರ ಮೊದಲಾದ ಸ್ಥಳಗಳಿಂದ ನಮ್ಮಲ್ಲಿನ ಮಂಗಳೂರು, ಮಲ್ಪೆ, ಕುಂದಾಪುರ ಮೊದಲಾದ ಬಂದರುಗಳಿಗೆ ಎತ್ತಿನ ಬಂಡಿಗಳು ಸಾಲುಸಾಲಾಗಿ ಹೋಗುವುದನ್ನು ಕಾಣಬಹುದು. ರಾತ್ರಿಯಲ್ಲಿ ಪ್ರಯಾಣ ಮಾಡುವ ಎತ್ತುಗಳ ಘಂಟೆ ಧನಿಯು ಎಷ್ಟು ದೂರದವರೆಗೆ ಕೇಳಿಸುವುದಿಲ್ಲ! ಆದರೆ ಈಗೀಗ ಎತ್ತು ಬಂಡಿಗಳ ಅರ್ಧ ಕೆಲಸವನ್ನು ಮೋಟಾರು ಲೋರಿಗಳು ಮಾಡತೊಡಗಿವೆ.

ನದಿಗಳಿರುವಲ್ಲಿ ದೋಣಿಗಳಿಂದ ಸಾಮಾನುಗಳನ್ನು (ಚಿ. 69) ಸಾಗಿಸುವರು. ನೇತ್ರಾವತಿ, ಗಂಗೊಳ್ಳಿ ಹೊಳೆಗಳಿಂದ ವ್ಯಾಪಾರಕ್ಕೆ ತುಂಬಾ ಸಹಾಯ. ದೋಣಿಗಳಿಂದ ಸಾಮಾನನ್ನು ಸಾಗಿಸುವಾಗ ಹೆಚ್ಚು ವೆಚ್ಚವು ತಗಲುವುದಿಲ್ಲ. ಅಲ್ಲದೆ ಬಿದಿರು ಮರ ಮೊದಲಾದುವುಗಳನ್ನು ಸಾಗಿಸುವವರು ದೋಣಿಯಿಲ್ಲದೆ, ಬರೀ ನೀರಿನ ಮೇಲೆ ಅವನ್ನು ತೆಪ್ಪ ಕಟ್ಟಿ ತೇಲಿಬಿಡುವುದುಂಟು. ಈ ರೀತಿ ಸಾಗಿಸಲು ಗಾಡಿಗಳಷ್ಟು ಹಣ ವ್ಯಯವಾಗುವುದಿಲ್ಲ. ಮಂಗಳೂರಿನ ಹಂಚಿನ ಕಾರ್ಖಾನೆಗಳಿಗೆ ಪ್ರತಿ ನಿತ್ಯ ದೂರದಿಂದ ಆವೆ ಮಣ್ಣನ್ನು ತರುವ ಹಾಯಿ ದೋಣಿಗಳ ಸಾಲುಸಾಲುಗಳನ್ನು ಕಾಣಲು ಎಷ್ಟು ಚೆಂದ!

ಮಂಗಳೂರು ಮೊದಲಾದ ಬಂದರುಗಳಿಗೆ ಹಳ್ಳಿಯ ಸಾಮಾನು ಬಂದು ಬಿದ್ದರೆ, ಅಲ್ಲಿಂದ ಅವುಗಳನ್ನು ಮುಂಬಾಯಿ, ಕೊಲಂಬೋ, ಗೋವೆ ಮೊದಲಾದ ಬಂದರುಗಳಿಗೆ ಹಡಗುಗಳ ಮೇಲೆ ಸಾಗಿಸುವರು. ಹಾಯಿಗೆ ಚೆನ್ನಾಗಿ ಗಾಳಿ ಸಿಕ್ಕಿದರೆ, ಮಂಗಳೂರಿಂದ ನಾಲ್ಕು ದಿನಗಳೊಳಗಾಗಿ ಮುಂಬಾಯಿಗೆ ಹಡಗುಗಳು ಸೇರುವುವು. ಎಷ್ಟೋ ಬಾರಿ ನಮ್ಮ ಸಾಮಾನುಗಳನ್ನು ಹಾಯಿಹಡಗುಗಳ ಮೇಲೆಯೇ ಸಾಗಿಸುವುದಿಲ್ಲ. ಪ್ರತಿಕೂಲವಾದ ಗಾಳಿಯಿದ್ದರೆ ಒಂದು ವಾರದ ಪಯಣಕ್ಕೆ ಎರಡು ತಿಂಗಳೂ ಹಿಡಿಯಬಹುದು. ಆದುದರಿಂದ ಬೇಗ ಹಾಳಾಗುವ ವಸ್ತುಗಳನ್ನೂ, ದೂರ ಸಾಗುವ ವಸ್ತುಗಳನ್ನೂ ಹಬೆಹಡಗುಗಳ ಮುಖಾಂತರ ವಿದೇಶಕ್ಕೆ ಸಾಗಿಸುತ್ತಾರೆ. ಮಂಗಳೂರಿನ ಸಾಹುಕಾರರು ವಿಲಾಯತಿ, ಅಮೇರಿಕ ದೇಶಗಳೊಡನೆ ಹಬೆಹಡಗುಗಳ ಸೌಕರ್ಯದಿಂದಾಗಿ ನೇರಾಗಿ ವ್ಯಾಪಾರ ಮಾಡುವರು.

ಒಂದು ದಿನ ಇಂಥ ಹಬೆಹಡಗವನ್ನೇರಿ, ಸಾವಿರಾರು ಮೈಲಿಗಳ ಸಮುದ್ರವನ್ನು ದಾಟಿ, ವಿಲಾಯತಿ, ಅಮೇರಿಕಾ ದೇಶಗಳಿಗೆ ಹೋಗುವ ಆಸೆಯಾಗುವುದಿಲ್ಲವೆ? ನಮ್ಮ ಹಿರಿಯರು ಹಿಂದಿನ ಕಾಲದಲ್ಲಿ ಹಾಗೆಯೇ ಹೋದುದುಂಟು. ನಾವೂ ಒಂದು ದಿನ ಹೋಗಬಾರದೇಕೆ?

೧೧. ಸಂತೆಯ ಯಾತ್ರೆ

ಕಿಟ್ಟುವಿನ ಹಳ್ಳಿಯಲ್ಲಿ ಹುಲಿಗಳ ಕಾಟ ಬಹಳ ಎಂದೆನಲ್ಲ. ಒಂದು ದಿನ ಅವನ ಮನೆಯ ಒಂದು ಉಳುವ ಎತ್ತನ್ನು ಹುಲಿಯು ಒಂದು ಕೊಂದಿತು. ಇನ್ನುಳಿದುದು ಒಂದೇ ಎತ್ತು. ಒಂದೇ ಎತ್ತಿನಿಂದ ಬೇಸಾಯ ಮಾಡಲು ಬಂದೀತೇ? ಕಿಟ್ಟುವು ಅಪ್ಪನನ್ನು ಕೇಳಿದನು–"ಅಪ್ಪಾ! ಒಂದೇ ಎತ್ತನ್ನು ತೆಗೆದುಕೊಂಡು ಏನು ಮಾಡುವಿ?" ಎಂದು. "ಇನ್ನೊಂದು ತೆಗೆದುಕೊಳ್ಳಬೇಕು" ಎಂದನು ಅವನ ತಂದೆ. "ನಾನೂ ಆ ದಿನ ಬರುವೆನು" ಎಂದನು ಕಿಟ್ಟು.

ತಂದೆಯು ಅಲ್ಲೇ ಊರಲ್ಲಿ ಇಲ್ಲವೆ ನೆರೆ ಊರಲ್ಲಿ ಎತ್ತನ್ನು ಕೊಳ್ಳುವನು ಎಂದು ಕಿಟ್ಟುವು ಊಹಿಸಿದ್ದನು. ಅದರ ಬದಲು ಅವನ ತಂದೆ ಒಂದು ದಿನ ಉಳಿದ ಒಂದು ಎತ್ತನ್ನು ತೆಗೆದುಕೊಂಡು, ಇನ್ನೊಂದು ಊರಿಗೆ ಹೊರಟನು. ಜತೆಯಲ್ಲಿ ಕಿಟ್ಟುವೂ ಹೊರಟನು. ಹಾದಿಯಲ್ಲಿ ಇನ್ನು ಎಷ್ಟೋ ರೈತರು ಸಿಕ್ಕಿದರು. ಎಲ್ಲರೂ ಎತ್ತುಗಳನ್ನೊ, ಕೋಣಗಳನ್ನೊ ಕೊಂಡುಕೊಳ್ಳಲು ಹೊರಟಿದ್ದರು.

ಕಿಟ್ಟುವಿನ ಮನೆಯಿಂದ ಜಾನುವಾರುಗಳ ಸಂತೆ ನೆರೆಯುವ ಕುಳುಗುಂದಕ್ಕೆ ಎರಡು ದಿನದ ಕಾಲು ಹಾದಿ. ಸುಬ್ರಹ್ಮಣ್ಯದ ಷಷ್ಠಿಯ ೧೫ ದಿನಕ್ಕೆ ಮೊದಲು ಕುಳುಗುಂದದ ಬಯಲಿನಲ್ಲಿ ದೊಡ್ಡ ಸಂತೆಯು (ಚಿ. 73) ನೆರೆಯುವುದು. ಕಿಟ್ಟುವೂ, ಅವನ ತಂದೆಯೂ ಕುಳುಗುಂದಕ್ಕೆ ಮುಟ್ಟುವಾಗ ಸಂತೆ ತೊಡಗಿ ಎರಡು ದಿನಗಳಾಗಿದ್ದುವು. ಆ ಬಯಲಿನಲ್ಲಿ ಸೇರಿದ ಸಾವಿರಾರು ಎತ್ತು ಕೋಣಗಳನ್ನು ಕಂಡು ಕಿಟ್ಟುವಿನ ಮನಸ್ಸು ಕುಣಿಯಿತು. ಅವನು ಅಲ್ಲಿ ಓಡಿದನು; ಇಲ್ಲಿ ಓಡಿದನು. "ಅಪ್ಪಾ, ಈ ಜತೆ ಚೆನ್ನಾಗಿದೆ! ಇದು ಚೆನ್ನಾಗಿದೆ!" ಎಂದು ಹುಡುಕಿ ಹೇಳಿದನು. ೨೦–೩೦ ರೂಪಾಯಿಯ ಜಾನುವಾರುಗಳಿಂದ ಹಿಡಿದು, ೫೦೦—೬೦೦ ರೂಪಾಯಿಯ ಜೋಡಿಗಳೂ ಇದ್ದುವು. ಕಿಟ್ಟುವಿನ ತಂದೆಯು ಮೊದಲು ತಾನು ತಂದ ಒಂಟಿ ಎತ್ತನ್ನು ೪೦ ರೂಪಾಯಿಗಳಿಗೆ ಮಾರಿದನು. ಆ ಬಳಿಕ ತನಗೆ ಯಾವ ಎತ್ತು ಅನುಕೂಲವಾಗಬಹುದೆಂದು ಹುಡುಕತೊಡಗಿದನು. ಅಷ್ಟೆಲ್ಲ ಜತೆಗಳಿದ್ದರೂ, ಅವನಲ್ಲಿರುವ ಹಣಕ್ಕೂ ಅವನ ಮನಸ್ಸಿಗೂ ಸರಿಹೋಗುವಂಥವು ಬೇಕಲ್ಲ. ಅಂತೂ ಎರಡು ಮೂರು ದಿನಗಳ ತನಕ ಅಲೆದಾಡಿ, ಒಂದು ಜತೆಯನ್ನು ಕೊಂಡುಕೊಂಡನು. ಊರಿಗೆ ಮರಳುವಾಗ ಅವರ ಜತೆಯಲ್ಲಿ ಜಾನುವಾರುಗಳನ್ನು ಸಾಗಿಸಿಕೊಂಡು ಹೋಗುವ ನೂರಾರು ರೈತರಿದ್ದರು.

ಇಷ್ಟೆಲ್ಲ ಜಾನುವಾರುಗಳನ್ನು ಮೈಸೂರು ಪ್ರಾಂತದಿಂದ ಪ್ರತಿ ವರುಷವೂ ತರುವರು. ಸಂತೆಯ ೧೫ ದಿನಗಳಲ್ಲಿ ಹೆಚ್ಚಿನವು ವಿಕ್ರಯವಾಗುವುವು. ನಮ್ಮ ಊರಿನಲ್ಲಿ ಚೆನ್ನಾಗಿ ಜಾನುವಾರುಗಳನ್ನು ಆರೈಕೆ ಮಾಡದಿರುವುದರಿಂದ, ಈ ರೀತಿ ಪ್ರತಿ ವರುಷವೂ ನಮ್ಮ ರೈತರು ಸಾವಿರಾರು ರೂಪಾಯಿಗಳನ್ನು ಕೊಟ್ಟು, ಹೊಸದನ್ನು ಕೊಂಡುಕೊಳ್ಳ

ಬೇಕಾಗುವುದು. ಸಂತೆಯ ದಿನಗಳು ಮುಗಿಯಲು, ಜಾನುವಾರುಗಳ ವ್ಯಾಪಾರಿಗಳು ತಮ್ಮ ಎತ್ತು ಕೋಣಗಳನ್ನು ಊರಿಗೆ ಒಯ್ಯುವರು. ಕೆಲವರು ಅವುಗಳನ್ನು ಹಾಗೆಯೇ ಸಾಗಿಸಿಕೊಂಡು, ಪೇಟೆಯಿಂದ ಪೇಟೆಗೂ, ಊರಿಂದ ಊರಿಗೂ ಒಯ್ಯುತ್ತ, ಮಾರುತ್ತ ಹೋಗುವರು.

ಕಿಟ್ಟುವು ಕಂಡ ಇನ್ನೊಂದು ದೊಡ್ಡ ಸಂತೆಯು ಕುಂದಾಪುರದ ಸಂತೆ. ಅವನು ತಂದೆಯ ಜತೆಯಲ್ಲಿ ಕೊಲ್ಲೂರಿಗೆ ಹೋಗುವವನು ಒಂದು ಶನಿವಾರ ಕುಂದಾಪುರದಲ್ಲಿ ನಿಂತಿದ್ದನು. ಕುಂದಾಪುರದಲ್ಲಿ ಪ್ರತಿ ಶನಿವಾರವೂ ಭಾರೀ ಸಂತೆಯಾಗುವುದು. ಇದು ಕುಳುಗುಂದದಂತೆ ಜಾನುವಾರು ಸಂತೆಯಲ್ಲ. ದವಸಧಾನ್ಯಗಳ ಸಂತೆ. ಸುತ್ತುಮುತ್ತಲಿನ ಹಳ್ಳಿಯ ಜನರು ತಾವು ಬೆಳೆಯಿಸಿದ ತರಕಾರಿ, ಅಕ್ಕಿ, ಕಬ್ಬು ಮೊದಲಾದುವನ್ನು ಇಲ್ಲಿಗೆ ತಂದು ಮಾರುವರು. ಕುಂದಾಪುರಕ್ಕೆ ನಾಲ್ಕಾರು ನದಿಗಳು ಹರಿಯುವುದರಿಂದ ದೋಣಿಗಳ ಮೂಲಕ ಸಾಮಾನುಗಳನ್ನು ಸಾಗಿಸುವುದಾಗಲೀ, ಒಯ್ಯುವುದಾಗಲೀ ಸುಲಭ. ಆದುದರಿಂದಲೇ ಇಲ್ಲಿನ ಸಂತೆಯು ಭಾರೀ ಸಂತೆ. ರೈತರು ಇಲ್ಲಿಗೆ ಬಂದು, ತಮಗೆ ಬೇಡವಾದ ದವಸಧಾನ್ಯಗಳನ್ನು ಮಾರಿ, ಬಂದ ಹಣದಿಂದ ಬೇಕಾಗುವ ಸಾಮಗ್ರಿಗಳನ್ನು ಕೊಂಡು, ಊರಿಗೆ ಮರಳುವರು. ಈ ಸಂತೆಗೆ ಬಂದ ನೂರಾರು ದೋಣಿಗಳಲ್ಲಿ ಒಂದರ ಮೇಲೆ ಕುಳಿತು, ಕಿಟ್ಟುವೂ ಅವನ ತಂದೆಯೂ ಹತ್ತು ಮೈಲಿ ದೂರದ ವಂಡಸೆಯ ತನಕ ಪಯಣ ಬೆಳೆಸಿ, ಮುಂದೆ ಕಾಲು ಹಾದಿಯಾಗಿ ಕೊಲ್ಲೂರನ್ನು ಸೇರಿದರು.

ಇಂಥ ವಾರದ ಸಂತೆಗಳು (ಚಿ. 74) ನಮ್ಮ ಜಿಲ್ಲೆಯ ಹಲವು ಊರುಗಳಲ್ಲಿ ಜರಗುತ್ತವೆ. ಅವುಗಳಿಂದಾಗಿ ಹಳ್ಳಿಯ ರೈತರಿಗೆ ಚಿಲ್ಲರೆ ವ್ಯಾಪಾರಗಳನ್ನು ಮಾಡಲು ತುಂಬಾ ಸಹಾಯವಾಗುವುದು. ನಮ್ಮ ಜಿಲ್ಲೆಯ ವಾರದ ಸಂತೆಗಳಲ್ಲಿ ಕುಂದಾಪುರದ ಸಂತೆಯು ಬಲು ಹಿರಿದಾದ ಸಂತೆ.

---

೧೨. ಹಳ್ಳಿಯ ವಿನೋದಗಳು

ಕಿಟ್ಟುವಿನ ಹಳ್ಳಿಯಲ್ಲಿ ಇರಲು ಬೇಸರವಿಲ್ಲ. ಬೇಸಾಯದ ಸಮಯದಲ್ಲಿ ಪ್ರತಿಯೊಬ್ಬರೂ ಕೆಲಸದಲ್ಲಿರುವರು. ಮಿಕ್ಕುಳಿದ ಸಮಯಗಳಲ್ಲಿ ಒಂದಲ್ಲ ಒಂದು ವಿನೋದವು ಇದ್ದೇ ಇದೆ. ಕೆಲವು ಜಾತ್ರೆಯ ನೆವದಿಂದ ಕೂಡುವ ವಿನೋದಗಳು; ಇನ್ನು ಕೆಲವು ವಿನೋದಗಳಾಗಿಯೇ ನಡೆಯುವುವು. ಇಂಥ ಆಟಗಳಲ್ಲಿ ಕಿರಿಯರಿಂದ ಹಿಡಿದು ಮುದುಕರ ತನಕ ಎಲ್ಲರೂ ಸೇರುವರು. ಮಳೆಗಾಲದ ಮೊದಲಿನ ಎರಡು ತಿಂಗಳು ಸರಿಯಿತೆಂದರೆ, ಸ್ವತಃ ಕಿಟ್ಟುವಿನ ಮನೆಯಲ್ಲಿಯೇ ಪುರಾಣ ಶ್ರವಣವಿದೆ. ಮಧ್ಯಾಹ್ನ ಊಟವಾದನಂತರ ಆ ಊರಿನ ಜನಾರ್ಧನಯ್ಯ ಮೊದಲಾದವರು ಕಿಟ್ಟುವಿನ ಮನೆಯ

ಹೊರ ಪಡಸಾಲೆಯಲ್ಲಿ ಸೇರುವರು. ಜನಾರ್ಧನಯ್ಯನು ಒಂದು ವ್ಯಾಸಪೀಠದ ಮೇಲೆ ಭಾಗವತವನ್ನೋ ಭಾರತವನ್ನೋ ಬಿಡಿಸಿ, ರಾಗದಿಂದ ಓದುವರು. ಕಿಟ್ಟುವಿನ ತಂದೆಯು ಅದರ ಅರ್ಥವನ್ನು ಬಿಡಿಸಿ ಹೇಳುವರು. ಹೀಗೆ ದಿನನಿತ್ಯವೂ ಎರಡು ಮೂರು ತಿಂಗಳ ತನಕ ವಾಚನವು ನಡೆಯುವುದು. ಊರವರಿಗೆ ಭಾಗವತ, ರಾಮಾಯಣಗಳಿಂದ ಕಥೆಯನ್ನು ಕೇಳುವುದೆಂದರೆ ಇಷ್ಟ. ಕಿಟ್ಟುವಿನ ಗೆಳೆಯರೂ ಅಲ್ಲಿಗೆ ಪುರಾಣ ಕೇಳುವುದಕ್ಕಾಗಿ ಬರುವುದುಂಟು. ಕೆಲವು ಸಾರಿ ಕಥೆಯು ರುಚಿಸದೆ ಹೋದರೆ, ಕಿಟ್ಟುವು ಮೆಲ್ಲಗೆ ಗೆಳೆಯರೊಂದಿಗೆ ಹೊರಕ್ಕೆ ಬಂದು, ಗೆಳೆಯರನ್ನು ಕೂಡಿ, ಚಿಣಿಕೋಲು, ಜಿಬಲಿ, ಉಪ್ಪು, ಸೋಡಿ ಮೊದಲಾದುವನ್ನು ಆಡುವನು. ಅವನ ಆಟಗಳಲ್ಲಿ ಮಾತ್ರ ಹಿರಿಯರು ಸೇರುವುದನ್ನು ಕಾಣೆ.

ಕಾರ್ತಿಕಮಾಸವು ಬಂದಿತೆಂದರೆ, ಕಿಟ್ಟುವಿನ ಊರಲ್ಲಿ ಪ್ರತಿ ಮನೆಯಿಂದಲೂ ಎತ್ತರವಾದ ಬಣ್ಣಬಣ್ಣದ ಗೂಡು ದೀಪಗಳನ್ನು ಕಟ್ಟುವರು. ಕಿಟ್ಟುವಿನ ಮನೆಯ ದೀಪ ಊರಿಂದೂರಿಗೇ ಕಾಣುವಷ್ಟು ಎತ್ತರದಲ್ಲಿದೆ. ಅದೇ ತಿಂಗಳಲ್ಲಿ ಅವನ ಊರಿನ ಮಹಾಲಿಂಗೇಶ್ವರನ ಗುಡಿಯ ದೀಪೋತ್ಸವವಿದೆ. ದೀಪೋತ್ಸವವೆಂದರೆ ಕಿಟ್ಟುವಿಗೆ ಜೀವ. ಅಮಾವಾಸ್ಯೆಯ ದಿನ ಅದು ನಡೆಯುವುದು. ಬೆಳಕಿನ ಚೂರಿಲ್ಲ. ಆದರೇನು? ದೇವಾಲಯದ ಸುತ್ತನ್ನು ಸಾಲು ಸಾಲು ದೀಪಮಾಲಿಕೆಗಳಿಂದ ಬೆಳಗುವರು. ದೇವಾಲಯದ ಮುಂದೆ ಒಂದು ಕೆರೆಯಿದೆ. ಕೆರೆಯ ದಂಡೆಯ ಮೇಲೂ ದೀಪಮಾಲಿಕೆಗಳೇ. ಈ ದೀಪಮಾಲೆಯ ಹೊಳಪು ನೀರಲ್ಲಿ ಮಿನುಗುವುದನ್ನು ಕಾಣಬೇಕು. ದೇವರನ್ನು ಪಲ್ಲಕ್ಕಿಯಲ್ಲಿ ಕೂರಿಸಿ, ಊರಿನ ಬೇರೆ ಬೇರೆ ಕಡೆಗಳಲ್ಲಿ ಮಾಡಿರುವ ಮಂಟಪಗಳಿಗೆ ಒಯ್ಯುವರು. ಅಲ್ಲೂ ದೀಪದ ಸಾಲು ಸಾಲುಗಳನ್ನು ಹೊತ್ತಿಸುವರು. ಅಲ್ಲಿಂದ ದೇವಾಲಯದ ಕೆರೆಗೆ ಬರುವರು. ಪಲ್ಲಕ್ಕಿಯಿಂದ ದೇವರನ್ನು ದೋಣಿಗಳ ಮೇಲಿರಿಸಿ, ತೆಪ್ಪೋತ್ಸವವನ್ನು ಮಾಡುವರು. ಈ ರೀತಿಯಿಂದ ದೀಪೋತ್ಸವವು ಸರಿಯುವಾಗ ಕತ್ತಲೆ ಸಂಪೂರ್ಣ ಕಳೆಯುವುದೂ ಉಂಟು. ಆದರೆ ಯಾರಿಗೂ ಈ ಸಂತೋಷದ ಗಳಿಗೆಯು ಹೇಗೆ ಸರಿಯಿತೆಂದೇ ತಿಳಿಯುವುದಿಲ್ಲ. ಸಾಮಾನ್ಯ ಪ್ರತಿ ಊರಿನಲ್ಲಿ ಈ ಬಗೆಯ ಉತ್ಸವಗಳು ನಡೆಯುವುವು. ಉಡುಪಿಯಲ್ಲಿ ಈ ಸಮಯ ಅನೇಕ ದಿನಗಳ ತನಕ ನಡೆಯುವ "ಲಕ್ಷದೀಪ"ದ ಉತ್ಸವವಿದೆ.

ಇನ್ನು ಬೇಸಾಯದ ಸಮಯ ಕಳೆಯಿತೆಂದರೆ ಎಲ್ಲೆಲ್ಲಿಯೂ ತಾಳಮದ್ದಲೆಗಳ (ಚಿ. 84) ಗದ್ದಲ. ಕಿಟ್ಟುವಿನ ಮನೆಯ ಹತ್ತಿರ ಸುಬ್ಬ ಅಕ್ಕಸಾಲಿಯ ಮನೆಯಿದೆ. ಅಲ್ಲಿ ಮದ್ದಲೆಯ ಸದ್ದು ತಪ್ಪಿದ ದಿನವಿಲ್ಲ. ಸುಬ್ಬ ಅಕ್ಕಸಾಲಿ ಊಟವನ್ನಾದರೂ ಬಿಟ್ಟಾನು; ಮದ್ದಲೆ ಬಾರಿಸುವುದನ್ನು ಬಿಡುವವನಲ್ಲ. ಮದ್ದಲೆ ಬಾರಿಸುವುದರಲ್ಲಿ ಅವನ ಕೈ ಅಷ್ಟು ಮೃದು! ತಿಂಗಳಿಗೊಂದು ದಿನವಾದರೂ ಕಿಟ್ಟುವಿನ ತಂದೆಯ ಮನೆಯಲ್ಲಿ ತಾಳಮದ್ದಲೆಯಾಗಲೇಬೇಕು. ತಾಳಮದ್ದಲೆಯ ದಿನ ಬಂದಿತೆಂದರೆ, ಎಲ್ಲೆಲ್ಲಿನ ಜನರು ಸೂಟೆಗಳನ್ನು

ಹಿಡಿದುಕೊಂಡು ಬರುವರು. ಎಲ್ಲರೂ ಬಂದು, ಪ್ರಸಂಗವು ತೊಡಗುವಾಗ ಅರ್ಧ ರಾತ್ರಿಯೇ ಸರಿಯುವುದುಂಟು. ಮದ್ದಲೆಗಾರ ಸುಬ್ಬಯ್ಯನು ಬರುವಾಗಲೇ ಅಷ್ಟು ಹೊತ್ತಾಗುವುದು ರೂಢಿ. ಅವನೊಮ್ಮೆ ಮನೆಯಲ್ಲಿ ಮದ್ದಲೆ ಬಾರಿಸಿ, ಆ ಬಳಿಕ ಊಟವಾಗಿ, ಈ ತಾಳಮದ್ದಲೆಗೆ ಬರಬೇಕು. ಊಟವೆಂದರೆ ಮಧ್ಯರಾತ್ರಿಗೇ ಸರಿ. ಅವನು ಬಂದೊಡನೆಯೇ ಜನಾರ್ಧನಯ್ಯನವರು ಯಾವುದಾದರೊಂದು ಪ್ರಸಂಗ ತೊಡಗುವರು. ಅದಕ್ಕೆ ಸುಬ್ಬಯ್ಯನ ಮದ್ದಲೆ. ಇನ್ನಾರಾದರೂ ಚಂಡೆ ಬಾರಿಸುವರು. ಅದರ ಶಬ್ದ ಕೇಳಿದರೆ ಕಿಟ್ಟುವಿನ ಕೈಕಾಲೆಲ್ಲ ಕುಣಿಯುವುದು. ಸರಿ, ಏನಾದರೊಂದು ಪ್ರಸಂಗವನ್ನು ಭಾಗವತರು ತೊಡಗಲು, ಊರಿನ ಅರ್ಥಗಾರರು ಅರ್ಥ ಹೇಳತೊಡಗುವರು. ರಾತ್ರಿ ಈ ತಾಳಮದ್ದಲೆಯಾದರೆ ಬೆಳಿಗ್ಗೆ ನಮ್ಮ ಕಿಟ್ಟುವಿನ ತಾಳಮದ್ದಲೆ ಇದ್ದೇ ಇದೆ!

ಕಿಟ್ಟು, ಪುಟ್ಟು, ರಾಮು ಸೇರಿ — ಎಷ್ಟೋ ಸಾರಿ ಆಲ್ಬರ್ಟ್, ಅಮ್ಮದೆಯರೂ ಬರುವುದುಂಟು — ಹಿಂದಿನ ರಾತ್ರಿ ಕೇಳಿದ ಪ್ರಸಂಗವನ್ನು ತಿರುಗಿ ತೆಗೆಯುವರು. ಚಿಮಿಣಿ ಡಬ್ಬಿಯೇ ಅವರ ಚಂಡೆ; ಬಾಯಿಯೇ ಮದ್ದಲೆ; ಸ್ಲೇಟೇ ಜಾಗಟೆ; .. ಆ ಅರ್ಥವೇನು? ಆ ಆಟವೇನು? . . . . ಕುಣಿತವೂ ಇದೆ!

ಕಿಟ್ಟುವಿಗೆ ಕುಣಿತವಿಲ್ಲದಿದ್ದರೆ ಮನಸ್ಸೇ ಒಪ್ಪದು. ಆಗಾಗ ಅವರ ಊರಿಗೆ ಬರುವ ಬಯಲಾಟಗಳನ್ನು ಅವನು ನೋಡಿರುತ್ತಾನೆ. ಆ ವೇಷಧಾರಿಗಳಂತೆ ಬಣ್ಣ ಬಳೆದುಕೊಂಡು ಕುಣಿಯುವುದೆಂದರೆ ಅವನಿಗೆ ಬಲು ಇಷ್ಟ. ಅವನ ಸ್ನೇಹಿತರಿಗಾದರೂ ಸರಿಯೆ, ಬಯಲಾಟವೆಂದರೆ ಜೀವ.

ಸಾಧಾರಣ ಹತ್ತೆಂಟು ಹಳ್ಳಿಗಳಲ್ಲಿ ಯಾವುದಾದರೊಂದು ದೇವಾಲಯದಲ್ಲಿ ರಥೋತ್ಸವವು ಇದ್ದೇ ಇರುವುದು. ದೊಡ್ಡದೊಂದು ತೇರನ್ನು ಶೃಂಗರಿಸಿ (ಚಿ. 80), ದೇವರ ವಿಗ್ರಹವನ್ನು ಇರಿಸಿ ಎಳೆಯುವರು. ಇಂಥ ಜಾತ್ರೆಗಳಿಗೆ ಬಲು ದೂರದಿಂದ ಜನರು ಬರುವರು. ಜಾತ್ರೆಯ ಜತೆಯಲ್ಲಿ ಸಂತೆಯೂ ಇದೆ. ಸಂತೆಯವರೊಡನೆ ವ್ಯಾಪಾರಮಾಡಲು, ಹಳ್ಳಿಯವರು ಜಾತ್ರೆ ಕಳೆದ ಮೇಲೂ ಕೆಲವು ದಿನಗಳ ತನಕ ಬರುತ್ತಲೇ ಇರುವರು. ತಮಗೆ ಬೇಕಾದ ಮಣಿ ಸರಕುಗಳನ್ನು, ಚಂಬು ಚರಿಗೆಗಳನ್ನು, ಬಟ್ಟೆಬರೆಗಳನ್ನು ಇಲ್ಲಿಗೆ ಬರುವ ವ್ಯಾಪಾರಿಗಳಿಂದ ಕೊಳ್ಳುವರು.

ಹಿಂದೂಗಳ ದೀಪೋತ್ಸವ, ಜಾತ್ರೆಗಳಿರುವಂತೆ ಕ್ರಿಶ್ಚಿಯನರಿಗೆ 'ಸಾಂತಮಾರಿ' 'ಕ್ರಿಸ್‌ಮಸ್' ಹಬ್ಬಗಳೂ ಮುಸಲ್ಮಾನರಿಗೆ 'ಮೊಹರಮ್'ನ ದಿನಗಳೂ ಬಲು ಆನಂದದ ದಿನಗಳು.

ಕಿಟ್ಟುವಿನ ಊರಲ್ಲಿ ಇನ್ನೆರಡು ಉತ್ಸಾಹ ಕೂಟಗಳಿವೆ. ಒಂದು ಕಂಬಳ, ಇನ್ನೊಂದು ಕೋಳಿಪಡೆ. ದೇವಸ್ಥಾನದ ಎದುರಿನ ಮಜಲು ಗದ್ದೆಯಲ್ಲಿ ನೀರು ನಿಲ್ಲಿಸಿ, ಓಟದ ಕೋಣಗಳನ್ನು ಓಡಿಸುವ (ಚಿ. 81) ಆ ಗದ್ದಲ ಬಣ್ಣಿಸಿ ತೀರದು. ಆ ದಿನ ಅಲ್ಲಿಗೆ ಬರುವ ಕೋಣಗಳು ಒಂದೆರಡೇ? ಸುತ್ತ ಹತ್ತೆಂಟು ಹಳ್ಳಿಗಳ ರೈತರು, ತಾವು ಬಲು ಪ್ರೀತಿಯಿಂದ ಸಾಕಿದ ಕೋಣನ ಜೋಡಿಗಳನ್ನು ಅಲಂಕರಿಸಿ ತರುವರು. ಎಷ್ಟೋ ಶ್ರೀಮಂತರು ಇದ

ಕ್ಕಾಗಿಯೇ ಕೋಣಗಳನ್ನು ಸಾಕುವರು. ಆಗಾಗಲೇ ಕೊಟ್ಟಿಗೆಯಿಂದ ಹೊರಕ್ಕೆ ತೆಗೆದ ಕೋಣಗಳ ಕೆಂಪು ಕೆಂಪು ಮೈಯನ್ನು ಕಾಣಬೇಕು!

ಮಜಲು ಗದ್ದೆಯ ಸುತ್ತಲು ಕಂಬಳದ ದಿನ ನೂರಾರು ಮಂದಿ ಸೇರುವರು. ಒಂದು ಕಡೆ ಹೊಲೆಯರ ವಾದ್ಯಕುಣಿತಗಳಾಗುವುವು. ಗದ್ದಲವೇ ಗದ್ದಲ! ವೇಳೆಯಾಯಿತೆಂದರೆ, ಹಾಗೂ ಹೀಗೂ ಮಾಡಿ, ಬಲವಾದ ಕೋಣಗಳನ್ನು ನೊಗಕ್ಕೆ ಬಿಗಿದು ಗದ್ದೆಗೆ ತರುವರು. ನೊಗವನ್ನು ಮೆಟ್ಟಿ ಒಬ್ಬೊಬ್ಬ ಎದೆಗಾರನು ನಿಲ್ಲುವನು. ಕೋಣಗಳ ಬಾಲಗಳನ್ನು ತಿರುವಿ, ನಾಲ್ಕು ಏಟುಗಳನ್ನು ಏರಿಸಿಬಿಟ್ಟನೆಂದರೆ — ಕುದುರೆ ಸುಳ್ಳು! — ಎನ್ನುವಷ್ಟು ವೇಗದಿಂದ ಓಡುವುವು. ಕೆಲವು ಸಾರಿ ನೇರಾಗಿ ವೇಗವಾಗಿ ಓಢಿ ಮುಟ್ಟಿದರೆ ಬಹುಮಾನ! ಕೆಲವು ಸಾರಿ ನೇಗಿಲಿನ ಅಡಿಯಿಂದ ನೀರು ಎಷ್ಟು ಮೇಲಕ್ಕೆ ಚಿಮ್ಮುವುದೋ ಅಷ್ಟು ಕೀರ್ತಿ! ಕಂಬಳ ಮುಗಿದು ತಿಂಗಳಾದರೂ, ಮೊದಲನೆ ಸ್ಥಾನಪಡೆದ ಕೋಣಗಳ ಶಿಫಾರಸಿನ ಮಾತು ಊರವರ ಬಾಯಿಂದ ತಪ್ಪದು.

ಕಂಬಳ ಮುಗಿದರೆ ಅಲ್ಲೇ ಮಗ್ಗಲಿನ ಗದ್ದೆಯಲ್ಲಿ ಪ್ರತಿದಿನ ಸಂಜೆ ಕೋಳಿಯ ಜೂಜಿದೆ. ಅದಕ್ಕೂ ನೆರೆಯುವ ಜನಸಂದಣಿ ದೊಡ್ಡದು. ಬಲುದೂರದಿಂದ ಹುಂಜಗಳನ್ನು ತರುವರು. ಅವನ್ನೆಲ್ಲ ಒಂದೊಂದು ಗೂಟಕ್ಕೆ ಬಿಗಿಯುವರು. ಜೂಜು ತೊಡಗುವ ತನಕ ಅವು ಅಲ್ಲೇ ಇರುವುವು. ಒಂದನ್ನೊಂದು ನೋಡಿಕೊಂಡು ಅವು ಕೂಗುವ ಚೆಂದವೇನು? ಈಗ ಜೂಜಿಗೆ ಪ್ರಾರಂಭ. ಹುಂಜಗಳ ಕಾಲಿಗೆ ಮಸೆದ ಕತ್ತಿಯನ್ನು ಕಟ್ಟಿ, ಒಂದರ ಎದುರಿಗಿನ್ನೊಂದನ್ನು ಹಿಡಿದು ಜೂಜಿಗೆ (ಚಿ. 82) ಬಿಡುವರು. ಕಿಟ್ಟುವಿನ ಮನಸ್ಸು ಮೃದು. ಅವನಿಗೆ ಹೀಗೆ ಕೋಳಿಗಳನ್ನು ಎತ್ತಿ ಕಟ್ಟಿ, ವಿನೋದಕ್ಕಾಗಿ ಕೊಲ್ಲುವುದನ್ನು ಕಂಡರೆ ಆಗದು. ಹೇಗಿದ್ದರೂ ಒಂದಲ್ಲ ಒಂದು ಕೋಳಿಯು ಸಾಯುವುದು. ಸತ್ತ ಕೋಳಿ ಗೆದ್ದವನಿಗೆ. ಕೋಳಿ ಗಾಯಗೊಂಡರೆ ಗಾಯವನ್ನು ಹೊಲಿದು, ಗಾಳಿಹಾಕಿ ಬದುಕಿಸುವರು. ಈ ಆಟದಿಂದ ತುಂಬಾ ಹಣ ಹಾಳುಮಾಡಿಕೊಳ್ಳುವವರುಂಟು.

ವಿದೇಶಗಳಲ್ಲೂ ಕೋಳಿಯ ಜೂಜಿದೆ. ಅಲ್ಲಿ ಕುರಿಗಳನ್ನೂ ಜಗಳಾಡಲು ಬಿಡುವುದುಂಟು. ಕೋಣಗಳ ಓಟದಂತಿರುವ ಕುದುರೆಯ ಓಟಗಳು ಮುಂಬಯಿ, ಪೂನಾ, ಬೆಂಗಳೂರು ಮೊದಲಾದ ಹಲವು ಶಹರುಗಳಲ್ಲಿವೆ. ಪಾಶ್ಚಾತ್ಯರು ಕುದುರೆಯ ಜೂಜಿಗಾಗಿ ಲಕ್ಷಾಂತರ ರೂಪಾಯಿಗಳನ್ನು ವ್ಯಯಿಸುವುದುಂಟು.

ಊರಿನ ಮೇಲು ಜಾತಿಯವರು ಜಾತ್ರೆ, ದೀಪೋತ್ಸವ, ಕಂಬಳ ಮೊದಲಾದ ವಿನೋದಗಳನ್ನು ಏರ್ಪಡಿಸಿ ಆನಂದಿಸುವರು. ಆದರೆ ಹೊಲೆಯರು ಸದಾ ಆನಂದ ಪ್ರಿಯರು. ಪ್ರತಿದಿನ ಅವರ ಮನೆಯಲ್ಲಿ ದುಡಿ ದೋಲುಗಳನ್ನು ಬಾರಿಸಿ ಕುಣಿಯುವರು. ಸಂಜೆಯ ತನಕ ದಣಿದು, ಕೈಗೆ ದುಡ್ಡು ಸಿಕ್ಕಿದರೆ ಕುಡಿದು, ಮನೆಗೆ ಬಂದರೆಂದರೆ, ಹೊಟ್ಟೆಯ ಹಸಿವಿನ ಎಣಿಕೆಯೂ ಅವರಿಗಿರುವುದಿಲ್ಲ. 'ಲೇ, ಲೇ' ಹಾಡುತ್ತ ಹೆಂಗಸರು ಮಕ್ಕಳು ಕಿರಿಯರು ಹಿರಿಯರು ಎನ್ನದೆ ಕುಣಿಯುವರು (ಚಿ. 83).

ಮಂಗಳೂರಿನಂಥ ನಗರಗಳಲ್ಲಿ ಬೇಸರವನ್ನು ಪರಿಹರಿಸಲು ಸಿನೇಮಾಗಳಿವೆ. ಆಗಾಗ ನಾಟಕ, ಸರ್ಕಸುಗಳು ಬರುತ್ತವೆ. ಕಿಟ್ಟುವಿನ ಹಳ್ಳಿಗೆ ಅವು ಬರುವುದುಂಟೆ? ಬಂದರೂ ಅವರಿಗೆ ಕೊಡಲು ಅಲ್ಲಿನ ಜನರಲ್ಲಿ ಕಾಸುಂಟೆ? ಅವರ ಪಾಲಿಗೆ ಯಕ್ಷಗಾನ ಮೊದಲಾದುವೇ ಬೇಸರಪರಿಹಾರದ ಹಾದಿಗಳು ಅವೆಲ್ಲ ಇದ್ದರೆ ಹಳ್ಳಿಯಲ್ಲಿ ಸಮಯವನ್ನು ಬೇಸರವಿಲ್ಲದೆ ಕಳೆಯಬಹುದು. ಕಾಡುಜನರಿಂದ ಹಿಡಿದು, ತೀರ ಮುಂದರಿದ ಜನಾಂಗದವರಲ್ಲೂ ಮನಸ್ಸಿಗೆ ಸಂತೋಷವನ್ನು ಕೊಡುವ ನರ್ತನ, ಆಟ, ನಾಟಕಗಳು ಇದ್ದೇ ಇವೆ.

ಎಷ್ಟೋ ಹಳ್ಳಿಗಳಲ್ಲಿ, ಜನರು ಸ್ನಾನಕ್ಕೆ ಸೇರುವ ಕೆರೆಗಳಿವೆ. ಬೆಳಗಿನಿಂದ ಹಿಡಿದು ಹೊತ್ತೇರುವ ತನಕ ಅಲ್ಲಿಗೆ ಸ್ನಾನಕ್ಕೆ ಬರುತ್ತಲೇ ಇರುವರು. ಆಗ ಊರಿನ ನೆರೆಕರೆಯ ಜನರೊಡನೆ ಮಾತುಕತೆಗಳನ್ನಾಡುವ ಸಮಯವದು. ಪ್ರತಿಯೊಬ್ಬರೂ ಒಂದಿಷ್ಟು ಹರಟೆಯಿಲ್ಲದೆ ಮಿಂದುಹೋಗುವುದಿಲ್ಲ. ಊರಿನ ಮಕ್ಕಳಿಗೆ ಇಂಥ ಕೆರೆಗಳೆಂದರೆ ಜೀವ. ಒಮ್ಮೆ ಇಳಿದರೆ ಮೇಲೆ ಬರುವುದಕ್ಕೆ ಮನಸ್ಸುಬಾರದು. ಕೆರೆಯಲ್ಲಿ ಕಪ್ಪೆಯಾಗಿಯೂ ಇರಬಹುದೆಂದು ಅವರ ಆಸೆ. ಊರವರಿಗೆ ಕೆರೆಯು ಇಷ್ಟು ಅವಶ್ಯದ ವಸ್ತುವಾದರೂ, ಅದನ್ನು ಚೊಕ್ಕಟವಾಗಿರಿಸುವ ಅಭ್ಯಾಸವು ನಮ್ಮಲ್ಲಿ ಬಹು ಕಡಿಮೆ. ಹಿಂದಿನವರು ಕಟ್ಟದ ಕೆರೆಗಳು ಹಲವು ಹಾಳುಬಿದ್ದಿವೆ. ಅವುಗಳ ಮೆಟ್ಟಲುಗಳು ಜರಿದು, ಈಗ ಕೆಸರುತುಂಬಿ, ಪಾಚಿ, ಅಂತರಗಂಗೆ ಬೆಳೆದು ಹಾಳಾದರೂ ಅವನ್ನು ಚೊಕ್ಕಟವಾಗಿರಿಸುವ ಆಸೆ (ಚಿ. 85) ಹಳ್ಳಿಯ ಜನರಲ್ಲಿ ಉಂಟಾಗುವುದಿಲ್ಲ. ಪ್ರತಿಯೊಬ್ಬರೂ ಕೊಳೆನೀರಲ್ಲೇ ಮಿಂದು, ತಂತಮ್ಮಷ್ಟಕ್ಕೇ ಹೋಗುವರು.

ಮೊದಲಿನ ದಿನಗಳಲ್ಲಿ ಹಳ್ಳಿಯ ಜೀವನವೆಂದರೆ ಅಷ್ಟು ಒಮ್ಮತದ ದಿನವಿತ್ತು. ದೇವಾಲಯ, ಕೆರೆ, ಹುಲ್ಲುಗಾವಲುಗಳೆಂದರೆ ಊರಿನ ಉಪಯೋಗದ ವಸ್ತುಗಳು. ಊರಿನ ಪ್ರತಿಯೊಬ್ಬರೂ ಬಲು ಎಚ್ಚರದಿಂದ ಅವುಗಳನ್ನು ರಕ್ಷಿಸುತ್ತಿದ್ದರು. ಒಂದಿಷ್ಟು ಕೆಸರು ನಿಲ್ಲದಂತೆ ನೋಡುತ್ತಿದ್ದರು. ಆಗಿನ ದಿನಗಳಲ್ಲಿ ಹಳ್ಳಿಯೆಂದರೆ— ಪರರನ್ನು ಆಶ್ರಯಿಸದಿದ್ದ ಒಂದು ಸ್ವತಂತ್ರ ರಾಜ್ಯವೆಂದರೂ ಅನ್ನಬಹುದು. ಅಂಥ ಉತ್ತಮ ಪದ್ಧತಿಗಳನ್ನು ಬಿಟ್ಟುದರಿಂದಲೇ ನಮ್ಮ ಆರೋಗ್ಯ ಸಂಪತ್ತುಗಳೆರಡೂ ದಿನೇ ದಿನೇ ಹಾಳಾಗುತ್ತ ಬರುತ್ತಿವೆ.

---

೧೩. ನಮ್ಮ ಊರಿನ ಕಥೆ

ನಮ್ಮ ಮನೆ, ನಮ್ಮ ಊರು ಎಂದರೆ ಎಲ್ಲರಿಗೂ ಒಂದು ಹೆಮ್ಮೆ. ದಕ್ಷಿಣ ಕನ್ನಡವಾದರೂ ಹೆಮ್ಮೆಪಟ್ಟುಕೊಳ್ಳಲು ಯೋಗ್ಯವಾದ ಪ್ರದೇಶವೇ ಸರಿ. ಅದರ ಕೀರ್ತಿ ಬಲು ಹಿಂದಿನಿಂದಲೂ ಹರಡಿತ್ತು. ಸಾವಿರ ಎರಡುಸಾವಿರ ವರುಷಗಳ ಹಿಂದಿನಿಂದಲೂ ನಮ್ಮ

ಊರವರು ಬಲುದೂರ ದೇಶಗಳೊಡನೆ ವ್ಯಾಪಾರಮಾಡುತ್ತಿದ್ದರೆಂದು ತಿಳಿದುಬಂದಿದೆ. ಮಲ್ಪೆ, ಬಾರಕೂರು, ಬಸರೂರುಗಳು ಹಿಂದಿನ ಕಾಲದಲ್ಲಿ ಪ್ರಸಿದ್ಧವಾದ ಬಂದರುಗಳಾಗಿದ್ದುವು. ಈಗ ಮಾತ್ರ ಬಾರಕೂರು, ಬಸರೂರುಗಳಿಗೆ ಹಡಗುಗಳು ಹೋಗುವುದಿಲ್ಲ. ಅಲ್ಲಿ ನದಿಗಳಲ್ಲಿ ವರುಷಂಪ್ರತಿ ಕೆಸರುಮಣ್ಣುಗಳು ಬಂದು ಬಿದ್ದು, ನದಿಯ ಆಳವು ಕಡಿಮೆಯಾಗಿ ಹಡಗುಗಳಿಗೆ ಹಾದಿ ಕಟ್ಟಹೋಗಿದೆ ಆದರೆ ಮಲ್ಪೆಯು ಮಾತ್ರ ಇನ್ನೂ ದೊಡ್ಡ ಬಂದರಾಗಿದೆ. ತೀರಕ್ಕೆ ಎದುರಾಗಿರುವ ದರಿಯಾಬಾದರಗಡ ದ್ವೀಪದ ದೆಸೆಯಿಂದ, ಎಂಥಾ ತುಫಾನಿನ ಸಮಯದಲ್ಲೂ ಹಡಗುಗಳು ಶಾಂತವಾಗಿ ಬಂದು ನಿಲ್ಲಬಹುದು. ಈ ವ್ಯಾಪಾರಗಳಿಂದಾಗಿ ನಮ್ಮವರಿಗೆ ಬಲುದೂರದ ಜನರ ಸಂಪರ್ಕವಿದ್ದು, ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಅವಕಾಶವಿತ್ತು. ಇಂದಿಗೆ ಸಾಧಾರಣ ೬೦೦–೭೦೦ ವರುಷಗಳ ಹಿಂದೆ, ದಕ್ಷಿಣದಲ್ಲಿ ವಿಜಯನಗರ ಸಾಮ್ರಾಜ್ಯವೆಂಬ ಬಲು ದೊಡ್ಡ ರಾಜ್ಯವಿತ್ತು. ನಮ್ಮ ಜಿಲ್ಲೆಯು ಅವರ ಆಧೀನದಲ್ಲಿದ್ದು, ಅವರ ಪ್ರತಿನಿಧಿಗಳು ನಗರ, ಇಕ್ಕೇರಿ ಮೊದಲಾದ ಕಡೆಗಳಲ್ಲಿ ನೆಲಸಿಕೊಂಡು, ದಕ್ಷಿಣ ಕನ್ನಡವನ್ನು ಆಳುತ್ತಿದ್ದರು. ಅವರ ಕೈಕೆಳಗಿನ ಪಾಳೆಯಗಾರರು ನಮ್ಮ ಊರಲ್ಲೇ ನೆಲಸಿ, ರಾಜ್ಯಪರಿಪಾಲನೆಯ ಕೆಲಸದಲ್ಲಿದ್ದರು. ಆಗಿನ ದಿನಗಳಲ್ಲಿ ವಿಜಯನಗರದಿಂದಲೂ, ಇಕ್ಕೇರಿ ನಗರಗಳಿಂದಲೂ ನಮ್ಮ ಬಂದರುಗಳಿಗೆ ವ್ಯಾಪಾರಿಗಳು ಸಾಲುಸಾಲು ಎತ್ತುಗಳ ಮೇಲೆ ಹೇರುಗಳನ್ನು ಹೊರಿಸಿಕೊಂಡು ತರುತ್ತಿದ್ದರು. ಬಾರಕೂರು ಮೊದಲಾದಂಥ ಬಂದರುಗಳಿಂದ ಈ ಸಾಮಾನುಗಳು ಹಡಗುಗಳ ಮೂಲಕ ಅರೇಬಿಯದ ವರೆಗೂ ಸಾಗಿಹೋಗುತ್ತಿದ್ದುವು.

ನಮ್ಮ ಊರಲ್ಲಿ ಅಲ್ಲಲ್ಲಿ ದೇವಾಲಯ ಮೊದಲಾದ ಕಡೆಗಳಲ್ಲಿ ಕಾಣಸಿಗುವ ಶಿಲಾಶಾಸನಗಳಿಂದ ನಮ್ಮ ಊರಿನ ವಿಷಯಗಳನ್ನು ತಿಳಿದುಕೊಳ್ಳಬಹುದಾಗಿದೆ. ಉದಿಯಾವರದ ಹತ್ತಿರ ಇಂದಿಗೆ ೧೬೦೦ ವರುಷಗಳ ಹಿಂದಿನ ಬರಹಗಳು ಸಿಕ್ಕಿವೆ! ಬಾರಕೂರು, ಬಸರೂರು, ಮೂಡಬಿದರೆ, ಕಾರ್ಕಳ ಮೊದಲಾದ ಊರುಗಳು ಹಿಂದಿನ ಕಾಲದಲ್ಲಿ ಬಹು ಪ್ರಸಿದ್ಧಿಗೆ ಬಂದ ಊರುಗಳಾಗಿದ್ದುವು. ಈಗಿನ ಬಾರಕೂರಿನಲ್ಲಿ ಹಿಂದಿನ ವೈಭವವನ್ನು ತೋರುವ ಹರುಕುಮುರುಕು ಗುಡಿಗಳು, ಕೆರೆಗಳು, ದೇವಾಲಯಗಳು ಮಾತ್ರ ಇವೆ. ದೊಡ್ಡದೊಡ್ಡ ಬೀದಿಗಳ ಸಾಲೇ ಹುಟ್ಟಳಿದು ಹೋಗಿದೆ. ಎಷ್ಟು ವರುಷಗಳಾಗಲಿಲ್ಲ!

ಆದರೆ ಇಷ್ಟು ಸಮಯದ ಹಾವಳಿಯನ್ನೂ ತಡೆದಿರುವ ಎಷ್ಟೋ ಚೆಲುವಿನ ಚಿತ್ರಗಳು ಇತರ ಕಡೆಗಳಲ್ಲಿ ಇನ್ನೂ ಉಳಿದು ಬಂದಿವೆ. ಕಾರ್ಕಳದಲ್ಲಿರುವ ಚತುರ್ಮುಖ ಬಸದಿ, ಹಿರೆಯಂಗಡಿಯ ಮಾನಸ್ತಂಭ (ಚಿ. 87), ಕಾರ್ಕಳ, ವೇಣೂರುಗಳಲ್ಲಿರುವ ಎತ್ತರವಾದ ಗೋಮಟೇಶ್ವರ (ಚಿ. 86) ವಿಗ್ರಹಗಳು, ಕದಿರೆ ದೇವಾಲಯ, ಬೈಂದೂರಿನ ದೇವಾಲಯ ಹಿಂದಿನವರ ಬಿರುದನ್ನು ಸಾರುತ್ತಿವೆ. ಮೂಡಬಿದರೆಯ ಸಾವಿರಕಂಭದ ಬಸದಿಯು (ಚಿ. 88) ಸಾಮಾನ್ಯ ಮಂದಿರವೇ? ಶಿಲೆಯಿಂದ ಅಷ್ಟು ವಿಶಾಲವಾದ ಮಂದಿರಗಳನ್ನು, ಸ್ಮಾರಕಗಳನ್ನು

ನಿಲ್ಲಿಸಲು ಎಷ್ಟು ಸಾಹಸ ಬೇಕು! ಇಂದಿಗೂ ಅವು ಹಾಳಾಗದೆ ತಮ್ಮ ಚೆಲುವನ್ನು ತೋರುತ್ತಿವೆಯಲ್ಲ! ಅವನ್ನೆಲ್ಲ ರಚಿಸಿ ೪೦೦-೫೦೦ ವರುಷಗಳ ಮೇಲಾದುವು. ಕಟ್ಟಿಸಿದವರು ಸತ್ತರು. ಅವರ ಹೆಸರು ಮರವೆಯಾಯಿತು. ಆದರೆ ಅವರ ಕೆಲಸಗಳು ಮಾತ್ರ ಅವರ ಕೀರ್ತಿಯನ್ನು ಇನ್ನೂ ಸಾರುತ್ತಿವೆ! ನಮ್ಮ ಜಿಲ್ಲೆಯ ಸಂದುಗೊಂದಿನಲ್ಲೂ ಇಂಥ ಗುರುತುಗಳಿವೆ! ಮಾತನಾಡದ ಕಲ್ಲುಗಳೆಲ್ಲ ನಮ್ಮನ್ನು ಕರೆದು ಕರೆದು ಮಾತನಾಡಿಸುತ್ತವೆ!

ನಮ್ಮ ಹಿರಿಯರು ಕಾರ್ಕಳ, ಮೂಡಬಿದರೆ, ಬಾರಕೂರು ಮೊದಲಾದ ಸ್ಥಳಗಳಲ್ಲಿ ರಾಜ್ಯವನ್ನು ಆಳಿದರು. ಕೀರ್ತಿ ತಂದರು. ಅವರ ಭುಜಬಲ ಪರಾಕ್ರಮಗಳೆಷ್ಟಿರಬೇಕು? ಹಿಂದಿನ ಕಾಲದಲ್ಲಿ ಒಂದು ಹಳ್ಳಿಯ ಯಜಮಾನನಾಗುವುದು ಕಷ್ಟದ ಕೆಲಸ. ಹೀಗಿರಲು, ಒಂದೊಂದು ಸಂಸ್ಥಾನದ ಅರಸನಾಗಿರುವುದು ಸುಲಭದ ಕೆಲಸವೇ? ಘಟ್ಟದ ಮೇಲಿಂದ ಎಷ್ಟೋ ಪಾಳೆಯಗಾರರು ದಂಡೆತ್ತಿ ಬರುತ್ತಿದ್ದರು. ಸಮುದ್ರ ಮಾರ್ಗವಾಗಿಯೂ ಸೇನೆಗಳು ಬರುತ್ತಿದ್ದುವು. ಇಂಗ್ಲಿಷರ, ಪೋರ್ತುಗೀಸರ ಪಡೆಗಳೆಲ್ಲ ಕಡಲು ಹಾದಿಯಾಗಿ ಬಂದವುಗಳು. ಇವುಗಳೊಡನೆ ಕಾದಾಡುವುದು ಸುಲಭದ ಕೆಲಸವೇ?

ನಮ್ಮ ಊರಿನ ಒಂದೆರಡು ಕೋಟೆಗಳನ್ನು ಕಂಡರೆ ತಿಳಿಯುವುದು. ಬೇಕಲದಲ್ಲಿರುವ ದೊಡ್ಡ ಕೋಟೆಯು (ಚಿ. 90) ಸಮುದ್ರಕ್ಕೆ ಇದಿರಾಗಿದ್ದು, ಕಡಲು ಹಾದಿಯಾಗಿ ಬರುವ ವೈರಿಗಳನ್ನು ತಡೆಯಲು ನಿಂತಂತೆ ಕಾಣುವುದು. ಇತ್ತ ಪಶ್ಚಿಮ ಘಟ್ಟದ ಸೆರಗಿನಲ್ಲಿರುವ ಜಮಾಲಗಡವನ್ನು (ಚಿ. 89) ಕಂಡರೆ ದಿಗಿಲೇ ಹಾರಬೇಕು. ಟಿಪ್ಪುವು ಅದನ್ನು ದುರುಸ್ತಿಪಡಿಸಿದನಂತೆ ಅದಕ್ಕೂ ಮೊದಲು ಅಲ್ಲೊಂದು ಜೀರ್ಣವಾದ ಕೋಟೆಯಿತ್ತು. ಅದೆಂಥ ಕೋಟೆಯು! ೧೨೦೦ ಅಡಿ ಎತ್ತರವಾದ ಬಂಡೆಕಲ್ಲಿನ ಮೇಲೆ ಕಟ್ಟಿದ ಕೋಟೆ. ಕಿರಿದಾದ ಒಂದು ಕಡಿದ ಹಾದಿಯನ್ನು ಬಿಟ್ಟರೆ, ಉಳಿದ ಯಾವ ಕಡೆಯಿಂದಲೂ ತುದಿಯ ತನಕ ಏರುವ ಹಾಗಿಲ್ಲ. ದಾರಿಯಿಂದ ವೈರಿಗಳು ಬರುವಾಗ ಮೇಲಿನಿಂದ ಒಂದು ಕಲ್ಲನ್ನು ಉರುಳಿಸಿದರೆ ಸಾಕು! ಅವರ ಹೆಸರೇ ಇಲ್ಲದಂತಾಗುವುದು!

ನಮ್ಮ ಹಿರಿಯರ ಬಿರುದನ್ನು ಸಾರುವ ಕೋಟೆ, ಗುಡಿ, ಗೋಪುರಗಳಿಗೆ ಮಿತಿಯಿಲ್ಲ. ಅವನ್ನು ನಾವು ಆಗಾಗ ಕಾಣುತ್ತಿರಬೇಕು. ಅವುಗಳ ವಿಷಯ ತಿಳಿದುಕೊಳ್ಳುತ್ತಿರಬೇಕು. ನಮ್ಮ ಕಾಲವಾದ ಮೇಲೆ ನಮ್ಮ ಹೆಸರು ಮರವೆಯಾಗುವುದು ನಮಗೆ ಸಂತೋಷವೇ? ನಮ್ಮ ಹೆಸರಿನ ನೆನಪು ಉಳಿಯಲು ನಾವೇನು ಮಾಡಬೇಕು? ನಮ್ಮ ಹಿರಿಯರಂತೆ ನಾವೂ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಬೇಡವೆ?

ಅವರ ಕಾಲದಲ್ಲಿ ಇಷ್ಟೊಂದು ರೈಲುಗಳು, ಮೋಟಾರುಗಳು, ಯಂತ್ರಗಳು ಒಂದೂ ಇದ್ದಿರಲಿಲ್ಲ. ಅಂಥ ಸಮಯದಲ್ಲಿ ಗೋಮಟೇಶ್ವರನ ವಿಗ್ರಹದಂಥ ಭಾರಿ ಶಿಲೆಯ ವಿಗ್ರಹವನ್ನು ಬೆಟ್ಟದ ಮೇಲಕ್ಕೆ ಒಯ್ದು ನಿಲ್ಲಿಸಿದರು. ಈಗಿನ ಕಾಲದಲ್ಲಿ ಇಷ್ಟು ಅನುಕೂಲತೆಗಳಿದ್ದು, ನಾವೆಷ್ಟು ಮಹಾಕಾರ್ಯಗಳನ್ನು ಮಾಡಲು ಸಾಧ್ಯವಿಲ್ಲ?

---

೧೪. ನಮ್ಮ ಜಿಲ್ಲೆ

ನಮ್ಮ ಜಿಲ್ಲೆ, ನಮ್ಮ ಊರು ಎಂದು ಕರೆದರೆ ಬಲು ಸಣ್ಣದಾಗಿ ಕೇಳಿಸುವುದು. ಆದರೆ ನಿಜಕ್ಕೂ ನಮ್ಮ ಜಿಲ್ಲೆ ಸಣ್ಣದಿಲ್ಲ. ಕಾಲುಹಾದಿಯಾಗಿ ಒಂದು ತುದಿಯಿಂದ ಇನ್ನೊಂದು ತುದಿಗೆ ನೆಟ್ಟಗೆ ನಡೆದುಹೋದರೆ ಏಳು ದಿವಸಗಳು ಬೇಕು. ಅತಿ ದಕ್ಷಿಣದ ತ್ರಿಕರಪುರದಿಂದ ಅತಿ ಉತ್ತರದ ಶಿರೂರಿಗೆ ಸಾಧಾರಣ ೧೫೦ ಮೈಲಿಗಳಾಗುವುವು. ಜಿಲ್ಲೆಯ ಉದ್ದವು ಇಷ್ಟಾದರೆ, ಅಗಲವು ಕೆಲವು ಕಡೆಗಳಲ್ಲಿ ೧೫ ಮೈಲಿಗಳಿಂದ ಹಿಡಿದು, ಕೆಲವು ಕಡೆಗಳಲ್ಲಿ ೫೦ ಮೈಲಿಗಳಷ್ಟಾಗುವುದು. ಜಿಲ್ಲೆಯ ಒಟ್ಟು ವಿಸ್ತೀರ್ಣವು ೪೦೦೦ ಚದರ ಮೈಲಿಗಳಷ್ಟಿದೆ. ಇಷ್ಟು ದೊಡ್ಡ ಊರನ್ನು ಸುರಕ್ಷಿತವಾಗಿರಿಸಲು ಸುಲಭದ ಕೆಲಸವಲ್ಲ.

ಜನರಿಗೆ ಬೇಕಾದ ರಸ್ತೆ ಮೊದಲಾದ ಕಾಮಗಾರಿಗಳನ್ನು ನಡೆಯಿಸುವುದು, ಟಪ್ಪಾಲು ತಂತಿ, ಮೊದಲಾದ ಅನುಕೂಲತೆಗಳನ್ನು ಮಾಡಿಕೊಡುವುದು, ಆರೋಗ್ಯ ರಕ್ಷಣೆ ಮಾಡುವುದು, ಕಳ್ಳಕಾಕರ ಬಾಧೆಯನ್ನು ನಿವಾರಿಸುವುದು — ಇದೆಲ್ಲ ಒಬ್ಬರಿಂದ, ಒಂದೇ ಕಡೆಯಿಂದ ಆಗಬಲ್ಲುದೇ? ಆದುದರಿಂದ ನಮ್ಮ ಜಿಲ್ಲೆಯನ್ನು ಕುಂದಾಪುರ, ಉಡುಪಿ, ಕಾರ್ಕಳ, ಮಂಗಳೂರು, ಕಾಸರಗೋಡು, ಪುತ್ತೂರು–ಎಂದು ಆರು ವಿಭಾಗಗಳಾಗಿ ಮಾಡಿರುವರು. ಇವುಗಳಲ್ಲಿ ಕಾರ್ಕಳ, ಪುತ್ತೂರು ತಾಲೂಕುಗಳು ಮಾತ್ರ ಸಮುದ್ರ ತೀರವನ್ನು ಬಿಟ್ಟು ದೂರದಲ್ಲಿರುವ ತಾಲೂಕುಗಳು. ಹೀಗೆ ತಾಲೂಕುಗಳಾಗಿ ವಿಂಗಡಿಸಿದುದು ಅಳತೆಗೆ ಸರಿಯಾಗಿ ಹಂಚಿಯಲ್ಲ. ಅನುಕೂಲತೆ, ಅಂದಾಜುಗಳ ಮೇಲೆ ವಿಭಾಗಿಸಿದರು. ಜನಸಂಖ್ಯೆಯಲ್ಲಿಯೂ, ಉತ್ಪತ್ತಿಯಲ್ಲಿಯೂ ಇವುಗಳೆಲ್ಲ ಒಂದೇ ಸಮನಾಗಿಲ್ಲ.

ಕುಂದಾಪುರ ತಾಲೂಕಿನ ಮುಖ್ಯ ಪಟ್ಟಣವು ಕುಂದಾಪುರ. ಕಾರ್ಕಳಕ್ಕೆ ಕಾರ್ಕಳ. ಉಡುಪಿಗೆ ಉಡುಪಿ; ಕಾಸರಗೋಡು, ಪುತ್ತೂರುಗಳದು, ಕಾಸರಗೋಡು ಪುತ್ತೂರುಗಳೇ ಮುಖ್ಯ ಸ್ಥಳಗಳು. ಮಂಗಳೂರು ನಗರವು ಮಂಗಳೂರು ತಾಲೂಕಿಗೂ, ಇಡೀ ಜಿಲ್ಲೆಗೂ ಮುಖ್ಯ ಸ್ಥಳವು (ಚಿ. 91–95). ಸರಕಾರದವರು ಇಲ್ಲಿಂದಲೇ ಜಿಲ್ಲೆಯನ್ನು ಆಳುತ್ತಾರೆ. ಪ್ರತಿ ತಾಲೂಕಿನಲ್ಲಿಯೂ ತಮ್ಮ ರೇವಿನ್ಯೂ, ಅಬಕಾರಿ, ಫಾರೆಸ್ಟು, ವಿದ್ಯಾ, ಆರೋಗ್ಯ, ಪೋಲಿಸ್ ಮೊದಲಾದ ಖಾತೆಗಳನ್ನು ಇರಿಸಿ, ಅವುಗಳ ಮೇಲು ವಿಚಾರಣೆಯನ್ನು ಈ ನಗರದಿಂದ ನೋಡುತ್ತಾರೆ. ಇಲ್ಲಿಂದ ಪ್ರತಿ ತಾಲೂಕಿನ ಮುಖ್ಯ ಮುಖ್ಯ ಪಟ್ಟಣಕ್ಕೂ, ಇತರ ಪ್ರಮುಖ ಸ್ಥಳಗಳಿಗೂ ರಸ್ತೆ, ತಂತಿ, ಟಪ್ಪಾಲುಗಳ ಸಂಬಂಧವಿದೆ. ಅಲ್ಲದೆ ಪ್ರತಿ ತಾಲೂಕಿನ ಮುಖ್ಯ ಪಟ್ಟಣದಲ್ಲಿ ಕೋರ್ಟುಗಳು, ಕಚೇರಿಗಳು, ರಿಜಿಸ್ಟ್ರಿ ಆಫೀಸುಗಳು, ಆಸ್ಪತ್ರೆಗಳು ಆಳುವುದಕ್ಕೂ, ಜನರಿಗೆ ಅನುಕೂಲತೆ ಒದಗಿಸಿ ಕೊಡುವುದಕ್ಕೂ ನಿರ್ಮಿತವಾಗಿರುವುವು.

ದಕ್ಷಿಣ ಕನ್ನಡವೆಂದೊಡನೆಯೇ, ಅಲ್ಲಿನ ಪ್ರತಿಯೊಬ್ಬ ಮಗುವೂ, ಮುದುಕನೂ ಕನ್ನಡ ಮಾತನ್ನು ಆಡುತ್ತಾನೆಂದು ತಿಳಿಯಬಾರದು. ಅತಿ ಉತ್ತರದಲ್ಲಿರುವ ಕುಂದಾಪುರ ತಾಲೂಕಿನವರಿಗೆ ಕನ್ನಡ ಭಾಷೆಯಲ್ಲದೆ ಇನ್ನೇನೂ ತಿಳಿಯದು. ಆದರೆ ಉಡುಪಿ, ಕಾರ್ಕಳ, ಮಂಗಳೂರು, ಪುತ್ತೂರುಗಳಲ್ಲಿ ತುಳುವೇ ಬಹಳ. ಪುತ್ತೂರಿನಲ್ಲಿ ಕನ್ನಡವೊಂದನ್ನೇ ಮಾತಾಡುವವರಿದ್ದಾರೆ. ಕಾಸರಗೋಡು ತಾಲೂಕು ಮಲಬಾರಿಗೆ ಸಮೀಪವಿರುವುದರಿಂದ ಅಲ್ಲಿ ತುಳು ಭಾಷೆಯ ಜತೆಯಲ್ಲಿ ಮಲೆಯಾಳದ ರೂಢಿಯೂ ಇದೆ. ಒಟ್ಟಿಂದ ನಮ್ಮ ಜಿಲ್ಲೆಯಲ್ಲಿ ಅಚ್ಚ ಕನ್ನಡಿಗರ ಸಂಖ್ಯೆಗಿಂತ ಅಚ್ಚ ತುಳುವರೇ ಬಹಳ. ಅದಕ್ಕಾಗಿಯೇ ಒಂದು ಕಾಲದಲ್ಲಿ ನಮ್ಮ ಪ್ರಾಂತ್ಯಕ್ಕೆ 'ತುಳುದೇಶ'ವೆಂಬ ಹೆಸರಿತ್ತು. ಆದರೆ ತುಳುವಿಗೆ ಸ್ವತಂತ್ರ ಬರಹವಿಲ್ಲದೆ, ಅದು ಬರೀ ಆಡುವ ಭಾಷೆಯಾಗಿಯೇ ಉಳಿಯಿತು. ಬರೆಯುವ ಭಾಷೆಯೂ, ರಾಜಕೀಯ ಭಾಷೆಯೂ ಹಿಂದಿನಿಂದಲೂ ಕನ್ನಡವೇ. ಇಷ್ಟು ಭಾಷೆಗಳಲ್ಲದೆ ಕೊಂಕಣಿ, ಹಿಂದುಸ್ಥಾನಿ, ಮರಾಠಿ ಮಾತುಗಳನ್ನು ಆಡುವವರೂ ಬಹಳವಾಗಿರುವರು. ಇವೆಲ್ಲ ಮನೆಭಾಷೆಗಳೆಂದರೂ ಅನ್ನಬಹುದು.

ಮುಖ್ಯ ಪಟ್ಟಣವಾದ ಮಂಗಳೂರಿನ ಬೀದಿಯಲ್ಲಿ ತಿರುಗುವಾಗ ಕನ್ನಡ, ತುಳು, ಕೊಂಕಣಿ, ಮಲೆಯಾಳ, ಹಿಂದುಸ್ಥಾನಿ — ಇಷ್ಟು ಭಾಷೆಗಳೂ ಕೇಳಿಸುವುವು. ಮಾತೆಷ್ಟಾದರೇನು? ಮನಸ್ಸು ಒಂದಾದರಾಯಿತು.

ನಮ್ಮೂರು! ನಮ್ಮೂರು! ಎಂದು ಬರಿಯ ಹೆಮ್ಮೆಯಿಂದ ಪ್ರಯೋಜನವಿದೆಯೇ? ನಮ್ಮೂರಿನ ಹೆಸರು ಉಳಿಯಲು ನಾವು ಮಹತ್ವದ ಕೆಲಸವನ್ನು ಮಾಡಬೇಕು ಎಂದೆನಲ್ಲ. ದೊಡ್ಡ ಕೆಲಸಗಳನ್ನು ಮಾಡಲು ಧನವೂ, ವಿದ್ಯೆಯೂ ತೀರ ಅವಶ್ಯ. ನಮ್ಮ ಊರು ತೀರಾ ಬಡ ಊರು ನಮ್ಮ ಊರಿನಲ್ಲಿ ಒಬ್ಬನ ವರ್ಷದ ಆದಾಯವು ಬರೇ ೩೦ ರೂಪಾಯಿಗಳಷ್ಟು! ನಾವು ಸುಖಪಡಲು ನಮಗೆ ಹಣವು ಬೇಕು. ಹಣವನ್ನು ಹೆಚ್ಚಿಸಿಕೊಳ್ಳಲು ಬುದ್ಧಿವಂತಿಕೆ ಬೇಡವೆ? ನಮ್ಮ ವಿದ್ಯೆಯು ಹೆಚ್ಚಬೇಕು, ನಮ್ಮ ಹಳ್ಳಿಯಲ್ಲಿ ಓದುಬರಹವಿಲ್ಲದವರೇ ಇರಬಾರದು.

ಬೇರೆ ದೇಶಗಳೊಂದಿಗೆ ವ್ಯಾಪಾರವನ್ನು ಬೆಳೆಯಿಸಿಯಾಗಲೀ, ಕೈಗಾರಿಕೆಗಳನ್ನು ಕಲಿತಾಗಲೀ ನಾವು ಶ್ರೀಮಂತರಾಗಲು ನಮ್ಮ ವಿದ್ಯೆಯು ಹೆಚ್ಚಬೇಕು. ನಮ್ಮ ಕಿಟ್ಟು, ಪುಟ್ಟುಗಳಂತೆ ಪ್ರತಿಯೊಬ್ಬ ಬಾಲಕನೂ, ಬಾಲಕಿಯೂ ಸಾಲೆಗೆ (ಚಿ. 96) ಹೋಗಬೇಕು. ಪ್ರತಿಯೊಬ್ಬರೂ, ನಮ್ಮ ಊರು ಹೇಗೆ ಒಳ್ಳೇದಾದೀತು? ಎಂಬ ಯೋಚನೆಯಿಂದಿರಬೇಕು.

ಒಂದು ದಿನ ನಾವು ಸಹ ಅಮೇರಿಕ, ಜರ್ಮನಿ, ಇಂಗ್ಲಾಂಡಿನ ಜನರಂತೆ ಯಂತ್ರಗಳನ್ನು ಮಾಡಲು ಕಲಿಯಬೇಡವೆ? ಅವರಂತೆ ವಿಮಾನ ಮೊದಲಾದ ಯಂತ್ರಗಳನ್ನು ಕಂಡುಹಿಡಿದು, ಹೆಸರನ್ನು ಗಳಿಸಬೇಡವೆ? ಜರ್ಮನಿ, ಅಮೇರಿಕದಲ್ಲಿರುವ ಮಕ್ಕಳು ನಮ್ಮಂತೆಯೇ ಮಕ್ಕಳಲ್ಲವೆ? ಅವರೊಂದೇನು ಹೆಚ್ಚು? ನಾವೊಂದೇನು ಕಡಿಮೆ?

ತಾಲೂಕುಗಳ ವಿಸ್ತೀರ್ಣ ಚ. ಮೈಲುಗಳಲ್ಲಿ.



1931ನೇ ಖಾನೇಸುಮಾರಿ ಜನಸಂಖ್ಯೆ 13,66,944.





1. ಕೊಲ್ಲೂರು (ಹನ್ನಾರು) ಘಾಟಿ. 2. ಕೊಲ್ಲೂರು ದೇವಾಲಯ. 3. ಹೊಸಂಗಡಿ ಘಾಟಿ. 4. ಕುಂದಾಪುರ. 5. ಬಾರಕೂರು. 6. ಸೋಮೇಶ್ವರ ಘಾಟಿ. 7. ಉಡುಪಿ ಶ್ರೀ ಕೃಷ್ಣದೇವಾಲಯ. 8. ಕಾಪು ದೀಪಸ್ತಂಭ. 9. ಕಾರ್ಕಳ ಗೊಮಟೇಶ್ವರ. 10. ಮೂಡಬಿದಿರೆ ಬಸದಿ. 11. ವೇಣೂರು ಗೊಮಟೇಶ್ವರ. 12. ಜಮಾಲಬಾದು ಕೋಟೆ. 13. ಚಾರ್ಮಾಡಿ ಘಾಟಿ. 14. ಧರ್ಮಸ್ಥಳ. 15. ಉಪ್ಪಿನಂಗಡಿ. 16. ಮಂಗಳೂರು. 17. ಪುತ್ತೂರು. 18. ಶಿರಾಡಿ ಘಾಟಿ. 19. ಬಿಸಿಲೆ ಘಾಟಿ. 20. ಸುಬ್ರಹ್ಮಣ್ಯ. 21. ಸಂಪಾಜೆ ಘಾಟಿ. 22. ಕುಂಬಳೆ ಕೋಟೆ. 23. ಕಾಸರಗೋಡು. 24. ಬೇಕಲ ಕೋಟೆ.

1. Kudremukh. ಕುದುರೆಮುಖ ಶಿಖರ.

2. Kumar-Mtn. ಕುಮಾರಪರ್ವತ.



3. Kutachadri Peak. ಕುಟಚಾದ್ರಿ.

4. In the Charmadi Ghat. ಚಾರ್ಮಾಡಿ ಘಟ್ಟದಲ್ಲೊಂದು ಶಿಖರ.



5. Bantamale. ಬಂಟಮಲೆ.



6. A Forest nook. ಕಾಡಿನ ಕಿಬ್ಬದಿ.



7. Hills, Bellare. ಗುಡ್ಡಗಳು, ಬೆಳ್ಳಾರೆ.



8. Lake Ramasamudra. ರಾಮಸಮುದ್ರ, ಕಾರ್ಕಳ.

9. Netravati Rapids. ನೇತ್ರಾವತಿಯ ಧುಮುಕಾಟ, ಧರ್ಮಸ್ಥಳ.

10. Dance of Netravati. ನೇತ್ರಾವತಿಯ ನರ್ತನ

11. Breaking its way through. ಹಾದಿ ಸೀಳಿ ಸಾಗುವ ನದಿ.

12. A Quiet Reach. ದಣಿದು ಬಂದುದಕ್ಕೊಂದು ವಿಶ್ರಾಂತಿ.



13. River Payaswini. ಪಯಸ್ವಿನಿ ನದಿ, ಅರಂತೋಡು.

14. The meeting. ನೇತ್ರಾವತಿ ಕುಮಾರಧಾರಾ ಸಂಗಮ, ಉಪ್ಪಿನಂಗಡಿ

15. To the Sea. ರೇವು, ಕುಂಬಳೆನದಿಯ ಸಮುದ್ರ ಸಂಗಮ.



16. The sea at Bekal. ಬೇಕಲದ ಸಮುದ್ರ ತೀರ.



17. Bahadurgad. ದರಿಯಾಬಾದರಗಡ.



18. Giants of the Forests. ಅನೆಗಳು.



19. The King of the Western Ghats. ಬರೆ ಹುಲಿ.



20. We are Two. ಚಿರತೆಗಳು.



21. Wild Boar. ಕಾಡುಹಂದಿ.



22. Bisons. ಕಾಟಗಳು.



23. The Indian Stag. ಕಡವೆ.



24. The deer. ಜಿಂಕೆ.



25. Python. ಹೆಬ್ಬಾವು.



26. King Cobra. ನಾಗರಹಾವು.



27. A Crocodile's Anger. ಮೊಸಳೆಯ ಸಿಟ್ಟು.



28. Sea Gulls. ಬೆಳ್ಳಕ್ಕಿಗಳು.



29. Sri Krishna Temple. ಶ್ರೀಕೃಷ್ಣ ದೇವಾಲಯ, ಉಡುಪಿ.



30. Sri Subramanya Temple. ಸುಬ್ರಮಣ್ಯ ದೇವಾಲಯ.

31. Sri Dharmasthala Temple. ಧರ್ಮಸ್ಥಳ ದೇವಾಲಯ.

32. Devil Dancers. ಬೈದ್ಯರ ನೇಮ, ಕರಾಯ.



33. Thousand Pillared Jain Temple. Moodbidri. ಸಾವಿರ ಕಂಭ ಬಸದಿ, ಮೂಡಬಿದಿರೆ.



34. A Mosque. ಮಜೀದಿ, ಮಂಗಳೂರು.

35. Rozario Church, Mangalore. ರುಜಾರಿಯೋ ಇಗರ್ಜಿ, ಮಂಗಳೂರು.



36. Santi Church. ಪ್ರೊಟೊಸ್ಟಾಂತರ 'ಶಾಂತಿ ದೇವಾಲಯ,' ಮಂಗಳೂರು.

37. A Pariah Couple. ಆದಿದ್ರಾವಿಡ ದಂಪತಿಗಳು.



38. A Brahmin. ಬ್ರಾಹ್ಮಣ ಗೃಹಸ್ಥ.

39. A Moplah. ಮಾಪಿಳ್ಳೆ ಗೃಹಸ್ಥ.



40. A Roman Catholic. ಕ್ರೈಸ್ತ ಗೃಹಸ್ಥ.



41. Behind the Plough. ಉಳುವುದು.

42. A village dam. ನಿರಾವರಿಗಾಗಿ ಕಟ್ಟಿದ ಕಟ್ಟು.



43. Paddy and Sugar-cane fields. ಭತ್ತ ಮತ್ತು ಕಬ್ಬಿನ ಹೊಲಗಳು.

44. Tobacco cultivation. ಹೊಗೆಸೊಪ್ಪಿನ ಕೃಷಿ.



45. Cocoanuts Palms. ತೆಂಗು.



46. Aracanut Garden. ಕಂಗು (ಅಡಿಕೆ).



47. A Rubber Plantation. ರಬ್ಬರ ತೋಟ, ಕಡಮಕಲ್ಲು.

48. The village Blacksmith. ಕಮ್ಮಾರ.

49. The Cobler. ಸಮುಗಾರ.



50. The Potter. ಕುಂಬಾರ.



51. The Carpenter. ಬಡಗಿ.



52. The Weaver. ಜೇಡರವನು.



53. The Fishermen. ಬೆಸ್ತರು.



54. At the stone-quarry. ಕಲ್ಲಣೆ.

55. Women Labourers. ಕಾರ್ಖಾನೆಯಲ್ಲಿ ದುಡಿಯುವ ಹೆಂಗುಸರು.



56. A Coffee Works, Bolur. ಕಾಫಿ ಕಾರ್ಖಾನೆ, ಬೋಳೂರು.



57. Inside the Coffee-curing house. ಕಾಫಿ ಶುಚಿಮಾಡುವ ಯಂತ್ರಗಳು.



58. A Tile Factory. ಹಂಚಿನ ಕಾರ್ಖಾನೆ, ಕುದ್ರೋಳಿ.



59. A Printing Press. ಛಾಪಖಾನೆ, ಮಂಗಳೂರು.

60. On the way to Subramanya. ಸುಬ್ರಮಣ್ಯದ ಹಾದಿ.



61. The Ghat Road. ಘಟ್ಟದ ರಸ್ತೆ.

62. A village bridge. ಹಳ್ಳಿಯ ಸೇತುವೆ.



63. A Ferry. ಕೂಳೂರು ಕಡವು.



64. Belthangadi Bridge. ಬೆಳ್ತಂಗಡಿಯ ಸೇತುವೆ.



65. A Bullock Cart. ಎತ್ತಿನ ಬಂಡಿ.



66. A motor bus in the Ghat road. ಮೋಟಾರು ಬಂಡಿ.



67. The S. I Ry. Train. ಉಗಿಬಂಡಿ.



68. Railway Terminus. ರೈಲ್ವೆ ನಿಲ್ದಾಣ, ಮಂಗಳೂರು.



69. A Sailing Boat. ಹಾಯಿ ದೋಣಿ.



70. Native Crafts in Mangalore Port. ಮಂಗಳೂರು ಬಂದರಿನಲ್ಲಿ ಹಾಯಿ ಹಡಗುಗಳು.



71. The Lighthouse, Kaup. ಕಾಪು ದೀಪಸ್ತಂಭ.



72. S. S. Netravati at the Mangalore sea. ಮಂಗಳೂರಿನಲ್ಲಿ ಬಂದರಾದ ನೇತ್ರಾವತಿ ಉಗಿಹಡಗು.

73. Cattle-fair, Kulkunda. ಕುಳ್ಕುಂದ(ಸುಬ್ರಮಣ್ಯ)ದ ಜಾನುವಾರು ಸಂತೆ.



74. The Market day. ಸಂತೆ.

75. Govt. Fish curing yards, Malpe. ಮೀನಿನ ಅಂಗಣ.



77. Firewood for Export. ರಫ್ತಾಗಲಿರುವ ಕಟ್ಟಿಗೆ.



76. Exporting Tiles. ಹಂಚನ್ನು ವಿದೇಶಕ್ಕೆ ಸಾಗಿಸುವುದು



78. Huts of the Poor. ಬಡವರ ಗುಡಿಸಲು.

79. A Bungalow. ಶ್ರೀಮಂತರ ಮನೆ.



81. A Buffalœ Race. ಕಂಬಳದಲ್ಲಿ ಕೋಣನ ಓಟ.



80. Festival cars. ರಥೋತ್ಸವದಲ್ಲಿ.

82. A Cock-fight. ಕೋಳಿ ಪಡೆ.

83. Pariah Dance. ಹೊಲೆಯರ ಕುಣಿತ.

84. Yakshagana. ತಾಳಮದ್ದಲೆ.



85. The village Tank. ಊರ ಕೆರೆ.



86. Gomatraya, Karkal. ಕಾರ್ಕಳ ಗೋಮಟೇಶ್ವರ.



87. Manasthamba. ಮಾನಸ್ತಂಭ, ಹಿರಿಯಂಗಡಿ.



88. The Hall of Pillars. ಸ್ತಂಭರಾಜಿ ಮೂಡಬಿದಿರೆ ಬಸದಿ.



89. Jamalgad. ಜಮಾಲಗಡ.

90. Bekal Fort. ಬೇಕಲ ಕೋಟೆ.

91. A Street in Coondapoor. ಕುಂದಾಪುರದ ಒಂದು ಬೀದಿ.



92. Temple square, Udipi. ಮಠದ ಚೌಕ, ಉಡುಪಿ.

93. Down the Court-hill, Mangalore. ಮಂಗಳೂರಿನ ಒಂದು ನೋಟ.

94. Down the Gomata-hill, Karkal. ಕಾರ್ಕಳದ ಒಂದು ನೋಟ.

95. A Puttur view. ಪುತ್ತೂರಿನ ಒಂದು ನೋಟ.



96. St. Aloysius' College, Mangalore. ಸೈಂಟ್ ಎಲೋಸಿಯಸ್ ಕಾಲೇಜು, ಮಂಗಳೂರು.